ಕಯ್ಯಾರ ಕಿಞ್ಞಣ್ಣ ರೈ.

ಕಿರಿಯರ

ಪ್ರಪಂಚ

ಕೊದಲ್ಪಡಿ ಗ್ರಂಥಮಾಲೆ-ನುಡಿ ೨೨

ಅನ್ನದೇವರು
ಮತ್ತು
ಇತರ ಕಥೆಗಳು

ಕಯ್ಯಾರ ಕಿಞ್ಞಣ್ಣ ರೈ

ಕಿರಿಯರ ಪ್ರಪಂಚ, ಉಡುಪಿ

1-0-0

ವಿಕ್ರಯಾಧಿಕಾರಿಗಳು:
ನವಭಾರತ ಪುಸ್ತಕ ಭಂಡಾರ
ಉಡುಪಿ.

ಕೇಳಿದೊಡನೆ ನಮ್ಮ 'ತೊದಲ್ನುಡಿ ಗ್ರಂಥಮಾಲೆ'ಯು ಒಂದು ನುಡಿಯಾಗಿ ಹೊರಡಿಸಲು ತಮ್ಮ ಕತೆಗಳನ್ನು ಒಟ್ಟುಗೂಡಿಸಿ ಪ್ರೀತ್ಯಾಭಿಮಾನಗಳಿಂದ ಕೊಟ್ಟುದಕ್ಕಾಗಿ ಗೆಳೆಯ ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳಿಗೆ 'ಕಿರಿಯರ ಪ್ರಪಂಚ'ವು ಎಂದೆಂದಿಗೂ ಉಪಕೃತವಾಗಿದೆ.

'ಸ್ವದೇಶಾಭಿಮಾನಿ'ಯಲ್ಲಿ ಪ್ರಕಟವಾದ ಕೆಲವು ಕತೆಗಳನ್ನು ಇಲ್ಲಿ ಉಪಯೋಗಿಸಿಕೊಳ್ಳಲು ಸಮ್ಮತಿಯನ್ನಿತ್ತ ಅದರ ಸಂಪಾದಕರಿಗೂ 'ಪ್ರಪಂಚವು' ಋಣಿಯಾಗಿದೆ.

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ನನ್ನ ಮಾತು

ಅಲ್ಲಲ್ಲಿ ಪತ್ರಿಕೆಗಳಲ್ಲಿ ಆಗಾಗ ಬರೆದು ಪ್ರಕಟಿಸಿದ ಕೆಲವು ಕತೆಗಳನ್ನು, ನಾನೀಗ 'ಅನ್ನ ದೇವರು ಮತ್ತು ಇತರ ಕಥೆಗಳು' ಎಂಬ ಹೆಸರಿನಿಂದ ಇಲ್ಲಿ ಒಟ್ಟುಮಾಡಿ ಕೊಟ್ಟಿದ್ದೇನೆ.

ಜೀವನದಲ್ಲಿ ನಾನು ಕಂಡ ಕೆಲವು ನೋಟಗಳು, ನಾನು ಎದುರಿಸಿದ ಕೆಲವು ಸಮಸ್ಯೆಗಳು, ನಾನು ಪಡೆದ ಕೆಲವು ಅನುಭವಗಳು ಈ ಕತೆಗಳನ್ನು ಬರೆಯಲು ನನಗೆ ಪ್ರೇರಕವಾದುವು.

ಇಲ್ಲಿನ ಕೆಲವು ಕಥೆಗಳಿಗೆ ಹಿರಿಯ ಲೇಖಕರಿಂದ ನಾನು ಸ್ಫೂರ್ತಿಪಡೆದಿರುವೆನಾಗಿ ನಾನವರಿಗೆ ಋಣಿಯಿರುವೆನು.

ಇಲ್ಲಿ ಸಂಗ್ರಹಿಸಿರುವೀ ಕಥೆಗಳನ್ನು ಹಿಂದೆ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದ 'ಸ್ವದೇಶಾಭಿಮಾನಿ', 'ಅಂತರಂಗ', 'ಪ್ರಕಾಶಿನಿ', 'ನವಯುಗ' ಪತ್ರಿಕೆಗಳ ಸಂಪಾದಕರಿಗೆ ನಾನು ಕೃತಜ್ಞನು.

ಪುಸ್ತಕ ಪ್ರಕಾಶನಕ್ಕೆ ಹಲವು ವಿಧದ ತೊಂದರೆಗಳಿರುವೀ ಕಾಲದಲ್ಲಿ ನನ್ನೀ ಕಥಾಸಂಗ್ರಹವನ್ನು ಹೀಗೆ ಪುಸ್ತಕರೂಪದಲ್ಲಿ ಪ್ರಕಟಿಸಿದ ಶ್ರೀಮಾನ್ ಹೊನ್ನಯ್ಯ ಶೆಟ್ರ ಸಾಹಸವನ್ನೂ ಸಾಹಿತ್ಯಪ್ರೇಮವನ್ನೂ ನಾನು ಮೆಚ್ಚುತ್ತೇನೆ.

ಕಯ್ಯಾರ ಕಿಞ್ಞಣ್ಣ ರೈ.

ಅ...

ಕಥಾಸೂಚಿ

ಅನ್ನ ದೇವರು

ಜೋರಾಗಿ ಮಳೆಸುರಿಯುತ್ತಲೇ ಇತ್ತು. ನೀರೆಲ್ಲ ಒಳಗೇ ಬೀಳು ತ್ತಿದ್ದುದರಿಂದ, ಮುದುಕ ತನ್ನ ಹರಕು ಚಾಪೆಯನ್ನು ಮಡಚಿ ಎದ್ದು ಕುಳಿತುಕೊಂಡನು. ಮಳೆಯ ಹನಿಯು ಮತ್ತೂ ಒಳಗೆ ಬೀಳುತಿತ್ತು, ಚಾಪೆಯಿಂದೆದ್ದು, ತನ್ನ ಮುರುಕು ಗುಡಿಸಲಿನ ಕಂಡಿಯಿಂದ ಹೊರಗೆ ಇಣಿಕಿನೋಡಿದನು. ದೂರದಲ್ಲಿ ಕಾಣುತ್ತಿದ್ದ ಕಮ್ಮಾರ ಕೊಟ್ಟಿಗೆಯಲ್ಲಿ ಉರಿವ ಕೆಂಡದ ಜ್ವಾಲೆ ಸಿಡಿಯುತ್ತಿತ್ತು. ಕಮ್ಮಾರನು ಕಾದ ಕಬ್ಬಿಣ ವನ್ನು ತಿರಿಗಿಸಿ ತಿರಿಗಿಸಿ ಬಡಿಯುತ್ತಿದ್ದನು! ಕಿಡಿಯು ಸಿಡಿದು ಮೇಲೆ ಹಾರುತ್ತಿತ್ತು! ಸುತ್ತಿಗೆಯ ಪೆಟ್ಟು ಆಗ ಮತ್ತಷ್ಟು ಬಲವಂತವಾಗಿ ಬೀಳುತ್ತಿತ್ತು!

ಅಲ್ಲಿಂದ ಆತನ ದೃಷ್ಟಿಯು ವಿದ್ಯುತ್ ಪ್ರಕಾಶದಿಂದ ಜಗಜಗಿಸು ತ್ತಿರುವ ರಾಯರ ಮಾಳಿಗೆಯ ಮನೆಯ ಕಡೆಗೆ ಹೊರಳಿತು. ಆತನು ಕೆಲಸಮಾಡುತ್ತಿದ್ದ ಕಾರ್ಖಾನೆ ಮಾಲಕರು ಅವರು! ತುಂಬು ಯೌವನದ ಪುಷ್ಟಿಗೊಂಡ ಶರೀರವನ್ನು, ಎಡೆಬಿಡದ ದುಡಿತದಿಂದ ಅವರ ಆ ಕಾರ್ಖಾ ನೆಯಲ್ಲಿ ಆತನು ಸವೆದಿದ್ದನು! ಚಿಲ್ಲರೆ ನೆವನಕ್ಕಾಗಿ ಮೊನ್ನೆ ಸಂಜೆ ಆತನ ಇಳಿಪ್ರಾಯದಲ್ಲಿ ಕೆಲಸದಿಂದ ತೆಗೆದು ಹಾಕಿದ್ದರು! ಹೊರಗಿನ ಮಳೆಯು ನಿರರ್ಗಳವಾಗಿ ಬೀಳುತ್ತಿದ್ದಂತೆ, ಮುದುಕನ ಎರಡು ಕಣ್ಣುಗ ಳಿಂದಲೂ, ಕಂಬನಿಯು ಧಾರೆಧಾರೆಯಾಗಿ ಒಸರಿತು! ಆಗ, ಅಲ್ಲಿ ಮತ್ತೆ ನಿಲ್ಲುವುದಾಗದೆ, ತಿರಿಗಿ ಮೊದಲಿನ ಜಾಗದಲ್ಲಿಯೇ ಬಂದು ಕುಳಿತು ಕೊಂಡನು!

ಹೊಗೆಸೊಪ್ಪನ್ನು ಕೈಯ್ಯಲ್ಲಿ ತಿಕ್ಕೊಂಡು, ತಿಕ್ಕಿ ಬತ್ತಿಮಾಡಿ ಅದಕ್ಕೆ ಬೆಂಕಿಹಚ್ಚಿ ಜೋರಾಗಿ ಸೇದತೊಡಗಿದನು. ಅಂದಿನ ಆ

ಸಂಜೆಯ ಮೇಲೆ. ಅವನ ಎಲ್ಲಾ ಸಂಕಷ್ಟಗಳನ್ನೂ, ವಿಚಾರ ಸಾವಿರಗಳನ್ನು–ಆ ಬತ್ತಿಯ ಹೊಗೆಮಾತ್ರ ಪರಿಹರಿಸಿತ್ತು! ಬತ್ತಿಯ ತುದಿಯಿಂದ ಬೆಂಕಿಯೇಳುತ್ತಿದ್ದಂತೆ, ಆತನು ಕಪ್ಪು ಹೊಗೆಯನ್ನು ಸುರುಳಿಸುರುಳಿಯಾಗಿ ಉಗುಳುತ್ತಿದ್ದನು!

ಮನೆಯ ಒಂದು ಮೂಲೆಯಲ್ಲಿ ದೀಪವೊಂದು ಅರ್ಧಮರ್ಧ ಉರಿಯುತ್ತಿತ್ತು! ಅವನೊಡನೆ ಆ ಗುಡಿಸಲ ಒಳಗೆ ಇನ್ನೂ ಮೂರು ಜೀವಿಗಳು ಉಸಿರಿಡುತ್ತಿವೆಯೆಂಬ ವಿಚಾರವನ್ನೂ ಆತನು ಮರೆತೇ ಇದ್ದನು. ಅವನ ಹೆಂಡತಿ ಕುಳಿತಂತೆಯೇ ಗೋಡೆಗೆ ಒರಗಿ ನಿದ್ರಿಸುತ್ತಿದ್ದಳು. ಆತನ ಮಗಳು ಗಂಗಮ್ಮ–ವಿಧವೆ–ತಮ್ಮನ ಹರಿದು ಹರಿದು ಚೂರಾದ ಅಂಗಿಯನ್ನು ಹೊಲಿಯುತ್ತಾ ಇದ್ದಳು. ಹೊಲಿದಷ್ಟು ಅದು ಮುಗಿಯಲಾರದು! ಒಂದು ಬದಿಯಲ್ಲಿ ಸಣ್ಣ ಹುಡುಗನು ಆತನಿಗಾಗಿ ತಂದಿಟ್ಟಿದ್ದ ಗಂಜಿಯನ್ನು–ಹಸಿದಿದ್ದರೂ–ಉಣಲೊಲ್ಲೆನೆಂದು ಚಂಡಿಹಿಡಿದು ಅತ್ತೂ ಬಿದ್ದುಕೊಂಡಿದ್ದನು. "ಎರಡು ದಿವಸಗಳಿಂದ, ಅಪ್ಪ, ಅಮ್ಮ, ಅಣ್ಣ, ಅಕ್ಕ ನೀವು ಯಾರೂ ಗಂಜಿ ಉಂಡಿಲ್ಲ. ನೀವು ಉಣ್ಣದೆ ನಾನೂ ಉಣಲೊಲ್ಲೆ" ಹೀಗೆಂದು ದೊಡ್ಡ ದನಿಮಾಡಿ ಗಟ್ಟಿಯಾಗಿ ಕೂಗಿ, ಆ ಹುಡುಗನು ತಾಯಿಯ ಮಡಿಲ ಮೇಲೆ ಬಿದ್ದು ಅಳುತ್ತಾ ಇದ್ದನು. ಮುದುಕನಿಗೆ ತಲೆ ತಿರುಗುವಂತಾಗುತ್ತಿತ್ತು! ಈಗೊಮ್ಮೆ ಬತ್ತಿಯನ್ನು ಬಾಯಿಗಿಟ್ಟು ಗಟ್ಟಿಯಾಗಿ ಹೊಗೆ ಸೇದಿಕೊಂಡನು! ದೂರದ ಕಮ್ಮಾರಕಾದ ಕಬ್ಬಿಣವನ್ನು ತಿರಿಗಿಸಿ ತಿರಿಗಿಸಿ ಸುತ್ತಿಗೆಯಿಂದ ಬಲವಂತವಾಗಿ ಬಡಿಯುತ್ತಿದ್ದನು.

ಮನೆತುಂಬ ಕವಿದ ಬತ್ತಿಯ ಹೊಗೆಯು ಗಂಗಮ್ಮನನ್ನು ಕೆರಳಿಸಿತು. 'ನಾವೆಲ್ಲಾ ಹೊಟ್ಟೆಗೆ ಗಂಜಿತಿಳಿ ಇಲ್ಲದೆ ಸಾಯುತ್ತಿರುವಾಗ, ನಾಚಿಕೆಯಿಲ್ಲದೆ ಹೀಗೆ ಹೊಗೆ ಬಿಡುತ್ತಾಯಿದ್ದೀಯಲ್ಲಾ?' ಎಂದು ಗಂಗಮ್ಮ ಅಪ್ಪನನ್ನು ಹಂಗಿಸಿ ಬೈದಳು.

ಮುದುಕನು ಒಮ್ಮೆ ನಗಾಡಿದನು. ನಗು ಹೊಟ್ಟೆಯ ಆಳಲನ್ನು ಹೊರತೋಡಿ ತೋರಿಸುವಂತಿತ್ತು! ಗಂಡ ಸತ್ತು, ಇಲ್ಲಿಗೆಬಂದ, ಈ

ಮೂರು ವರ್ಷಗಳಲ್ಲಿ ಆಕೆಯ ಸಿಡುಕು ಸ್ವಭಾವವನ್ನು ಆತನು ಚನ್ನಾಗಿ ಗೊತ್ತುಮಾಡಿಕೊಂಡಿದ್ದನು! 'ನಿಜವಾಗಿ ಸರಲ ಸ್ವಭಾವದ ಹುಡುಗಿ, ಎಲ್ಲದಕ್ಕೂ ಸಿಡಿದು ಬೀಳುವಳು; ಮಕ್ಕಳು ಮರಿಗಳೂ ಇಲ್ಲ, ಪ್ರಪಂಚವೇ ಆಕೆಗೆ ಗೊತ್ತಿಲ್ಲ' ಹೀಗೆಂದು ಹೇಳಿಕೊಂಡು, ಪಾಪ! ಗಂಡನಲ್ಲದೆ ಪುತ್ರಿಗಾಗಿ ಆತನು ಬಹಳವಾಗಿ ಮರುಕ ಪಡುತ್ತಿದ್ದನು!

ತಂದೆಯ ಈ ಮೌನ, ನಿರ್ಲಕ್ಷ್ಯಭಾವಗಳನ್ನು ಕಂಡು ಗಂಗಮ್ಮನ ಸಿಟ್ಟು ಮತ್ತಷ್ಟು ಉದ್ರೇಕಗೊಂಡಿತು. ಒರಗಿದ್ದ ತಾಯಿಯ ರಟ್ಟೆ ಹಿಡಿದೆಬ್ಬಿಸಿ ಕೂಗಿದಳು.

"ಏನಮ್ಮಾ, ಈ ಹೊತ್ತು ಬೆಂಕಿ ಉರಿಸುವುದಿಲ್ಲವೇ?" ಗಂಗಮ್ಮ ಗುಡಿಗಿದಳು.

"ನನ್ನ ಎಲುಬನ್ನು ಹೊತ್ತಿಸಿ, ಮಾಂಸವನ್ನು ಬೇಯಿಸಿಕೊಡಲೇ?" ತಾಯಿ ಸಂಕಷ್ಟದಿಂದ ಹೇಳಿದಳು.

ಈ ಮಾತಿನಿಂದ ಆಕೆಯ ಕೋಪವು ನೆತ್ತಿಗೇರಿತು. ಅಂಗಿಯನ್ನೂ, ಸೂಜಿನೂಲುಗಳನ್ನೂ ಅಲ್ಲಿಯೇ ನೆಲಕ್ಕೆ ಎಸೆದು ಆಕೆ ಎದ್ದಳು! ಮುಖವು ಕೆಂಪಡರಿತ್ತು! ಕಠೋರವಾಗಿ ಎಲ್ಲರನ್ನೂ ಬೈದಳು.

"ಈ ಮಾರಿಗಳು ಒಮ್ಮೆ ಸಾಯಬೇಕು. ಈ ಬಡವರೆಲ್ಲಾ ಸತ್ತುಹೋಗಬೇಕು! ತಮ್ಮ ದನಿಗಳ ಮುಂದೆ ಮೊಣಕಾಲೂರಿ ಬೇಡಿ ಜೀವಿಸುವ ಹೇಡಿಗಳು ಇವರೆಲ್ಲಾ ಸತ್ತು ಸುಣ್ಣಾಗಬೇಕು! ನಾನು ಗಂಡುಸಾಗಿದ್ದರೆ, ಮೊದಲು ಐಶ್ವರ್ಯವಂತನೊಬ್ಬನ ಕೊರಳನ್ನು ಹಿಡಿದು ಹಿಂಡಿಬಿಡುತ್ತಿದ್ದೆನು! ಹಾಗೆ ಒಮ್ಮೆ ಮಾಡಿದರೆ ಮುಂದಕ್ಕೆಲ್ಲಾ ಸರಿಯಾಗಿ ನಡೆಯುತ್ತಿತ್ತು! ನೀವು........ಹೇಡಿಗಳು......ಸಾಯಬೇಕು......"

ಈ ಮಾತನ್ನು ಕೇಳಿ ಮುದುಕನು ಚನ್ನಾಗಿ ನಕ್ಕುಬಿಟ್ಟನು! ಆಕಾಶದ ಗುಡುಗು, ಹೊರಗಿನ ಜೋರಿನ ಮಳೆಯ ಧ್ವನಿ, ದೂರದ ಕಮ್ಮಾರನ ಬಲವಂತವಾದ ಬಡಿತ ಇವುಗಳು ಆತನ ಅಟ್ಟಹಾಸಕ್ಕೆ ಸಮ್ಮೇಳ ಕೂಡಿಸಿದವು!

"ಹುಚ್ಚು ಹುಡುಗಿ! ಹಿಂಸೆಯಿಂದ ಎಂದಿಗೂ ನ್ಯಾಯ ಮತ್ತು ಸುಖಗಳು ದೊರಕಲಾರವು" ಆತನು ಹೇಳಿದನು. "ದೊರಕುವುದು... ಖಂಡಿತ ದೊರಕುವುದು" ಗಂಗಮ್ಮ ರುದ್ರ ಸ್ವರದಿಂದ ಮಾರ್ನು ಡಿಯಿತ್ತಳು!

ಇನ್ನು ಆಕೆಯನ್ನು ಮಾತನಾಡಿಸುವುದೇ ಬೇಡವೆಂದು ಮುದುಕನು ಹರಕು ಕಂಬಳಿಯನ್ನು ಗಟ್ಟಿಯಾಗಿ ಹೊದ್ದುಕೊಂಡು ಗೋಡೆಗೆ ಆತು ಕುಳಿತುಕೊಂಡನು. ದೀಪದ ಬತ್ತಿ ಗಾಳಿಗೆ ಅತ್ತಿತ್ತ ಚಲಿಸುತ್ತಿತ್ತು! ಕಮ್ಮಾರನ ಸುತ್ತಿಗೆಯ ಪೆಟ್ಟು ಇನ್ನೂ ಕೇಳುತ್ತಿತ್ತು!

'ಈ ಹಣವಂತರು, ಈ ಧನಿಗಳು, ಎಲ್ಲ ಕಲ್ಲೆದೆಯ ಪಾಪಿಗಳು. ಕರುಣೆಯಿಲ್ಲದ ರಕ್ಕಸರು. ಅವರ ದೆಸೆಯಿಂದ ನಾವು ಹೀಗೆ ಉಪವಾಸ ಬಿದ್ದು ಸಾಯಬೇಕು" ಗಂಗಮ್ಮ ಗೊಣಗುತ್ತಿದ್ದಳು.

"ನಮಗೇನು ಗೊತ್ತು ಮುಂದಿನ ಮಾರ್ಗ? ದೇವರು ಒಂದು ದಾರಿ ತೋರಿಸುತ್ತಾನೆ" ಬಾನಿನೆಡೆಗೆ ಕೈತೋರಿಸಿ ಮುದುಕನು ಹೇಳಿದನು.

"ಕೈಕಟ್ಟಿ ಕುಳಿತ ಹೇಡಿಗಳಿಗೆ, ಈ ಹಣವಂತರ ಕಾಲಮಣೆಗೆ ಹಣೆತಿಕ್ಕಿ ನೆತ್ತರು ಸುರಿಸಿಕೊಂಡ ರಣಹೇಡಿಗಳಿಗೆ ದೇವರು ಸ್ಮಶಾನ ಕಡೆಗೆ ಮಾತ್ರ ದಾರಿ ತೋರಿಸುತ್ತಾನೆ!" ಗಂಗಮ್ಮ ಅರಚಿದಳು.

ಆಕೆಯೊಡನೆ ಮುಂದೆ ವಾದಮಾಡುವ ತಾಳ್ಮೆ ಮುದುಕನಿಗೆ ಇರ ಲಿಲ್ಲ. ಮತ್ತೊಮ್ಮೆ, ಕುಳಿತಲ್ಲಿಂದ ಎದ್ದು ಮುದುಕನು ಕಂಡಿಯಿಂದ ಹೊರಇಣಿಕಿ ನೋಡಿದನು. ದೂರದಲ್ಲಿ ಆತನ ಮಗ ಬೋರ ಮಳೆಗೆ ನೆನೆದುಕೊಂಡೇ ಮನೆಯ ಕಡೆಗೆ ಓಡಿಬರುತ್ತಿದ್ದನು.

"ನೀನು ಉಣ್ಣುವುದಿಲ್ಲವೇ ಮಗೂ? ಸ್ವಲ್ಪ ತಿಳಿಯಾದರೂ ಕುಡಿ ಮುದ್ದು" ಹೀಗೆಂದು ಹೇಳಿ, ಒಳಗಡೆ ಆತನ ಹೆಂಡತಿ ಸಣ್ಣ ಮಗುವನ್ನು ಉಣಲು ಒತ್ತಾಯ ಪಡಿಸುತ್ತಿದ್ದಳು.

"ನೀನು, ಅಪ್ಪ, ಅಕ್ಕ ಅಣ್ಣ ಎಲ್ಲ ಯಾತಕ್ಕೆ ಉಣ್ಣುವುದಿಲ್ಲವಮ್ಮಾ? ನಿಮ್ಮೊಡನಲ್ಲದೆ ನಾನು ಬೇರೆ ಊಟಮಾಡಲಾರೆ" ಹೀಗೆ ಹೇಳಿ,

ತಾಯಿಯ ಕೊರಳಿಗೆ ಜೋತು ಹುಡುಗನು ಅಳಲು ಆರಂಭಿಸಿದನು. ಹೆತ್ತ ಕರುಳಿಗೆ ಇದರಿಂದ ಇರಿದಂತಾಯಿತು!

ಆ ಕಾರ್ಖಾನೆ--ಅಲ್ಲಿ ಆರಂಬವಾದ ವರ್ಷವೇ, ತನ್ನ ತುಂಬುಹರೆಯದಲ್ಲಿ ಆತನು ಕೆಲಸಕ್ಕೆ ಸೇರಿದ್ದನು. ಆವರು ಕೊಡುತ್ತಿದ್ದ ಚಿಲ್ಲರೆ ಸಂಬಳದಲ್ಲಿಯೇ ತೃಪ್ತಿಪಟ್ಟುಕೊಂಡಿದ್ದುದರಿಂದ, ಒಂದು ಚಿಕ್ಕಾಸೂ ಉಳಿಸುವುದು ಆತನಿಂದ ಆಗಲಿಲ್ಲ. ಮೊನ್ನೆ ಸಂಜೆ ಆತನನ್ನು ಹೀಗೆ ಹೊರಹಾಕಿದರು. ಈ ವಿಚಾರವು ಮುದುಕನ ತಲೆಗೆ ಬಂದಾಗ ಆತನು ಹುಚ್ಚನಂತಾದನು. ಕೊರಳ ಸೆರೆಗಳು ಬಿಗಿದು ಬಂದುವು!

ಚಂದವಾದ ಹೊಸ ಬಟಾಟೆಯ ರಾಶಿರಾಶಿಯನ್ನು ಕಾರ್ಖಾನೆಗೆ ತರುತ್ತಿದ್ದರು. ತಮಗೆ ಬೇಕಾದುದನ್ನೆಲ್ಲಾ ಅದರಿಂದ ಹಿಂಡಿ ಹಿಚುಕಿ ತೆಗೆದು, ಅದರಿಂದ ಬೇಕಾದುದನ್ನೆಲ್ಲಾ ಮಾಡಿ ರುಚಿಯಾದ ಪಾಕಗಳನ್ನು ತಯಾರಿಸಿ, ಕಡೆಗೆ ಉಳಿದ ಹಾಳು ಕಸವನ್ನು ಹೊರಗೆ ಎಸೆದು ಬಿಡುತ್ತಿದ್ದರು. ಆತನು ಈ ರೀತಿಯನ್ನು ಕಾರ್ಖಾನೆಯಲ್ಲಿ ಕಂಡಿದ್ದನು. ಕಾರ್ಖಾನೆಯ ಹೃದಯಶೂನ್ಯತೆಯಂತೆ, ಅದರ ಮಾಲಿಕರದ್ದೂ ಇರಬೇಕು ಅನ್ನಿಸಿತು ಅವನಿಗೆ!

ಅಷ್ಟರಲ್ಲಿ ಬಾಗಿಲನ್ನು ನೂಕಿ ಬೋರನೂ ಒಳಗೆ ಬಂದನು. ಕೊಡಲಿಯನ್ನು ಹೆಗಲ ಮೇಲಿಂದ ಇಳಿಸಿ, ಒಂದು ಒಣಗಿದ ಹರಕು ಬಟ್ಟೆ ತೆಗೆದು ಕೊಂಡು ಒದ್ದೆಯಾದ ತಲೆ ಮೈ ಕೈಕಾಲುಗಳನ್ನೆಲ್ಲಾ ಒರಸಿಕೊಂಡನು.

"ಇಡೀ ದಿನ ಕ್ಷಣ ಹೊತ್ತೂ ಮಳೆ ಹನಿಕಟ್ಟಲೇ ಇಲ್ಲ. ಹಾಗಾಗಿ ಕಟ್ಟಿಗೆ ಸಿಗಿಯುವ ಕೆಲಸವು ಎಲ್ಲಿಯೂ ಸಿಗಲಿಲ್ಲ..." ನಿಟ್ಟುಸಿರು ಬಿಟ್ಟು ಬೋರ ಹೇಳಿದನು.

"ನಿನಗೆ ಆಯಾಸವಾಗಿದೆ, ಮೊದಲು ಸ್ವಲ್ಪ ತೆಳಿಕುಡಿ" ಗಂಗಮ್ಮ ಹೇಳಿದಳು. ಅದಕ್ಕೆ ಉತ್ತರ ಹೇಳದೆ ಬೋರ, ಒಲೆಯ ಹತ್ತಿರ ಬಂದು, ಬೆಂಕಿಯ ಮೇಲೆ ತನ್ನ ಕೈಗಳನ್ನು ಹರಡಿ, ಚಳಿಯಿಂದ ನಡುಗುತ್ತಿದ್ದ ತನ್ನ ಮೈಯ್ಯನ್ನು ಕಾಯಿಸತೊಡಗಿದನು.

ಗಂಗಮ್ಮ ಆತನ ಬಳಿಗೆ ಬಂದು ಮಾತನಾಡ ತೊಡಗಿದಳು. ''ರಾಯರ ಬಂಗ್ಲೆಯ ಬೆಳಕನ್ನು ನೋಡು! ಆ ಮಾಳಿಗೆಯೊಳಗೆ ಇನ್ನೂ ದೀಪ ಉರಿಯುತ್ತಿದೆ. ಅದು ರಾಯರ ಮಗ ಮಲಗುವ ಕೋಣೆ. ಮಾಳಿಗೆಯ ಎಡಬದಿಯ ಎರಡನೆಯ ಕೋಣೆ....''

"ಅದರಿಂದೆಲ್ಲಾ ಏನಾಗಬೇಕು?" ಜೋರ ಕೇಳಿದನು.

"ನೀನು ಬಂಗ್ಲೆಯ ಹಿಂಬದಿಯಿಂದ ಹೋಗಿ, ಗೋಡೆ ಹಾರಿ ಒಳಗೆ ಹೋಗಿ, ಮಾಳಿಗೆಗೆ ಹತ್ತಿ, ಆ ಕೋಣೆಗೆ ಹೊಕ್ಕು............ ನೀನು.........ಹೋಗು ಸಿಕ್ಕಿದರೆ ಏನಾದರೂ ಅಲ್ಲಿಂದ ತೆಕ್ಕೊಂಡು ಬಾ".

ಮುದುಕನಿಗೆ ಈ ಮಾತುಗಳು ಕೇಳಿಸಿದುವು.

"ರಕ್ಕಸಿ! ಕಳ್ಳತನ! ನನ್ನ ಮಗ ಕದ್ದುಕೊಳ್ಳುವುದೆ? ಮರ್ಯಾದೆ ಕೆಟ್ಟ ಕೆಲಸ! ಹಾಗೆ ಮಾಡುವುದಕ್ಕಿಂತ ನಾವು ಸಾಯಬಹುದು........ ಅಂತಹ ಕೆಲಸ......".

"ಇಲ್ಲ....ನಾವು ಸಾಯಬಾರದು. ಐಶ್ವರ್ಯವಂತರು ಮಾಡುವ ಅನ್ಯಾಯುಗಳಿಗಾಗಿ ಬಡವರು ಖಂಡಿತ ಸಾಯಬಾರದು. ತನ್ನ ತಂದೆ ತಾಯಿ ಕುಟುಂಬವನ್ನೆಲ್ಲಾ ಹೀಗೆ ಉಪವಾಸ ಹಾಕಿದವರ ಮನೆ ಹೊಕ್ಕು ಆತ ಸುಲಿಗೆ ಮಾಡಿ ತರಬೇಕು...'' ಗಂಗಮ್ಮ ಗರ್ಜಿಸಿದಳು.

ಮುದುಕ ಗೋಡೆಗೆ ಒರಗಿಕೊಂಡು ಅವಳನ್ನು ಶಪಿಸತೊಡಗಿದನು!

ಗಂಗಮ್ಮ ಜೋರನೊಡನೆ ಅಲ್ಲಿಂದ ಹೊರಬಂದಳು. "ತಮ್ಮಾ, ಅಂಜಬೇಡ. ಹೊಟ್ಟೆಗಿಲ್ಲದೆ ಸಾಯುವ ಬಡವರು, ದೊಡ್ಡವರನ್ನು ಸುಲಿಯುದೊಂದೇ ದಾರಿ! ಕಡುಗತ್ತಲೆ....ಯಾರೂ ನೋಡುವುದಿಲ್ಲ....ಓಡು ....''!

ಜೋರ್ಗರೆಯುತ್ತಿದ್ದ ಮಳೆಗೆ ದುಮುಕಿ ಜೋರನು ಕಣ್ಮರೆಯಾದನು. ಗಂಗಮ್ಮ ಕೆಲಹೊತ್ತು ಆ ಕಡೆಯೇ ನೋಡುತ್ತಿದ್ದಳು. ಮತ್ತೆ ಒಳ ಬಂದು, ಕಿರಿಗಿ ದೀಪದ ಬೆಳಕಿನಲ್ಲಿ ತಮ್ಮ ಹರಿದ ಅಂಗಿ

ಯನ್ನು ಹೊಲಿಯಲು ಸುರುಮಾಡಿದಳು. ಹೊಲಿದಷ್ಟೂ ಅದರ ತೂತು ಮುಗಿಯುವ ಹಾಗೆ ಇರಲಿಲ್ಲ.

ಹುಡುಗನು, ಗೋಡೆಯ ಮೇಲೆ ತೂಗಹಾಕಿದ್ದ ಹಿಂದೂದೇಶದ ಹರಕು ಚಿತ್ರಪಟವನ್ನು ನೋಡಿದನು. ಅದು ಮಸಿಗೆ ಕಪ್ಪಾಗಿ ಮಳೆಗೆ ಒದ್ದೆಯೂ ಆಗಿಹೋಗಿತ್ತು!

"ನನ್ನ ಹಿಂದೂದೇಶ! ಅಯ್ಯೋ ಈಗ ಎಷ್ಟು ಹಾಳಾಗಿದೆ! ನಾನ ದನ್ನು ಇನ್ನು ಸರಿಮಾಡಬೇಕು" ಹೀಗೆಂದು ಹೇಳಿ ಸುಣ್ಣದ ಕಡ್ಡಿಯಿಂದ ಪಟದ ಮೇಲೆ ಬರೆಯಲಿಕ್ಕೆತೊಡಗಿದನು! ಮುದುಕನು ಗಾಂಜಾ ಸೇದು ತ್ತಿದ್ದನು. ತಾಯಿ ಗೋಡೆಗೆ ಒರಗಿ ನಿದ್ರಿಸುತ್ತಿದ್ದಳು. ಗಂಗಮ್ಮ ಬಟ್ಟೆ ಹೊಲಿಯುತ್ತಿದ್ದಳು! ಕಮ್ಮಾರ ಕಬ್ಬಿಣದ ಮೇಲೆ ಬಲವಂತ ವಾಗಿ ಬಡಿಯುತ್ತಿದ್ದನು. ಗುಡುಗು ಮಿಂಚು ಸಿಡಿಯುತ್ತಿತ್ತು! ಮಳೆ ಸುರಿಯುತ್ತಿತ್ತು. ಚೋರ ರಾಯರ ಬಂಗ್ಲೆಯ ಕಡೆಗೆ ಧಾವಿಸುತ್ತಿದ್ದನು.

ರಾಯರ ಬಂಗ್ಲೆಯ ಹಿಂಬದಿಯ ಗೋಡೆ ಹಾರಿ, ಚೋರನು ಮಾಳಿಗೆಯ ಮೆಟ್ಟಲಿಗೆ ಬಂದು ನಿಂತನು. ಎಲ್ಲೆಲ್ಲೂ ಕತ್ತಲು! ಹೊರ ಗಿನ ಮಳೆಯ-ಒಳಗಿನ ಎದೆಗುಂಡಿಗೆಯ-ಈ ಎರಡು ಶಬ್ದಗಳು ಮಾತ್ರ ಚೋರನಿಗೆ ಎಡೆಬಿಡದೆ ಕೇಳಿಸಿ ಭಯ ಹುಟ್ಟಿಸುತ್ತಿತ್ತು. ಮಾಳಿಗೆಯ ಮೆಟ್ಟಲೇರಿ ಬಂದನು. ವಿದ್ಯುತ್ ಶಕ್ತಿಯ ಬೆಳಕು ಒಳಗೆ ಉರಿಯು ತ್ತಿತ್ತು! ಬಾಗಿಲು ಅಗಲವಾಗಿ ತೆರೆದಿತ್ತು. ಆತನ ಎದೆಯು ಜೋರಾಗಿ ಬಡಿಯ ತೊಡಗಿತು! ಧೈರ್ಯಮಾಡಿಕೊಂಡು ಒಳಗೆ ಕಾಲಿಟ್ಟನು. ನೋಡುತ್ತಾನೆ! ರಾಯರ ಮಗನಿಗೆ ನಿದ್ರೆ ಹತ್ತಿತ್ತು! ಸುತ್ತ ಸಾವಿ ರಾರು ವಸ್ತುಗಳಿವೆ. ಒಂದು ಕಡೆ ಸರ್ಜ ಕೋಟೊಂದು ತೂಗಹಾಕಿತ್ತು. ಒಮ್ಮೆ ಅದನ್ನು ತೊಟ್ಟು, ಸಂತೋಷದಿಂದ ಕುಣಿದು ಕುಣಿದು, ಆ ಆನಂದದಿಂದಲೇ ಸತ್ತುಬಿಡೋಣ ಎನ್ನಿಸಿತು. ಹೊಟ್ಟೆಯ ಹಸಿವೆ, ಮನೆಯ ನೆನಪು, ಕೂಡಲೇ ತಲೆಸುತ್ತು ಬಂದು ನಿಂತಿತು.

ಮೇಜಿಯ ಮೇಲೆ ಮೂರು ನಾಲ್ಕು ತಟ್ಟೆಗಳಲ್ಲಿ ಬೇರೆ ಬೇರೆ ತರದ ತಿಂಡಿ ತಿನಸು ಹಣ್ಣು ಹಂಪಲಗಳು ಇಟ್ಟಿದ್ದುವು. ಚೋರ ಆ ಕಡೆ

ಸರಿದು, ತಿಂಡಿ ತಿನಸುಗಳಿಂದ ತನ್ನ ಬಾಯಿ, ಅಂಗಿಯ ಚೀಲ ಇವು ಗಳನ್ನೆಲ್ಲಾ ತುಂಬಿಸಿಕೊಂಡನು. ಅಷ್ಟಾದ ಮೇಲೆ, ಮೆಲ್ಲನೆ ಎದ್ದು ಬಂದು ಸರ್ಜು ಕೋಟಿನ ಕಿಸೆಗೆ ಬೋರ ಮೆಲ್ಲನೆ ಬೆರಳು ಹಾಕಿದನು. ಆ ಚಳಿಯಲ್ಲಿಯೂ ಆತನ ಮೈ ಒಮ್ಮೆ ಆದ್ಯಂತ ಬೆವರಿಹೋಯಿತು! ಹಣದ ಚೀಲವನ್ನು ಮೆಲ್ಲನೆ ಆದರಿಂದ ಎತ್ತಿ, ಕೈಯ್ಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ಕೋಣೆಯಿಂದ ಕೆಳಗೆ, ಕಂಪೌಂಡಿನಿಂದ ಹೊರಗೆ ಬಿದ್ದ ವನೇ ಗಾಳಿಯಲ್ಲಿ ಸವಾರಿಮಾಡುವವನಂತೆ ಮನೆಯ ಕಡೆಗೆ ಧಾವಿಸಿ ಬಂದನು.

ಒಲೆಯ ಬೆಂಕಿಯ ಬಳಿ, ಮಿಣುಕು ದೀಪದ ಬೆಳಕಿನಲ್ಲಿ ಎಲ್ಲರೂ ಕುಳಿತು ಕೊಂಡರು. ಬೋರನು ಗಂಟುಬಿಚ್ಚಿದನು. ಬಗೆಬಗೆಯ ತಿಂಡಿ, ಹಲವಾರು ತಿನಸುಗಳು; ಹಣ್ಣು ಹಂಪಲುಗಳು; ಎಲ್ಲರ ಬಾಯಲ್ಲಿ ಯೂ ನೀರೂರಿಸಿತು!

ಮುದುಕ ಒಮ್ಮೆ ತನ್ನ ಹೆಂಡತಿಯ ಕಡೆಗೆ ನೋಡಿದನು! ದೊಡ್ಡ ಮಿಂಚೊಂದು ಹೊರಗಣ ಕತ್ತಲೆಯನ್ನು ಭೇದಿಸಿತು! ಎಲ್ಲರೂ ತಮ್ಮ ತಮ್ಮ ಬಾಯನ್ನು ತುಂಬಿಸಿಕೊಂಡಿದ್ದರು!

ಗಂಗಮ್ಮ ಹೇಳಿದಳು. "ಎಂತಹ ಮರ್ಯಾದೆ ಕೆಟ್ಟಕೆಲಸ!" ಬೋರ, ಗಂಗಮ್ಮ, ಇವರೊಡನೆ ಹುಡುಗ, ಹೀಗೆ ಮೂವರೂ ಗಟ್ಟಿಯಾ ಗಿ ನಕ್ಕರು! ಮುದುಕ ತನ್ನ ಹೆಂಡತಿಯ ಮುಖನೋಡಿ ಸಿಟ್ಟಿನಿಂದ ಮಕ್ಕಳನ್ನು ಶಪಿಸುತ್ತಾ, ಹೊಟ್ಟೆ ತುಂಬಿಸಿ ಕೊಂಡನು!

ಪ್ರೇಮಾಗ್ನಿ

ಬಹುದಿನಗಳಿಂದ ಲಾಹೋರಿಗೆ ಹೋಗುವ ಸಿದ್ಧತೆ ಆಕೆ ಮಾಡು ತ್ತಿದ್ದಳು. ಉತ್ತಮವಾದ ಸೀರೆಗಳನ್ನು ಚೆಲುವಾಗಿ ಒಪ್ಪುವ ಅನೇಕ ಆಭರಣಗಳನ್ನೆಲ್ಲಾ ಆಕೆ ಪ್ರತ್ಯೇಕ ತೆಗೆದಿಟ್ಟಳು. 'ಬೆಳ್ಳಿ ಜರಿಯ ಬಂಗಾರದ ಬಣ್ಣದ ಸೀರೆಯನ್ನು ಬೇರೆ ಇಟ್ಟಿದ್ದೀಯಾ?' ಜೆಬುನ್ನೀಸಾ ಸೇವಕಳೊಡನೆ ಕೇಳಿದಳು.

'ಹೌದು ತಾಯೇ', ಸೇವಕಳು ಉತ್ತರವಿತ್ತಳು. 'ಲಾಹೋರಿಗೆ ಹೋಗುವ ಕುರಿತು ನೀನು ಬಹಳ ಸಂಭ್ರಮಗೊಂಡಂತಿದೆ. ನಿನ್ನ ಈ ಅಪೂರ್ವ ಉತ್ಸುಕತೆಯನ್ನು ನೋಡಿದವರು ಯಾರಾದರೂ, 'ನೀನು ನಿನ್ನ ಪ್ರಣಯಿಯೋರ್ವನನ್ನು ಅಲ್ಲಿ ಸಂದರ್ಶಿಸಲು ಹೋಗುವಿಯೋ' ಎಂದು ಕೇಳುವಂತಿದೆ'. ಸೇವಕಳ ಈ ನಗೆಯ ಮಾತಿನಿಂದ ಮೊಗಲ ರಾಜ ಕುಮಾರಿಯು, ಆಕೆ ತನ್ನನ್ನು ಹೀಗೆ ಅಣಕವಾಡಿದಳೆಂದು ತಿಳಿದು ನಾಚಿ ಕೆನ್ನೆ ಕೆಂಪಗೆಮಾಡಿಕೊಂಡಳು.

ಜೆಬುನ್ನಿಸಳು ನಿಜವಾಗಿಯೂ ಬಹಳ ಸಂಭ್ರಮದಿಂದಲೇ ಲಾಹೋರಿಗೆ ಹೊರಡುವ ಸಿದ್ಧತೆಮಾಡಿಕೊಂಡಿದ್ದಳು. ಆದರೆ ರಾಜ ಕುಮಾರಿಯ, ಆ ಪ್ರಫುಲ್ಲ ಸುಂದರಿಯ, ಪ್ರಣಯ ವಿಚಾರವು ಸೇವಕಳಿಗೆ ಹೇಗೆ ತಿಳಿಯಬೇಕು? ನಗೆ ಮಾತಿನಿಂದ ಜೆಬುನ್ನೀ ನಾಚಿಕೊಂಡಳೇನೋ ನಿಜ. ತನ್ನ ನಲ್ಲನನ್ನು, ತನ್ನ ಪ್ರಣಯಪಾತ್ರನಾದ ಅಖಿಲ್‌ಖಾನ ನನ್ನು ಲಾಹೋರಿನಲ್ಲಿ ಸಂದರ್ಶಿಸುವ ಸಂತೋಷವೊಂದೇ ಅವಳ ಹೃದಯ ವನ್ನು ತುಂಬಿತ್ತು. ಲಾಹೋರಿನ ಆಡಳಿತದಲ್ಲಿ ತನ್ನ ತಂದೆಯಿಂದ ನೇಮಿತನಾದ ಆ ಸುಂದರ ತರುಣ ಅಖಿಲನ ಪ್ರೇಮಪೂರ್ಣದೃಷ್ಟಿಯಿಂದ ಹಿಂದೆ ಆಕೆ ಮುಗ್ಧಳಾಗಿದ್ದಳು. ಭಾವನಾರಾಜ್ಯದಲ್ಲಿ ಅದೇ ದಿವ್ಯ ಸ್ವಪ್ನ ಗಳನ್ನು ಕಲ್ಪಿಸುತ್ತಾ, ಆಕೆ ಲಾಹೋರಿಗೆ ಹೋಗುವ ಕುರಿತು ಅಷ್ಟೊಂದು ಸಂಭ್ರಮಗೊಂಡವಳಾಗಿ ಉತ್ಸುಕಳಾಗಿ ಇದ್ದಳು.

ಆಕೆಯು ತನ್ನ ಪ್ರೇಮಮುಗ್ಧ ದೃಷ್ಟಿಯಿಂದ ತನ್ನೆದೆಯ ನಲ್ಮೆಯನ್ನು ಆತನಿಗೂ ತಿಳಿಸಿದ್ದಳು. ಆದರೆ ಒಮ್ಮೆಯೂ ನಲ್ಮೆಯ ನುಡಿಗಳನ್ನು, ಪ್ರೇಮ ಸಂಭಾಷಣೆಗಳನ್ನು ಆಡಿಕೊಳ್ಳುವ ಸುಯೋಗ ಅವರಿಬ್ಬರಿಗೂ ಒದಗಿರಲಿಲ್ಲ. ಯಾವ ಪ್ರೇಮಮಯ ಸನ್ನಿವೇಶದಲ್ಲಿ ಯಾವ ಸುಂದರ ಸ್ಥಳದಲ್ಲಿ, ಯಾವ ಮನೋಹರ ಪ್ರೇಮಪೂರ್ಣ ದೃಷ್ಟಿಯ ಕಿರಣಗಳಿಂದ ತನ್ನ ಪ್ರೇಮಪಕ್ವ ಹೃದಯ ಕುಸುಮವು ವಿಕಾಸಗೊಂಡಿತ್ತೋ, ತಿರುಗಿ ಒಮ್ಮೆ ಅದೇ ಸನ್ನಿವೇಶಕ್ಕೆ, ಅದೇ ಸ್ಥಳಕ್ಕೆ ಹೋಗಿ ಪ್ರೇಮ ಸಂಭಾಷಣೆ ಮಾಡಬೇಕೆಂಬ ಸಂತೋಷದ ವಿಚಾರದಿಂದ ಜೆಬುನ್ನೀಸಳ ಹೃದಯವು ಉದ್ವೇಗಗೊಂಡಿತ್ತು.

ಸಿದ್ಧತೆಗಳೆಲ್ಲಾ ಸಾಂಗವಾದವು. ಅವರು ಲಾಹೋರಿಗೆ ಹೊರಟು ಹೋದರು. ಮೊಗಲ್ ಬಾದಶಹನಾದ ಅವರಂಗಜೇಬನೂ ತನ್ನ ಪ್ರೀತಿಯ ಕುಮಾರಿ ಜೆಬುನ್ನೀಸಳೊಡನೆ ಲಾಹೋರನ್ನೊಮ್ಮೆ ಸಂದರ್ಶಿಸಿ ಬರಲು ಹೊರಟಿದ್ದಾನೆ. ದಾರಿಯುದ್ದಕ್ಕೂ ಮೊಗಲ್ ಬಾದಶಹನಿಗೆ ಸಂಭ್ರಮದ ಸ್ವಾಗತ ಸತ್ಕಾರಗಳಾದವು. ಲಾಹೋರಿನ ರಾಜದ್ವಾರದ ಬಳಿ ಅವರಂಗಜೇಬ್ ಮತ್ತು ಅವನ ಪರಿವಾರವನ್ನು ಅಖಿಲ್‌ಖಾನನೇ ಬಂದು ವಿವಿಧ ವಾದ್ಯ ಸಂಗೀತ ಸಮ್ಮೇಳನದಿಂದ ಸ್ವಾಗತಿಸಿದನು.

ಬಂಗಾರದ ಬಣ್ಣದ ಸೀರೆಯ ಮುಖದ ಆವರಣದೆಡೆಯಿಂದ ಅಖಿಲನನ್ನು ಒಂದು ಸುಂದರ ಸ್ತ್ರೀದೃಷ್ಟಿಯು ಎವೆಯಿಕ್ಕದೆ ನೋಡುತಿತ್ತು. ಬಾದಶಹನ ಪರಿವಾರವನ್ನು ಸ್ವಾಗತಿಸಿ, ವಾಸಸ್ಥಳಕ್ಕೆ ತರುತ್ತಿದ್ದಂತೆ, ಅಖಿಲ್‌ಖಾನನು ತಾನು ಯಾವುದೋ ಒಂದು ಕನಸಿನ ಲೋಕದಲ್ಲಿ, ಗಾಳಿಯ ಮೇಲೆ ತೇಲಾಡಿ ನಡೆದುಹೋಗುತ್ತಿದ್ದ ಸುಖವೊಂದನ್ನು ಅನುಭವಿಸುತ್ತಿದ್ದನು.

ಜೆಬುನ್ನೀಸಳು ರಾತ್ರಿಯಿಡೀ ನಿದ್ರಾಹೀನಳಾಗಿ ವಿಶ್ರಾಂತಿಯಿಲ್ಲದೆ ಹೂತೋಟದಲ್ಲಿ ಅತ್ತಿತ್ತ ಸಂಚರಿಸುತ್ತಿದ್ದಳು. ಬಾನಿನಲ್ಲಿ ಚಂದ್ರಮನು ಬೆಳಗಿದ್ದನು. ಪ್ರಕೃತಿಯು ನಿತಾಂತ ಪ್ರಶಾಂತ ರಮಣೀಯವಾಗಿತ್ತು. ತನ್ನ ಹೃದಯದ ಪ್ರೇಮ ನಿರ್ಭರತೆಯನ್ನು, ಪ್ರಣಯ ವಲ್ಲಭನಿಗೆ

ತಿಳಿಸಲು ಆಕೆ ಸ್ವತಃ ಕವನಗಳನ್ನು ಕಟ್ಟಿ ಮಂದಸ್ನಿಗ್ಧವಾಗಿ ಹಾಡು ತ್ತಿದ್ದಳು. ಒಂದು ಭವ್ಯ ಆಕೃತಿಯ ನೆಳಲು ಅವಳ ಮುಂದೆಬಿತ್ತು!

ನಿಮಿಷದಲ್ಲಿಯೇ ಕೂಲಿಗಾರರ ಉಡುಪು ತೊಟ್ಟ ಮನೋಹರ ತರುಣನು ಆಕೆಯ ಎದುರು ನಿಂತಿದ್ದನು.

ಅದು ಅಖಿಲ್‌ಖಾನನೇ ಎಂದು ತಿಳಿದಾಗ ಆಕೆಗೆ ಆದ ಆನಂದಕ್ಕೆ ಪಾರವೇ ಇರಲಿಲ್ಲ.

ಮಂತ್ರಮುಗ್ಧಳಂತೆ ಆತನನ್ನು ಎವೆಯಿಕ್ಕದೆ ನೋಡಿದಳು. ಪ್ರೇಮ ವು ಇಬ್ಬರನ್ನೂ ಮೂಕರನ್ನಾಗಿ ಮಾಡಿತ್ತು. ಆದರೆ ಅವರ ನೋಟಗಳು ಪ್ರೇಮ ಸಂಭಾಷಣೆಯಲ್ಲಿ ತಲ್ಲೀನವಾಗಿದ್ದವು.

'ಅಖಿಲ್, ನಿನ್ನನ್ನು ಕಂಡು ಆನಂದವಾಗಿದೆ' ಜೆಬುನ್ನೀಸಳೇ ಮಾತು ಸುರುಮಾಡಿದಳು.

'ಇದು ನನ್ನ ಜೀವನದಲ್ಲಿ ಅಮಿತ ಆನಂದದ ನಿಮಿಷ. ನೀನು ಸೆರೆಮನೆಯಲ್ಲಿ ಬಂಧಿತಳಾದಿಯೆಂದು ತಿಳಿದಾಗ, ನನ್ನ ಹೃದಯ ಎಷ್ಟು ಚಡಪಡಿಸಿತು ಎಂಬುದನ್ನು ನೀನು ಊಹಿಸಿ ತಿಳಿಯಲಾರೆ' ಅಖಿಲ್ ತನ್ನ ಹೃದಯದ ಪ್ರೇಮವನ್ನು ಬಿಚ್ಚಿತೋರಿಸುವಂತೆ ಮಾತನಾಡಿದನು.

'ಹೌದು, ತನಗೆ ಎದುರಾಗಿ ದಂಗೆಯೆದ್ದ ಅಕ್ಬರನಿಗೆ ನಾನು ಸಹಾಯಮಾಡುತ್ತೇನೆಂದು ತಂದೆ ವಿಚಾರಿಸಿದ. ಹಾಗಾಗಿ ನಾನೂ ಸೆರೆಮನೆಯಲ್ಲಿ ಬಂದಿಯಾಗಿರಬೇಕಾಯಿತು'.

'ಅಲ್ಲಿ ನೀನು ಬಹಳ ಸಂಕಷ್ಟಗಳನ್ನು ಅನುಭವಿಸಿದಿಯಲ್ಲವೇ?'

'ಕವನವನ್ನು ಮತ್ತಿತರ ಸಾಹಿತ್ಯ ಪುಸ್ತಕಗಳನ್ನು ನಾನು ಹೇಗೆ ಪ್ರಾಣಕ್ಕಿಂತಲೂ ಮಿಗಿಲಾಗಿ ಪ್ರೀತಿಸುತ್ತೇನೆಂದು ಬಲ್ಲೆಯಷ್ಟೆ? ಅವು ಗಳ ಸಹವಾಸ ಅಲ್ಲಿಯೂ ನನಗೆ ತಪ್ಪಲಿಲ್ಲ. ಹಾಗಾಗಿ ನನಗೆ ಸೆರೆ ಮನೆಯೂ ಅರಮನೆಯಂತೆಯೇ ಆಯಿತು'.

'ಪ್ರಿಯೇ, ಬಹುಕಾಲದ ಮೇಲೆ ನಾವು ಇಂದು ಒಂದಾಗಿದ್ದೇವೆ. ಇನ್ನು ಅಗಲುವುದು ಬೇಡ. ನೀನು ಯಾವಾಗ ನನ್ನನ್ನು ಮದುವೆ ಯಾಗುವಿ ಹೇಳು' ಅಖಿಲ್ ಸಂಭ್ರಮಪೂರ್ಣನಾಗಿ ಕೇಳಿದ.

'ಅಯ್ಯೋ ಅಖಿಲ್, ನಮ್ಮ ಮದುವೆಯು ಸಾಧ್ಯವುಂಟೆಂದು ತಿಳಿಯುತ್ತೀಯಾ? ತಂದೆ ಅದಕ್ಕೆ ಖಂಡಿತವಾಗಿ ಸಮ್ಮತಿಸಲಾರ' ಜೆಬುನ್ನೀಸಳು ನಿಟ್ಟುಸಿರೆಳೆದು ಹೇಳಿದಳು.

ಈ ಮಾತುಗಳು ಅಖಿಲ್‌ಖಾನನ ಹೃದಯವನ್ನು ಅಸ್ತ್ರದಂತೆ ಇರಿದು ನೋಯಿಸಿದವು. ಅವನೆದೆಯ ನೋವಿನ ಅನುಭವವು ಅವಳಿಗೂ ಆಯಿತು. ಅವನ ಕೊರಳ ಸುತ್ತು ಬಾಹುಗಳನ್ನು ಬಿಗಿದು ಹೇಳಿದಳು. 'ನಲ್ಲ, ವಿವಾಹಿತರಾಗದಿದ್ದರೂ ನಾವು ಹೀಗೆಯೇ ಇರಲು ಸಾಧ್ಯವಿಲ್ಲವೆ?'

ಅಖಿಲ್ ಜೆಬುನ್ನೀಸಳ ಹಸ್ತವನ್ನು ಪ್ರೇಮ ಕೃತಜ್ಞತೆಗಳಿಂದ ಒತ್ತಿ ಮುದ್ದಿಟ್ಟನು. ಆ ಪ್ರಶಾಂತ ಮನೋಹರ ರಾತ್ರಿಯಲ್ಲಿ ಆ ಪ್ರಣಯಿಗಳಿಬ್ಬರು ಬಹು ಹೊತ್ತು ಹಾಗೆ ಸರಸವಾಡಿದರು.

ಹೀಗೆ ಕೆಲರಾತ್ರಿಗಳು ಕಳೆದವು.

ಒಬ್ಬರ ಹೃದಯವನ್ನೊಬ್ಬರು ಸಂಪೂರ್ಣ ಪರಿಚಯಮಾಡಿಕೊಂಡ ಮೇಲೆ ಪ್ರಣಯವು ಇನ್ನಷ್ಟು ಅವರನ್ನು ಅಗಲಲಾರದಂತೆ ಮಾಡಿತು.

ದಿನಗಳು ನಿಮಿಷಗಳಂತೆ ಹಾರಿದವು.

ಅವರಂಗಜೇಬನು ಲಾಹೋರನ್ನು ಬಿಟ್ಟು ಡಿಲ್ಲಿಗೆ ಹೊರಡುವ ದಿನವೂ ಬಂತು. ಜೆಬುನ್ನೀಸಳು ತಂದೆಯ ಬಳಿಬಂದು ಅಕ್ಕರೆಯಿಂದ 'ಪಿತಾಜೀ, ಇಲ್ಲಿನ ಹವೆ ನನ್ನ ಆರೋಗ್ಯಕ್ಕೆ ಬಹಳವಾಗಿ ಸೇರುತ್ತದೆ. ಆದಾಗಿ, ಸ್ವಲ್ಪ ಸಮಯದ ವರೆಗೆ ನನಗೆ ಇಲ್ಲಿಯೇ ಉಳಕೊಳ್ಳಲು ಸಮ್ಮತಿಕೊಡುವಿಯಾ?' ಎಂದು ಕೇಳಿದಳು.

ಮಗಳ ಮುದ್ದು ಮುಖವನ್ನೂ ಬಿನ್ನಹಮಾಡುವಂತಿದ್ದ ಅವಳ ಸ್ನೇಹಮಯ ದೃಷ್ಟಿಗಳನ್ನೂ ಅವರಂಗಜೇಬನು ನೋಡಿ ದಯಾಭಾವದಿಂದ 'ನಿನ್ನ ಹೃದಯದ ಸಂತೋಷವಿದ್ದಂತೆಯೇ ಆಗಲಿ ಮಗಳೇ, ಆದರೆ ತಂದೆಯನ್ನು ಬಹುಕಾಲ ಏಕಾಂಗಿಯಾಗಿರುವಂತೆ ಮಾಡಬೇಡ. ನಿನ್ನ ಕೇವಲ ಸಾನ್ನಿಧ್ಯ ಮಾತ್ರವಲ್ಲ, ರಾಜ್ಯದ ಆಡಳಿತದ ವಿಷಯದಲ್ಲಿಯೂ

ನಿನ್ನ ಹಿತೋಕ್ತಿಗಳನ್ನು ಕೇಳಲು ನಾನು ಎಷ್ಟು ಆತುರನಿರುವೆನೆಂದು ನೀನೇ ಬಲ್ಲೆಯಷ್ಟೆ?' ಎಂದು ಹೇಳಿದನು.

ಜೆಬುನ್ನೀಸಳು ಲಾಹೋರಿನಲ್ಲಿಯೇ ಕೆಲಕಾಲ ಉಳಕೊಂಡಳು. ಈ ಸ್ವಾತಂತ್ರ್ಯವು ಆ ಪ್ರಣಯಿಗಳ ಭೋಗಲಾಲಸೆಯನ್ನು ಇನ್ನಷ್ಟು ಹೆಚ್ಚಿಸಲು ಯೋಗ್ಯ ಸಂದರ್ಭ ಒದಗಿಸಿತು. ಬೆಳದಿಂಗಳ ರಾತ್ರಿಯಲ್ಲಿ, ನಕ್ಷತ್ರರಂಜಿತ ನಿಶಿಯಲ್ಲಿ, ಅವರು ಪ್ರೇಮ ಸಂಗೀತ ಸಾಹಿತ್ಯ ಕವಿತೆ ಇವುಗಳ ಕುರಿತೇ ಸಂಭಾಷಿಸುತ್ತಾ ಹೊತ್ತು ಕಳೆದರು.

ಬಹುಕಾಲದ ವರೆಗೆ ಇಂತಹ ವಿಷಯಗಳು ಲೋಕದ ದೃಷ್ಟಿಯಿಂದ ಗುಪ್ತವಾಗಿರಲು ಸಾಧ್ಯವಿಲ್ಲ. ಅವರಂಗಜೇಬನ ಗುಪ್ತಚಾರರು ರಾಜಕುಮಾರಿಯ ಈ ಪ್ರಣಯವಾರ್ತೆಯನ್ನು ಆತನ ಕಿವಿಗೂ ಬೀಳುವಂತೆ ಮಾಡಿದರು. ಸಿಟ್ಟಿನಿಂದ ಕುದಿಯುತ್ತಾ, ಕೂಡಲೇ ಲಾಹೋರನ್ನು ಬಿಟ್ಟು ಹೊರಡುವಂತೆ ಬಾದಶಹನು ಮಗಳಿಗೆ ಹೇಳಿಕಳುಹಿಸಿದನು.

ಪ್ರಣಯಿಗಳ ಕೊನೆಯ ಭೇಟಿಯು ಅವರಿಬ್ಬರ ಹೃದಯಗಳನ್ನು ಬಹಳವಾಗಿ ಕರಗಿಸಿಬಿಟ್ಟಿತು ಇಬ್ಬರೂ ಜೀವಿತಾವಧಿ ಅನ್ಯೋನ್ಯ ಪ್ರೇಮಿಗಳಾಗಿರುವಂತೆ ಪ್ರತಿಜ್ಞೆಮಾಡಿಕೊಂಡರು. 'ಅಯ್ಯೋ, ನಾನು ಯಾವ ಪಾಪ ಮಾಡಿ ಬಾದಶಹನ ಮಗಳಾಗಿ ಹುಟ್ಟಿದೆನೊ! ದೀನ ಸೇವಕಳಿಗಾದರೂ ತನ್ನ ಮನಮೆಚ್ಚಿದ ನಲ್ಲನೊಡನೆ ಸುಖವಾಗಿ ಕೂಡಿರಲು ಸ್ವಾತಂತ್ರ್ಯವುಂಟು. ವಿಷಮತೆಗಳನ್ನು ಪರಿಹರಿಸುವ ಲೋಕನಿಯಮವೂ ವಿಷಮತೆಗೆ ಕಾರಣವಾಗಬೇಕೆ?' ಜೆಬುನ್ನೀಸಾ ತನ್ನೀ ಹಾಳು ಬಾಳುವೆಗಾಗಿ ಬಹಳ ಮರುಗಿಕೊಂಡಳು.

ಈ ಸನ್ನಿವೇಶ ಅಖಿಲ್ ಖಾನನ ಹೃದಯದಲ್ಲಿಯೂ ಬಹಳ ಸಂತಾಪವನ್ನುಂಟುಮಾಡಿತು. ಬೇರಾಗಲು ಅವರ ಹೃದಯಗಳೆರಡೂ ಸಮ್ಮತಿಗೊಳ್ಳದಿದ್ದರೂ, ಉಷಃಕಾಲವು ಸಮೀಪಿಸಿ ಅವರನ್ನು ಅಗಲಿಸಿಬಿಟ್ಟಿತು!

ಅವರಂಗಜೇಬನು ಮಗಳ ವಿಷಯದಲ್ಲಿ ಕಠೋರನಾಗಿ ವರ್ತಿಸಿದನು. ಲಾಹೋರಿನಿಂದ ಹಿಂದಿರುಗಲು ಅಪ್ಪಣೆಮಾಡಿದವನೇ, ಆಕೆ ದಿಲ್ಲಿಗೆ ಮರಳಲು ಅವಳನ್ನು ಯಾವನೋ ಒಬ್ಬನಿಗೆ ಮದುವೆಮಾಡಿ

ಕೊಡುವುದಾಗಿ ಹೇಳಿದನು. ಜೆಬುನ್ನಿಸಳಿಗೆ ಮೊದಲು ಇದನ್ನು ತಿರಸ್ಕರಿಸಬೇಕೆಂದೇ ಅನ್ನಿಸಿತು. ಆದರೆ ತಂದೆಯ ಸ್ವಭಾವದ ಪರಿಚಯವಿದ್ದುದರಿಂದ, ಕೊನೆಗೆ 'ಅಪ್ಪಾ, ನನ್ನ ಒಂದೇ ಶರತದೊಡನೆ ನೀನು ನನ್ನನ್ನು ಮದುವೆ ಮಾಡಿಕೊಡು; ರಾಜಮನ್ನಣೆಗೆ ಪಾತ್ರರಾಗಿ ನನ್ನನ್ನು ವರಿಸಲು ಬಂದು ನೆರೆದವರಲ್ಲಿ ನಾನು ಯಾರನ್ನು ವರಿಸಲು ಇಚ್ಛಿಸುತ್ತೇನೋ ಅವನೊಡನೆ ನನ್ನ ಮದುವೆ ಮಾಡುವಂತೆ ಅನುಗ್ರಹಿಸು' ಎಂದು ಬೇಡಿಕೊಂಡಳು.

'ಸ್ವಯಂವರ ಪದ್ಧತಿ ಹಿಂದೆಯೂ ಇತ್ತು; ಆಗಬಹುದು, ನನ್ನ ಆತಂಕವಿಲ್ಲ' ಎಂದವನೇ ಅವರಂಗಜೇಬನು ಅಲ್ಲಿಂದ ಹೊರಟು ಹೋದನು.

ಜೆಬುನ್ನೀಸಳು ಗುಪ್ತವಾಗಿ ಈ ವಿಷಯವನ್ನು ಅಖಿಲ್‌ಖಾನನಿಗೆ ತಿಳಿಸಿದಳು. ತನ್ನಿಚ್ಛೆಯವನನ್ನು ವರಿಸಲು ತಂದೆಯು ಸಮ್ಮತಿಸಿರುವುದಾಗಿಯೂ, ಅಖಿಲ್‌ಖಾನನು ಸ್ವಯಂವರದ ದಿನ ಬರಬೇಕಾಗಿಯೂ, ಆತನನ್ನೇ ತಾನು ಖಂಡಿತ ವರಿಸುವುದಾಗಿಯೂ ತಿಳಿಸಿದಳು.

ಧೂರ್ತ ಅವರಂಗಜೇಬನಿಗೆ ಜೆಬುನ್ನೀಸಳ ಈ ಗುಪ್ತ ಸಂದೇಶವು ಹೇಗೋ ತಿಳಿಯಿತು. ಅವಳನ್ನು ವರಿಸಲು ಹಾತೊರೆಯುತ್ತಿದ್ದ ಓರ್ವ ತರುಣನ ಮೂಲಕ ಈ ರೀತಿ ಅಖಿಲ್‌ಖಾನನಿಗೆ ಪತ್ರ ಬರೆವಂತೆ ಹೇಳಿದನು:

"ಇಲ್ಲಿಗೆ ಬರದಿರು. ನಿನ್ನ ಮತ್ತು ರಾಜಕುಮಾರಿಯ ಗುಪ್ತ ವ್ಯವಹಾರವು ಬಾದಶಹರ ಕಿವಿಗೂ ಬಿದ್ದಿದೆ. ಬಂದಲ್ಲಿ ನಿನಗೆ ಸಾವು ಖಂಡಿತ".

ಪ್ರೇಯಸಿಯ ಆಹ್ವಾನ ಪತ್ರವನ್ನೂ, ಅದರೊಡನೆ ಈ ಬೆದರಿಕೆಯ ಕಾಗದವನ್ನೂ ನೋಡಿ ಅಖಿಲ್‌ಖಾನನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಕೊನೆಗೆ ಬಾದಶಹನ ಕೋಪಾಗ್ನಿಯನ್ನು ಯಾವ ರೀತಿಯಿಂದಲೂ ಶಮಿಸುವ ಉಪಾಯವಿಲ್ಲವೆಂದು ತಿಳಿದು ತನ್ನ ಉದ್ಯೋಗಕ್ಕೆ ರಾಜೀನಾಮೆಯಿತ್ತು, ಯಾರಿಗೂ ತಿಳಿಯದಂತೆ ಎಲ್ಲಿಗೋ ಹೊರಟುಹೋದನು.

'ನಾನು ನಿನ್ನನ್ನು—ನಿನ್ನೊಬ್ಬಳನ್ನು ಮಾತ್ರ ನನ್ನ ಜೀವಮಾನದಲ್ಲಿ ಪ್ರೀತಿಸುತ್ತೇನೆ. ಆದರೆ ಅಪಾಯದ ಭಯದಿಂದ ನನಗೆ ಆ ದಿನ ಅಲ್ಲಿಗೆ ಬರುವುದಾಗುವುದಿಲ್ಲ' ಪ್ರೇಯಸಿಗೆ ಗುಪ್ತವಾಗಿ ಈ ಪತ್ರ ಬರೆದಟ್ಟಿದನು.

ಜೆಬುನ್ನೀಸಳಿಗೆ ಬಾದಶಹನು ಅಖಿಲ್‌ಖಾನನನ್ನು ಬೆದರಿಸಿ ಬರೆದಟ್ಟಿದ ಪತ್ರದ ವಿಷಯ ತಿಳಿದಿರಲಿಲ್ಲ. ಕೆಲವೇ ದಿನಗಳಲ್ಲಿ ತನ್ನ ಜೀವಮಾನದ ಸೌಭಾಗ್ಯದ ಸಮಯವು ಬರುವುದೆಂದು ಆಕೆ ಕನವರಿಸುತಿದ್ದಳು. ಒಳ್ಳೆಯ ವಿದ್ಯಾವತಿಯೆಂದೂ, ರಸಿಕಳೆಂದೂ, ಉತ್ತಮ ಕವಯಿತ್ರಿಯೆಂದೂ ಅಖಿಲಭಾರತದಲ್ಲಿಯೇ ಆಕೆಯ ಹೆಸರು ಪ್ರಸಿದ್ಧವಾಗಿದ್ದುದರಿಂದ ಅವಳ ಪಾಣಿಗ್ರಹಣ ಲಾಲಸರಾಗಿ ಸ್ವಯಂವರದ ದಿನ ಬಹುಮಂದಿ ಯುವಕರು ಉಮೇದ್ವಾರರಾಗಿ ಬಂದಿದ್ದರು.

ಇಷ್ಟರಲ್ಲಿ ತನ್ನ ಪ್ರೇಮಪಾತ್ರನಿಂದ ಆಕೆಗೆ ಪತ್ರವೂ ತಲಪಿತು. ತನ್ನ ಎಲ್ಲಾ ನಿರೀಕ್ಷೆಗಳನ್ನೂ ಅದು ನುಂಗಿಬಿಟ್ಟಿತು.

ತಾನು ಸ್ವಸ್ಥವಾಗಿಲ್ಲದಿರುವುದರಿಂದ, ಮದುವೆಯನ್ನು ಸ್ವಲ್ಪ ಸಮಯ ಕಳೆದುಮಾಡಬಹುದೆಂದು ಆಕೆ ತಂದೆಯನ್ನು ಹೇಗೋಹೇಗೋ ಒಪ್ಪಿಸಿದಳು. ಆದರೆ ಮನಸ್ಸಿನಲ್ಲಿ ತಾನೆಂದೂ ಮದುವೆಮಾಡಿಕೊಳ್ಳುವುದಿಲ್ಲವೆಂದು ಖಂಡಿತಮಾಡಿಬಿಟ್ಟಳು.

ವರ್ಷಗಳು ಕಳೆದವು.

ಜೆಬುನ್ನೀಸಳ ಜೀವನದಲ್ಲಿ ಸುಖದ ಸೂಚನೆಯೇ ಇಲ್ಲ. ಹಿಂದಿನ ಆ ಅಮೃತ ನಿಮಿಷಗಳು ದಿವ್ಯ ಸ್ವಪ್ನದಂತೆ ಆಗಾಗ ಬಂದು ಆಕೆಯನ್ನು ಪರವಶಳಾಗಿ ಮಾಡುತ್ತಿತ್ತು.

ಸುಖವಿಲ್ಲದ, ರಸವಿಲ್ಲದ, ಆನಂದವಿಲ್ಲದ ಆಕೆಯ ಜೀವನವು ಹೀಗೆ ಅಂಧಕಾರಮಯವಾಗಿ ಸಾಗುತ್ತಿರಲು, ಒಮ್ಮೆ ಒಂದು ಸುವಾರ್ತೆಯನ್ನು ಕೇಳಿ ಆಶೆಯ ಕಿರಣವು ಮೂಡಿ ಉಲ್ಲಾಸಗೊಂಡಳು. ಅಖಿಲ್‌ಖಾನನು ವೇಷವನ್ನು ಮರೆಮಾಡಿ ದಿಲ್ಲಿಯಲ್ಲಿಯೇ ವಾಸಿಸುತ್ತಿರುವನೆಂದು ಯಾರೋ

ಹೇಳಿದರು. ಆತನೊಡನೆ ಸೇರಲು ಅನೇಕ ಹಂಚಿಕೆಗಳನ್ನು ಹೂಡಿದಳು. ತನ್ನ ಆಪ್ತ ದಾಸಿಯೊಡನೆ, ಆತನನ್ನು ಹೇಗಾದರೂ ಕಂಡು ಹುಡುಕಿ ತನ್ನ ಹೃದಯದ ಪ್ರೇಮನಿವೇದನೆಯನ್ನು ಆದಷ್ಟು ಬೇಗನೇ ಅವನಿಗೆ ನಿವೇದಿಸುವಂತೆ ಬೇಡಿಕೊಂಡಳು.

ಇಬ್ಬರಿಗೂ ಗುಪ್ತ ಭೇಟಿಯಾಗಿ ಸುಂದರ ಸಮಾಯೋಗ ಸುಖವು ಪುನಃ ಲಭಿಸಿತು.

ಬಹಳ ವರ್ಷಗಳ ನಿಷ್ಠುರ ಅಗಲುವಿಕೆಯಿಂದ ಅವರ ಶರೀರಗಳು ಬಹಳ ಕೃಶವಾಗಿ ಹೋಗಿದ್ದರೂ ಅವರ ಅಂತರಂಗದ ಅಕೃತ್ರಿಮ ಪ್ರೇಮವು ಯಾವ ವ್ಯತ್ಯಾಸವನ್ನೂ ಕಂಡಿರಲಿಲ್ಲ.

ಹಲವು ರಾತ್ರಿ ಪುನಃ ಆ ಪ್ರೇಮಿಗಳು ಸಮ್ಮಿಳಿತರಾದರು!

ಜೆಬುನ್ನೀಸಳ ಹೃದಯದ ಸಂತಾಪಾಗ್ನಿಯು ನಂದಿಹೋಗಿತ್ತು. ಮುಖದಲ್ಲಿ ಪುನಃ ಆನಂದದ ಅನುರಾಗದ, ಯೌವನದ ಕಾಂತಿ ಚಿಮ್ಮಿ ತೋರುತಿತ್ತು. ಆಕೆ ತನ್ನ ಕವನಗಳಲ್ಲಿ ಜೀವನ ನಶ್ವರತೆಯನ್ನು ನಿರಾಶೆಯನ್ನು ಸಾರುವುದನ್ನು ನಿಲ್ಲಿಸಿ, ಈಗ ಹೊಸ ಉಲ್ಲಾಸದ, ಜೀವಿತ ಸಂತಸದ, ಅಮಿತಾನಂದದ ಪ್ರೇಮಪ್ರವಾಹಗಳನ್ನೇ ಹಾಡಿ ಹರಿಸಿದಳು.

ಆಕೆಯನ್ನು ಮದುವೆಯಾಗಬೇಕೆಂದು ಬಯಸಿ ನಿರಾಶರಾದವರು ಅವಳ ಜೀವನೋಲ್ಲಾಸವನ್ನು ಕಂಡು ಸಂಶಯಗೊಂಡರು. ಈ ಬದಲಾವಣೆಯ ರಹಸ್ಯವನ್ನು ಕಂಡು ಹುಡುಕಲು ಗುಪ್ತಚಾರರನ್ನಿಟ್ಟರು.

ಕೊನೆಗೆ ಒಂದು ದಿನ ಈ ರಹಸ್ಯವೂ ಹೊರಬಿತ್ತು.

ರಾಜ್ಯದ ಅರಾಜಕತೆಯ ಗೊಂದಲದಲ್ಲಿ ಅವರಂಗಜೇಬನಿಗೆ ಈ ವಾರ್ತೆಯನ್ನು ಕೇಳಿ ಮತ್ತಷ್ಟು ಉದ್ರೇಕಹೆಚ್ಚಿತು. ಈಗಲೇ ಒಬ್ಬ ಕುಹಕಿಯು ಬಂದು, ಅಖಿಲ್‌ಖಾನನು ಪ್ರತಿ ರಾತ್ರಿಯೂ ಜೆಬುನ್ನೀಸಳನ್ನು ಅವಳ ಅಂತಃಪುರದಲ್ಲಿಯೇ ಭೇಟಿಯಾಗುತ್ತಿರುವುದಾಗಿ ಹೇಳಿದನು.

''ಏನು?'' ಬಾದಶಹನು ಗುಡುಗಿದನು. ''ಹೀಗೆ ಹೇಳಲು ನಿನಗೆ ಧೈರ್ಯ ಬಂತೆ? ಇದನ್ನು ರುಜುಪಡಿಸದಿದ್ದರೆ ನಿನ್ನ ಶಿರಚ್ಛೇದನವಾಗುವುದು''.

ತಮಗೆ ಒದಗಲಿರುವ ವಿಪತ್ತಿನ ಪರಿವೆಯೇ ಇಲ್ಲದೆ ಆ ಪ್ರಣಯಿಗಳಿಬ್ಬರೂ ಎಂದಿನಂತೆ ಒಂದು ದಿನ ಸುಖಸಲ್ಲಾಪ ಮಗ್ನರಾಗಿದ್ದರು. ಆಕೆ ಚೆಲುವಾದ ಹೊಂಬಣ್ಣದ ಸೀರೆಯೊಂದನ್ನುಟ್ಟು ಶೃಂಗಾರಗಳಿಂದ ಸುಂದರಳಾಗಿ ಅಲಂಕೃತಳಾಗಿದ್ದಳು. ಉನ್ನತ ಪೀಠದಲ್ಲಿ ಆಸೀನಳಾಗಿದ್ದಳು. ಆಕೆಯ ನಲ್ಲನು ಅವಳ ಪ್ರೇಮಕಂಠದಿಂದ ಹೊರಡುವ ಸಂಗೀತ ಮನೋಹರ ಪ್ರೇಮಗೀತೆಗಳ ಚೆಲುವನ್ನು ಹೀರುತ್ತಾ ಆಕೆಯ ಪಾದದ ಬಳಿ ಕುಳಿತಿದ್ದನು.

ಬಾಗಿಲ ಬಳಿ ಭದ್ರವಾಗಿ ಕಾದಿರುವಂತೆ ಕಾವಲುಗಾರರಿಗೆ ಬಾದಶಹನು ಅಜ್ಞಾಪಿಸಿದನು. ಬಾಗಿಲಲ್ಲಿ ತಾನೇ ನಿಂತು ರುದ್ರಸ್ವರದಿಂದ ಕದ ತೆರೆಯುವಂತೆ ಕಠೋರವಾಗಿ ಹೇಳಿದನು.

ಇಂಥಾ ಅನಿರೀಕ್ಷಿತ ಮತ್ತು ಅನಪೇಕ್ಷಿತ ನಿಷ್ಠುರೋಕ್ತಿಗಳನ್ನಾಲಿಸಿ ಪ್ರಣಯಿಗಳು ದಿಗ್‌ಭ್ರಮೆಗೊಂಡರು. ಭೀತರಾಗಿ ಒಬ್ಬರ ಮುಖವನ್ನೊಬ್ಬರು ನೋಡಿದರು. ಬಾಗಿಲ ಹೊರಗಿನಿಂದ ಪುನಃ ಅದೇ ಕರ್ಕಶ ಧ್ವನಿ ಕೇಳಿಸಿತು ನಲ್ಲನನ್ನು ಎಲ್ಲಿಯಾದರೂ ಅಡಗಿಸಿಡುವಂತೆ ಆಕೆ ಅತ್ತಿತ್ತ ಹುಡುಕಿದಳು. ಅಷ್ಟರಲ್ಲೇ ಬಾಗಿಲನ್ನು ಒಡೆದು ಬಾದಶಹನು ಒಳ ಬಂದನು!

"ಅಖಿಲ್‌ಖಾನ್ ಎಲ್ಲಿದ್ದಾನೆ? ಎಲ್ಲಿ ಅಡಗಿರುವನೋ ಹೇಳು. ಆತನನ್ನು ವಧೆ ಮಾಡಬೇಕಾಗಿದೆ"

"ಅಖಿಲ್‌ಖಾನ್! ಬಹು ಸಮಯಗಳ ಹಿಂದೆಯೇ ಲಾಹೋರು ಬಿಟ್ಟು ಆತನು ಎಲ್ಲಿಗೋ ಹೋಗಿದ್ದನಷ್ಟೆ?"

"ಮರೆ ಮೋಸ ಬೇಡ; ದಾರಿ ಬಿಡು, ನಾನೇ ಹುಡುಕುತ್ತೇನೆ. ಅವನು ಇಲ್ಲಿದ್ದರೆ ಖಂಡಿತ ಸಾಯಲೇ ಬೇಕು ಇಲ್ಲವಾದರೆ ಈ ಅಪವಾದ ಹುಟ್ಟಿಸಿದ ಸುಳ್ಳುಗಾರರು ಸಾಯಬೇಕು"

ಬಾದಶಹನು ಹುಡುಕಿದನು. ಕೋಣೆಯ ಮೂಲೆ ಮೂಲೆಗಳನ್ನೆಲ್ಲಾ ಶೋಧಿಸಿದನು. ಒಂದು ಕಡ್ಡಿ ಕಸವಾದರೂ ಆತನ ದೃಷ್ಟಿಯಿಂದ ಮರೆಯಾಗಲಿಲ್ಲ. ನಿಟ್ಟುಸಿರು ಬಿಟ್ಟು, ದ್ವೇಷಗೊಂಡವನಾಗಿ

ಹೊರಗೆ ಹೋಗಬೇಕೆನ್ನುವಷ್ಟರಲ್ಲಿಯೇ ಸ್ನಾನಕ್ಕಾಗಿ ಕುದಿಯುವ ನೀರನ್ನು ಇಟ್ಟಿದ್ದ ಪಾತ್ರದ ಕಡೆಗೆ ಅವನ ದೃಷ್ಟಿ ಹೊರಳಿತು. ಅಲ್ಲಿಯೇ ನಿಂತನು.

"ಈ ಪಾತ್ರವನ್ನು ಕೋಣೆಯೊಳಗೆ ಯಾಕೆ ಇಟ್ಟದ್ದಿ?"

"ನೀರು ಕುದಿಸಲು" ಮೆಲ್ಲನೆ ಉತ್ತರವಿತ್ತಳು.

ಬಾದಶಹನು ಕಾವಲುಗಾರರನ್ನು ಕೂಗಿದನು. ಐದಾರು ಮಂದಿ ಕೂಡಲೇ ಓಡಿಬಂದರು.

"ಪಾತ್ರದಲ್ಲಿ ಕುದಿವ ನೀರನ್ನು ನೋಡಿ" ಬಾದಶಹನು ಆಜ್ಞಾಪಿಸಿದನು. ಅಷ್ಟರಲ್ಲಿ ಜೆಬುನ್ನೀಸಳೂ ಪಾತ್ರೆಯ ಸಮೀಪಬಂದು ಹೀಗೆಂದಳು:

"ಪ್ರಿಯಾ, ನನ್ನ ಮಾನವುಳಿಸು; ಪ್ರೀತಿಸಲುವಾಗಿ ಸುಮ್ಮಗಿರು. ನಿನಗಿದೇ ಕೊನೆಯ ವಂದನೆ. ನಾನು ಸಾವ ತನಕವು ನಿನ್ನವಳೆಂದೇ ತಿಳಿ".

ನೀರು ಬಿಸಿಯೇರುತ್ತಿದ್ದಂತೆ ಮೊದಲೇ ಪ್ರೇಮಾಗ್ನಿಯಿಂದ ಬೆಂದು ಹೋಗಿದ್ದ ಅಖಿಲ್‌ಖಾನನು ಮೌನವಾಗಿ ಅಲ್ಲಿ ಭಯಂಕರ ಮರಣವನ್ನು ಪಡೆದನು!

ಈ ನಿಷ್ಠುರ ಪ್ರೇಮಾನುಭವದಿಂದ ಜೆಬುನ್ನೀಸಳು ಚಿರದುಃಖಿನಿಯಾಗಿಯೇ ಇದ್ದಳು!

ಪುನಃ ಅವಳ ಕವನಗಳು ಜೀವನದ ನಿರಾಶೆಯನ್ನೇ ಸಾರಿದವು! ಅವಳ ಕೊನೆಯ ಬಿನ್ನಹದಂತೆ ಅವಳ ಸಮಾಧಿಯು ಎಲ್ಲಿ ಆಕೆ ಕ್ಷಣಿಕವಾದರೂ ತನ್ನ ನಲ್ಲನೊಡನೆ ಪ್ರಣಯದ ಪುಣ್ಯಪಾಠ ಪಡೆದಿದ್ದಳೋ ಆ ಲಾಹೋರಿನ ಹೂತೋಟದಲ್ಲಿಯೇ ಕಟ್ಟಲ್ಪಟ್ಟಿತು.

ಹೊನ್ನಿಯ ಮಲ್ಲಯ್ಯ

ಇಂದಿನ ನವನಾಗರಿಕತೆಯ ಥಳಕು ಆಗ ಬಂದಿರಲಿಲ್ಲ. ಜನರು ತಮ್ಮ ಹಳ್ಳಿಗಳಲ್ಲಿಯೇ ಇದ್ದು ಪರಂಪರೆಯಿಂದ ಬಂದ ಕಸುಬುಗಳಲ್ಲಿ ಹೊಲ ನೆಲಗಳ ಬೇಸಾಯದಲ್ಲಿ ತೃಪ್ತರಾಗಿ ದುಡಿದು ದಿನಗಳೆಯುತ್ತಿದ್ದರು. ದುಡಿತದ ಸ್ವಲ್ಪ ಅಂಶವನ್ನು ಮಾತ್ರ ವೆಚ್ಚ ಮಾಡಿ ಹೆಚ್ಚಿನ ಅಂಶ ಉಳಿಸುತ್ತಿದ್ದರು. ತಾವು ಗಳಿಸಿದ ಹಣವನ್ನು ಮನೆಯ ಹಿತ್ತಲಿನ ಯಾವುದಾದರೊಂದು ಮರದಡಿಯಲ್ಲಿಯೋ, ಇಲ್ಲವೇ ಮನೆಯೊಳಗಿನ ಗುಪ್ತವಾದ ಕತ್ತಲು ನೆಲ ಮಾಳಿಗೆಯಲ್ಲಿಯೋ ಭದ್ರವಾಗಿ ಹುಗಿಸಿಟ್ಟು ಕಾಪಾಡುತ್ತಿದ್ದರು. ಆ ಸಮಯದಲ್ಲಿ ಹೀಗೆ ಹೂತಿಟ್ಟ ಹಣಕ್ಕಾಗಿ ಕಳ್ಳ ದರೋಡೆಗಾರರ ಗುಂಪು ಶ್ರೀಮಂತರ ಮನೆಗಳನ್ನು, ಹಳ್ಳಿ ಹಳ್ಳಿಗಳನ್ನೇ ಹೊಕ್ಕು ಲೂಟಿ ಮಾಡುವ ಭೀತಿ ಎಲ್ಲ ಕ್ಷಣದಲ್ಲಿಯೂ ಇತ್ತು. ರಾತ್ರಿ ಒಂದು ಹಳ್ಳಿಯನ್ನು ದರೋಡೆಗಾರರು ಹೊಕ್ಕರೆಂದರೆ, ಬೆಳಕು ಹರಿಯುವುದರೊಳಗೆ ಕೈಗೆ ಸಿಕ್ಕಿದ ಎಲ್ಲಾ ವಸ್ತುಗಳನ್ನೂ ದೋಚಿಕೊಂಡು ಹೋಗುತ್ತಿದ್ದರು.

ಆಗ ಇಡೀ ಕುಂಬಳೆ ಸೀಮೆಯನ್ನೇ ಭಯಗೊಳಿಸುವ ಒಂದು ದರೋಡೆಗಾರರ ಗುಂಪು ಇತ್ತು. ಹಳ್ಳಿಯ ಸಾಮಾನ್ಯ ಜನರಿಗಿಂತ ಧನಿಕರಿಗೂ ಸರಕಾರಕ್ಕೂ ಅದರ ಭೀತಿ ಹೆಚ್ಚು. ಆ ಗುಂಪಿನ ನಾಯಕನನ್ನು ಒಬ್ಬ ಅದ್ಭುತ ವ್ಯಕ್ತಿಯೆಂದು ಜನರು ಹೇಳುತ್ತಿದ್ದರು. ಆತನ ಸಾಹಸ ವರ್ಣನೆಗಳ ಮಾತು ಮನೆ ಮನೆಗಳಲ್ಲಿ ದಿನನಿತ್ಯದ ಮಾತಾಗಿತ್ತು. ಆತನು ಕುಲೀನ ವಂಶದಲ್ಲಿ ಹುಟ್ಟಿದವನೆಂದು ಜನರು ಹೇಳುತ್ತಿದ್ದರು. ಆದರೆ ಯಾತಕ್ಕಾಗಿ ಕದ್ದುಕೊಳ್ಳುವ ವೃತ್ತಿಯನ್ನು ಕೈಕೊಂಡನೋ ಯಾರಿಗೂ ಗೊತ್ತಿರಲಿಲ್ಲ. ಜನರು ಏನೇನೋ ಕತೆ ಕಟ್ಟಿ ಹೇಳುತಿದ್ದರು.

ಬಡವರಿಗೆ ಅವನು ಎಂದೂ ತೊಂದರೆ ಕೊಡುತ್ತಿರಲಿಲ್ಲ.

'ದೊಡ್ಡವ'ರನ್ನು ಸುಲಿದು ಬಡವರಿಗೆ ಅನಾಥರಿಗೆ, ಅಂಗಹೀನರಿಗೆ ಹಂಚುತ್ತಿದ್ದನು. ಒಂದು ರೀತಿಯಿಂದ 'ಸಮತಾವಾದ'ದ ಪ್ರಚಾರಕನೇ ಆತನೆಂದು ಹೇಳಿದರೂ ಒಪ್ಪುವಂತಿತ್ತು. ಹೀಗಾಗಿ ಆತನು ಒಬ್ಬ 'ಅದ್ಭುತ ವ್ಯಕ್ತಿ'ಯಾಗಿ ಸಿರಿವಂತರ ಶತ್ರುವಾಗಿ ಬಡವರ ಭಾಗ್ಯವಾಗಿ ದರೋಡೆಗಾರರ ನಾಯಕನಾಗಿ ಮೆರೆದಿದ್ದನು.

ಮಲ್ಲಯ್ಯ ದೀರ್ಘಕಾಯದ ಸುಂದರ ಯುವಕ. ಬಹಳ ರಸಜೀವಿ. ಹೊನ್ನಿ ಎಂಬ ಹಳ್ಳಿಹುಡುಗಿಯೊಬ್ಬಳು ಆತನ ಪ್ರಣಯಿನಿ ಕಡಲ ದಡದಲ್ಲಿ ಒಂದು ದೊಡ್ಡ ತೆಂಗಿನ ತೋಟದ ಮಧ್ಯದ ಗುಡಿಸಲೊಂದರಲ್ಲಿ ಆಕೆ ತನ್ನ ಸಾಕುತಾಯಿಯೊಡನೆ ಏಕಾಂಗಿನಿಯಾಗಿ ವಾಸವಾಗಿದ್ದಳು. ಆಕೆಗೂ ತುಂಬುಜವ್ವನದ ಪ್ರಾಯ. ಬೇಕಾದಷ್ಟು ಸುಂದರಿಯೂ ಆಗಿದ್ದಳು.

ಹೊನ್ನಿಯು ದೇಹ ಸೌಂದರ್ಯದಿಂದ ಮಾತ್ರ ಮಲ್ಲಯ್ಯ ಆಕರ್ಷಿತನಾಗಿರಲಿಲ್ಲ. ಅಂತಹ ಎಷ್ಟೋ ಮಂದಿ ಚೆಲುವೆಯರನ್ನು ಆತನು ಕಂಡಿದ್ದಾನೆ. ಆದರೆ ಆಕೆಯ ಧೈರ್ಯ, ನಿಷ್ಕಲ್ಮಷಪ್ರೇಮ, ನಿರ್ಮಲ ನಡತೆ, ಇವು ಆತನ ಹೃದಯವನ್ನು ಸೂರೆಗೊಂಡಿದ್ದವು. ಎಷ್ಟೋ ಸಮಯ ದಿನಗಟ್ಟಳೆ ತಿಂಗಳು ತಿಂಗಳುಗಳ ತನಕವೂ ತನ್ನ ಸಾಹಸ ಕಾರ್ಯಗಳ ಸಲುವಾಗಿ ಅವನು ಎಲ್ಲೆಲ್ಲಿಯೋ ಅಲೆದಾಡಬೇಕಾಗಿತ್ತು. ಆದರೆ ಆಕೆ ಚಾತಕ ಪಕ್ಷಿಯಂತೆ ಧೀರಳಾಗಿ, ಶಾಂತಳಾಗಿ, ತನ್ನ ನಲ್ಲನ ಬರವನ್ನೇ ಎದುರು ನೋಡುತ್ತಿರುವಳು. ಗುಡಿಸಲ ಹೊರಗಡೆ ಅಪರರಾತ್ರಿಯಲ್ಲಿಯೇ ಆಗಲಿ ಮಲ್ಲಯ್ಯನ ಕಾಲಸಪ್ಪಳ ಕೇಳಿದರೆ, ಎದ್ದು ಓಡಿಹೋಗಿ ಆತನು ತನ್ನ ಹೆಸರೆತ್ತಿ ಕರೆಯುವುದಕ್ಕಿಂತ ಮೊದಲೇ ಕೈ ಹಿಡಿದು, ಒಳತಂದು, ಉಪಚರಿಸಿ, ಉಣಬಡಿಸಿ, ಮುದ್ದಿಸಿ, ಸರಸವಾಡಿ ತನ್ನ ಮತ್ತು ಆತನ ಅಷ್ಟು ದಿನಗಳ ಅಗಲುವಿಕೆಯ ಆಯಾಸವನ್ನೂ ಪರಿಹರಿಸಿ ಬಿಡುವಳು.

ಮಲ್ಲಯ್ಯನನ್ನು ಕೊಂದಾಗಲೀ ಜೀವಂತವಾಗಲಿ ತಂದು ಕೊಡುವವರಿಗೆ ಅಪೂರ್ವ ಬಹುಮಾನ ಕೊಡುವುದಾಗಿ ಸರಕಾರ ಸಾರಿತು. ಆತ

ನನ್ನು ಹೇಗಾದರೂ ಹಿಡಿದು ಬಹುಮಾನ ಪಡೆಯಲು ಪೋಲೀಸರ ಪಡೆ ದೇಶವ ಎಲ್ಲೆಡೆಯಲ್ಲಿಯೂ ತಿರುಗುತಿತ್ತು. ಆದರೆ ಮಲ್ಲಯ್ಯನು ಎತ್ತರ ಪರ್ವತ ಕಾನನಗಳ ನಡುವೆ, ನಿರ್ಜನ ನಿಬಿಡ ಅರಣ್ಯದ ಅಂಧ ಕಾರದ ಆವರಣದಲ್ಲಿ, ಧೀರಸಿಂಹದಂತೆ ಅಲೆದಾಡುತ್ತಲೇ ಇದ್ದ. ಅಲ್ಲಿಗೆ ಆತನನ್ನು ಹುಡುಕಲು ಹೋಗುವ ಧೈರ್ಯಶಾಲಿಗಳು ಯಾರೂ ಇರಲಿಲ್ಲ ಹಾಗೆ ಹೋದವರು ಮರಳಿ ಜೀವಂತರಾಗಿ ಬರುವುದೂ ಸಾಧ್ಯ ವಿರಲಿಲ್ಲ. ಹಳ್ಳಿಯ ಬಡಜನರು ಜೀವಹೋದರೂ ಆತನ ಗೊತ್ತುಗುರಿ ಯನ್ನು ಸರಕಾರಕ್ಕೆ ತಿಳಿಸುವಂತೆಯೂ ಇರಲಿಲ್ಲ.

ಮಲ್ಲಯ್ಯನನ್ನು ಹಿಡಿವ ಹಂಚಿಕೆ ಹೂಡಿ ಹೂಡಿ ಅಧಿಕಾರಿಗಳ ತಲೆಯ ನರಗಳು ಕಡಿದು ಹೋಗುವಂತಾದುವು. ಕಡೆಗೆ ಎಲ್ಲರೂ ಕೂಡಿ ಒಂದು ನಿರ್ಣಯಕ್ಕೆ ಬಂದರು. ಅಪ್ಪಯ್ಯನೆಂಬವನು ಅವರಲ್ಲಿ ಸುಂದ ರನೂ ದೃಢಕಾಯದವನೂ ಬಲಶಾಲಿಯೂ ಆಗಿದ್ದ. ಆತನಿಗೆ ಬಿಲ್ಲು ವಿದ್ಯೆ ಮಾತ್ರವಲ್ಲದೆ ಖಡ್ಗಬೀಸುವುದೂ ಗೊತ್ತಿತ್ತು. ಹಿಂದೆ ಆತ ಸಿಪಾ ಯಿಯಾಗಿದ್ದ. ಆತನನ್ನು ಕರೆದು ಗುಪ್ತವಾಗಿ, ಯಾರಿಗೂ ಸಂಶಯ ಹುಟ್ಟದಂತೆ ಹೊನ್ನಿಯಿರುವ ಹಳ್ಳಿಗೆಹೋಗಿ, ಆಕೆಯ ಗುಡಿಸಲ ಹತ್ತಿರ ಉಳಕೊಂಡು, ಆಕೆಯ ಸಾಕುತಾಯಿಯನ್ನು ಹಣದಾಸೆಯಿಂದ ಲೋಭಿ ಹುಟ್ಟಿಸಿ, ಹೊನ್ನಿಯ ಪರಿಚಯವನ್ನೂ ಮಾಡಿಕೊಂಡು, ಸಾಧ್ಯ ವಾದಲ್ಲಿ ಆಕೆಯ ಪ್ರೇಮವನ್ನೂ ಸಂಪಾದಿಸಿ ಮಲ್ಲಯ್ಯನ ಒಳಸಂಚುಗಳ ನ್ನರಿತು ಆತನನ್ನು ಕೊಂದಾಗಲೀ ಜೀವಂತಾಗಲಿ ತರಬೇಕೆಂದು ಮೇಲ ಧಿಕಾರಿ ಅಪ್ಪಣೆಯಿತ್ತನು ಈ ಕೆಲಸದಲ್ಲಿ ಕುಶಲತೆಯನ್ನೂ ವಿಧೇಯ ತನ್ನೂ ತೋರಿಸಿದರೆ, ಕೈತುಂಬಾ ಇನಾಮೂ, ಕೆಲಸದಲ್ಲಿ ಬಿನ್ನಾತಿಯೂ ಬೇಕಾದರೆ ಅದೇ ಹುಡುಗಿಯನ್ನು ಮದುವೆಮಾಡಿಸಿ ಕೊಡುವುದಾಗಿಯೂ ಅಪ್ಪಯ್ಯನನ್ನು ಹುರಿದುಂಬಿಸಿ ಕಳುಹಿಸಿದ.

ಅಧಿಕಾರಿಗಳ ಈ ಊಹನೆಯಲ್ಲಿ ಅಸಾಧ್ಯತೆಯೇನೂ ಇರಲಿಲ್ಲ. ಅಪ್ಪಯ್ಯ ಒಳ್ಳೆಯ ಚುರುಕಿನವ; ಸುಂದರ ದೃಢ ಕಾಯದ ಯುವಕ. ಆಕೆಯ ಸಾಕು ತಾಯಿಯನ್ನು ಸ್ವಾಧೀನ ಮಾಡಲು ಅಪ್ಪಯ್ಯನಿಗೆ ಸರ ಕಾರ ಬೇಕಾದಷ್ಟು ಹಣ ಒದಗಿಸುವ ಏರ್ಪಾಡು ಮಾಡಿತ್ತು. ಇಂತಹ

ಐಶ್ವರ್ಯದಲ್ಲಿ, ಸುಖವಾದ ಜೀವನ ಮಾಡುವ ಸುಂದರ ಯುವಕ ನೊಬ್ಬನನ್ನು ಹೊನ್ನಿಯಂಥಾ ಹಳ್ಳಿಯ ಹುಡುಗಿ ಪ್ರೇಮ ಮಾಡುವುದು ಅಧಿಕಾರಿಗಳ ದೃಷ್ಟಿಯಲ್ಲಿ ಅಸಾಧ್ಯವಿರಲಿಲ್ಲ.

ಅಪ್ಪಯ್ಯನಾದರೂ ಇಂಥಾ ಸಂದರ್ಭವನ್ನು ಕನವರಿಸಿಯೂ ಇರ ಲಿಲ್ಲ. ಸರಕಾರದ ಸಹಾಯ, ಖರ್ಚು ಮಾಡಲು ಬೇಕಾದಷ್ಟು ಹಣ, ಸುಂದರ ತರುಣಿಯೋರ್ವಳೊಡನೆ ಪ್ರಣಯ ಕಾರ್ಯ, ಮಲ್ಲಯ್ಯನನ್ನು ಹಿಡಿದುಕೊಟ್ಟರೆ ಮುಂದೆ ನೌಕರಿಯಲ್ಲಿ ಆಗುವ ಉನ್ನತಿ, ಒಂದೊಂದೇ ವಿಚಾರಗಳು ಆತನನ್ನು ಇಂತಹ ಸಾಹಸಕಾರ್ಯದಲ್ಲಿ ಉತ್ಸಾಹಗೊಳಿಸಿ ಹೊರಡಿಸಲು ಸಾಕಾಗಿದ್ದವು.

ಮರುದಿನವೇ ಹೊನ್ನಿಯ ಗುಡಿಸಲ ಬಳಿಯ ಒಂದು ಮನೆಯಲ್ಲಿ ಆತ, ಯಾವುದೋ ಒಂದು ನೆವನ ಹೇಳಿ ಬಂದು ನೆಲಸಿದನು. ಹಳ್ಳಿಯ ಜನರೊಡನೆ ಜೊತೆಯಾಗಿ ಸಂಜೆಗೆ ಕಳ್ಳಿನಂಗಡಿಗೆ ಹೋದರೆ ಅವರೊ ಡನೆಯೂ ಬೆರೆತುಕೊಂಡು, ಸುತ್ತುಮುತ್ತಲಿನವರಿಗೆ ತಾನೇ ಕಳ್ಳನ್ನು ತೆಗಿಸಿಕೊಟ್ಟು, ಅವರ ಹುಚ್ಚುನಗೆಗಳಲ್ಲಿ ತಾನೂ ನಗೆಯಾಡುತ್ತಾ ಕೂಡಿ ಕಲೆಯುತ್ತಿದ್ದನು. ಹೀಗೆ ಗ್ರಾಮದ ಜನರಿಗೆ ಆತ ಬಹಳ ಪರಿಚಿ ತನೂ ಬೇಕಾದವನೂ ಪ್ರೀತಿಪಾತ್ರನೂ ಆಗಿಬಿಟ್ಟ.

ಹಳ್ಳಿಯ ಜನರ ಬಾಯಿಯಿಂದ ಮಲ್ಲಯ್ಯನ ಅನೇಕ ಸಾಹಸದ ಕತೆಗಳನ್ನು ಕೇಳಿದನು. ರಾತ್ರಿಯ ಹೊತ್ತಿನಲ್ಲಿ ಒಮ್ಮೊಮ್ಮೆ ಶುಭ್ರವಾದ ಬೆಳದಿಂಗಳಲ್ಲಿ, ಒಮ್ಮೊಮ್ಮೆ ಕಡಲ ದಡದಲ್ಲಿ, ಇನ್ನೊಮ್ಮೆ ತೆಂಗಿನ ಮರ ದಬುಡದಲ್ಲಿ ಮಲ್ಲಯ್ಯನೂ ಹೊನ್ನಿಯೂ ಸರಸವಾಡುತ್ತಿರುವರೆಂಬ ವಿಷ ಯವನ್ನೂ ತಿಳಿದುಕೊಂಡನು.

'ಹೀಗೆ ಅವರು ಬಹುಕಾಲ ಇರಲಾರರು' ಅಪ್ಪಯ್ಯ ತನ್ನ ಮನಸ್ಸಿ ನಲ್ಲಿಯೇ ಹೇಳತೊಡಗಿದ.

ಹೊನ್ನಿಯ ಗುಡಿಸಲಿಗೆ ಏನಾದರೊಂದು ನೆವಮಾಡಿ ಆಗಾಗ ಹೋಗುತ್ತಾ ಇದ್ದ. ಆದರೆ ಅಲ್ಲಿ ಅವನಿಗೆ ಯಾವ ಸ್ವಾಗತವೂ ಸಿಗಲಿಲ್ಲ. ಇವನ ವಿಷಯ ಅವರಿಗೆ ಸಂಶಯವಾಗದೆಯೂ ಇರಲಿಲ್ಲ. ಆದರೆ ದಿನ

ದಿಂದ ದಿನಕ್ಕೆ ಹಳ್ಳಿಯ ಜನರಿಂದ ಹೊಗಳಿಕೆಗಳನ್ನೇ ಕೇಳಿ, ಹಾಗೂ ಆತನ ಹಣದಾಸೆಗೆ ಮರುಳಾಗಿ ಹೊನ್ನಿಯು ಸಾಕುತಾಯಿ ಮೆಲ್ಲಮೆಲ್ಲನೆ ಸ್ವಾಗತಿಸ ತೊಡಗಿದಳು.

ಹೊನ್ನಿ ಒಂದುದಿನ ಸಾಕುತಾಯಿಯೊಡನೆ ಕುಳಿತುಕೊಂಡು ಏನೋಮಾತುಕತೆ ನಡೆಸುತಿದ್ದಳು. ಕಳ್ಳನನ್ನು ಹಿಡಿಯುವುದಕ್ಕಿಂತಲೂ ಇತ್ತೀಚೆಗೆ ಅಪ್ಪಯ್ಯನಿಗೆ ಹೊನ್ನಿಯನ್ನು ಪಡೆವ ಅಭಿಲಾಷೆಯೇ ಹೆಚ್ಚಾಯಿತು. ಸುತ್ತು ಹೊಲಗಳಲ್ಲಿ, ಗದ್ದೆಗಿಳಿದು ಸಂತೋಷದಿಂದ ಹಾಡುತ್ತಾ, ಚಿಗರಿಯಂತೆ ನೆಗೆಯುತ್ತಾ, ಆಗಾಗ ಕೈಯಲ್ಲಿ ಕೊಯ್ಯುವ ಕತ್ತಿಯನ್ನು ಎತ್ತಿಹಿಡಿದು, ಬಿಚ್ಚಿದ ಕೂದಲರಾಶಿಯನ್ನು ಮುಡಿಗಟ್ಟಿ, ಸುಂದರವಾಗಿ ತೋರುವ ಬಳುಕುವ ಬೆಡಗಿನ ಬಾಲೆಯರನ್ನು ಆತ ನೋಡಿದ್ದನು. ಆದರೆ ಅವರೆಲ್ಲರ ರಾಣಿ ಈಕೆಯೆಂದು ಅವನಿಗೆ ಹೊಳೆಯಿತು. ಸರಕಾರದ ಆಜ್ಞೆಯೂ ಆಕೆಯ ಮೇಲಿನ ಅಭಿಲಾಷೆಯೂ ಎರಡೂ ಸೇರಿ ಅಪ್ಪಯ್ಯ ಮಲ್ಲಯ್ಯನನ್ನು ಬಹಳವಾಗಿ ದ್ವೇಷಿಸತೊಡಗಿದ.

ಒಮ್ಮೆ ಪೇಟೆಗೆ ಹೋದವನೇ ಒಂದು ನೂತನವಾದ ಸೀರೆಯನ್ನು ತಂದನು. ಹಳ್ಳಿಯ ಜನರು ಅಂತಹ ಸೀರೆ ಕಂಡಿರಲಿಕ್ಕೇ ಸಾಧ್ಯವಿರಲಿಲ್ಲ ಹೊನ್ನಿಗೆ ಇದು ಉಡುಗೊರೆಯಾಗಿತ್ತು. ಆಕೆಯ ಪ್ರೇಮ ಸಂಪಾದಿಸಿಕೊಳ್ಳಬೇಕೆಂದು ಅವಳ ಗುಡಿಸಲ ಬಳಿ ಹೋದ.

'ಹೊನ್ನೀ, ಈ ಚೆಲುವಾದ ಸೀರೆಯನ್ನುಟ್ಟು ಕೊಂಡರೆ ನೀನು ಇನ್ನಷ್ಟು ಸುಂದರಳಾಗಿ ತೋರುವಿ' ಸೀರೆಯನ್ನು ಹೊನ್ನಿಗೆ ಕೊಡಹೋದ.

ಆ ಮಾತನ್ನು ಮೆಚ್ಚದವಳಂತೆ ಹೊನ್ನಿ ಆತನಿಗೆ ಬೆನ್ನುಹಾಕಿ ಹೊರಹೋದಳು. ತನ್ನ ಉಪಾಯವು ಸಾಧಿಸಲಿಲ್ಲವೆಂದೂ, ಇನ್ನೊಂದು ಉತ್ತಮವಾದ ಹಂಚಿಕೆ ಹುಡುಕಬೇಕೆಂದೂ ಆತ ಕೆಲದಿನ ತಲೆಕೆದರಿ ಯೋಚಿಸಿಕೊಂಡ.

ಕೊನೆಗೆ ಒಂದು ಯೋಚನೆ ಹೊಳೆಯಿತು. ತಾನು ಮಲ್ಲಯ್ಯನ ಹಿತಚಿಂತಕನೆಂದೂ, ಆತನನ್ನು ಹಿಡಿಯಲು ಸರಕಾರವು ಪ್ರಯತ್ನಿಸುತ್ತಿರುವಾಗ ತಾನು ಸಾಧ್ಯವಿದ್ದಷ್ಟು ಸಾಹಸಮಾಡಿ ತಪ್ಪಿಸಲು ಪ್ರಯತ್ನಮಾಡುವನೆ

ನೆಂದೂ ಹೇಳಿದರೆ ಹೊನ್ನಿ ತನ್ನೊಡನೆ ಇದರಿಂದ ಹೆಚ್ಚು ಸಲಗೆಯಿಂದಿರ ಬಹುದೆಂದೂ, ಮುಂದೆ ಆಕೆ ಗುಟ್ಟುಗಳನ್ನು ಹೇಳಬಹುದೆಂದೂ ವಿಚಾರಿ ಸಿಕೊಂಡ.

'ಮಲ್ಲಯ್ಯನನ್ನು ಹಿಡಿಯಲು ಸರಕಾರ ಇಲ್ಲಿಗೆ ಜನಕಳುಹಿಸಿರುವ ರೆಂದು ಸುದ್ದಿಯಿದೆ' ಒಮ್ಮೆ ಅಪ್ಪಯ್ಯ ಹೊನ್ನಿಗೊಡನೆ ಹೇಳಿದ. ಈ ಮಾತಿನ ಪರಿಣಾಮ ಅವಳ ಮೇಲೆ ಏನಾಗುವದೋ ಆತ ನಿರೀಕ್ಷಿಸು ತ್ತಿದ್ದ. ಹೊನ್ನಿ ಪ್ರತಿನಯಂತೆ ಕೇಳುತ್ತಿದ್ದಳು. 'ಇಲ್ಲ ಹೊನ್ನಿ, ನಾನು ನಿನ್ನ ಮಲ್ಲಯ್ಯನನ್ನು ಬಹಳ ಮೆಚ್ಚುತ್ತೇನೆ. ಅವನ ಹಾಗಿರುವ ಪರೋಪಕಾರಿಗಳು ಯಾರಿದ್ದಾರೆ? ನನಗೆ ಸಾಧ್ಯವಾದರೆ ಅವನ ಕೂದಲೆ ಳೆಯನ್ನು ಕೂಡಾ ಸರಕಾರ ಮುಟ್ಟಲಾಗದಂತೆ ನೋಡಿಕೊಳ್ಳುವೆನು'

ಹೊನ್ನಿ ಒಮ್ಮೆ ಮುಗುಳ್ನಗೆ ನಕ್ಕಳು. ಅಪ್ಪಯ್ಯನಿಗೆ ಆಕೆ ಬಹಳ ಮುದ್ದಾಗಿ ತೋರಿದಳು.

'ನಿನಗೇನಾದರೂ ಸಂಶಯವುಂಟೋ ಈ ವಿಷಯದಲ್ಲಿ. ನನ್ನ ಶರೀರವನ್ನು ನೋಡು. ನಾನು ಬಲಶಾಲಿಯಾಗಿಲ್ಲವೆ? ಒಂದು ಮುಷ್ಟಿ ಪೆಟ್ಟಿನಲ್ಲಿ ಐದು ಜನ ಪೋಲೀಸರನ್ನು ಪುಡಿಮಾಡಬಲ್ಲೆ'.

'ಸರಕಾರದಲ್ಲಿ ನಿನಗಿಂತ ಬಲಶಾಲಿಗಳು ಹಲವರಿರಬಹುದು; ಅವರ ಭಯಂಕರ ಆಯುಧಗಳ ಮುಂದೆ ನಿನ್ನ ಮುಷ್ಟಿಯುದ್ಧ ಪ್ರಯೋ ಜನ ಬೀಳಲಿಕ್ಕಿಲ್ಲ' ಹೊನ್ನಿ ಇದೇ ಮೊದಲನೆಯದಾಗಿ ಆತನೊಡನೆ ಮಾತನಾಡತೊಡಗಿದಳು.

'ನಿನಗೆ ನನ್ನ ವಿಷಯಗೊತ್ತಿಲ್ಲ. ಅವರ ಆಯುಧಗಳೋ? ಇಲ್ಲಿ ನೋಡು, ಹರಿತವಾದ ಖಡ್ಗ, ತೀಕ್ಷ್ಣವಾದ ಅಸ್ತ್ರ ನನ್ನ ಸೊಂಟದ ಲ್ಲಿಯೂ ಇದೆ' ಅಡಗಿಸಿದ್ದ ಆಯುಧಗಳನ್ನು ಅಪ್ಪಯ್ಯ ಹೊರತೆಗೆದು ತೋರಿಸಿದ. 'ಈಗಲಾದರೂ ನಂಬುತ್ತೀಯಾ?'

'ಈ ವಿಷಯ ಮೊದಲೇ ನೀನು ಯಾಕೆ ನನಗೆ ತಿಳಿಸಿರಲಿಲ್ಲ?' ಆಕೆ ಪ್ರಶ್ನಿಸಿದಳು.

'ನೀನು ಇದಕ್ಕೆ ಸಂದರ್ಭವೇ ಕೊಡಲಿಲ್ಲವಲ್ಲ! ನಾನು ಬಹಳವಾಗಿ

ಮೆಚ್ಚುತ್ತಿರುವ ಮಲ್ಲಯ್ಯನ ಸಾಹಸಗಳನ್ನು ನಿನ್ನ ಬಾಯಿಯಿಂದಲೂ ತುಂಬಾ ಕೇಳಬಹುದಿತ್ತು. ನೀನು ಇದು ಮೊದಲು ನಾನೆಷ್ಟುಸಲ ಮಾತನಾಡಿಸಿದರೂ ನನ್ನೊಡನೆ ತುಟಬಿಚ್ಚಿದೆಯೆ?'

'ನೀನೂ ಅವನನ್ನು ಅಷ್ಟೊಂದು ಮೆಚ್ಚುತ್ತೀ ಎಂದು ನಾನು ತಿಳಿಯದೆಹೋದೆ' ಹೊನ್ನಿ ಒಮ್ಮೆ ಮಧುರವಾಗಿ ಮುಗುಳ್ನಕ್ಕು, ಹೊರಹೋದಳು. ಆ ಮಧುರವಾದ ನಗೆಯೇ ಆತನಿಗೆ ಆ ರಾತ್ರಿಯಿಡೀ ನಿದ್ರೆಯಿಲ್ಲದಂತೆ ಮಾಡಿತು.

ತಾನು ಗೆದ್ದೆನೆಂದು ಅಪ್ಪಯ್ಯ ಹಿಗ್ಗಿಹೋದ. ಇನ್ನು ಮುಂದೆ ಆಕೆ ತನ್ನನ್ನು ಹತ್ತಿರಮಾಡಿಕೊಳ್ಳುವಳೆಂದೂ ಉಬ್ಬಿಬಿಟ್ಟ. ಆ ಮೇಲೆ ಅವಳ ಗುಡಿಸಲ ಬಳಿ ಹೋಗಿ ಬರುವುದು, ಅವಳೊಡನೆ ಮಾತನಾಡುವುದು ಹೆಚ್ಚಾಯಿತು. ಸರಕಾರದವರ ಗುಪ್ತ ಹಂಚಿಕೆಗಳನ್ನು ತಿಳಿಸುವವನಂತೆ ಆಗಾಗ ಕೆಲವು ವಿಷಯಗಳನ್ನು ಅವಳಿಗೆ ಹೇಳುತ್ತಿದ್ದ. ಅದನ್ನು ಕೇಳುತ್ತಾ ಕೇಳುತ್ತಾ ಆಕೆ ನಗಾಡುತ್ತಿದ್ದಳು. 'ಈಕೆ ಬಹಳ ಧೈರ್ಯಶಾಲಿನಿ' ಆತ ಮೊದಮೊದಲು ಆಲೋಚಿಸಿದ. ಕಡೆಗೆ ಮಲ್ಲಯ್ಯನ ವಿಷಯ ನಿರುತ್ಸಾಹದಿಂದ ಹೀಗೆ ಆಕೆ ನಗುತ್ತಿರಬಹುದೇ ಎಂದು ಬಗೆದುಕೊಂಡ.

ಒಂದು ಬೆಳದಿಂಗಳ ರಾತ್ರಿ; ಕಡಲ ದಡಕ್ಕೆ ಇಬ್ಬರೇ ಹೋಗುವಂತೆ ಆಕೆಗೆ ಆತ ಸೂಚಿಸಿದ. ಆಕೆಯೂ ಕೂಡಲೇ ಸಮ್ಮತಿಸಿದಳು. ಅಪ್ಪಯ್ಯ ಸೀಗ ಹಿಗ್ಗಿಬಿಟ್ಟ ಕಡಲದಡದಲ್ಲಿ ತೆಂಗಿನಮರದ ಕೆಳಗೆ ಇಬ್ಬರೂ ಕುಳಿತರು. ಆತ ತನ್ನ ಹೃದಯದ ಪ್ರೇಮವನ್ನು ಆಕೆಗೆ ಬಿಚ್ಚಿ ಹೇಳಿದ. ಅವಳು ಮಾತೆತ್ತಲಿಲ್ಲ ಮುಗುಳ್ನಗೆ ತೋರಿಸಲೂ ಇಲ್ಲ. 'ಎಳೆಹುಡುಗಿ ನಾಚಿಕೆಯಿರಬಹುದು, ಮುಂದೆನೋಡುವ' ಎಂದು ಆದಿನ ಆಕೆಯೊಡನೆ ಗುಡಿಸಲಿಗೆ ಹಿಂತಿರುಗಿದ.

ದಿನಗಳು ಉರುಳಿದವು. ಒಂದು ದಿನ ಹೊನ್ನಿಯೇ 'ಹೊರಹೋಗುವ' ಎಂದು ಅಪ್ಪಯ್ಯನೊಡನೆ ಹೇಳಿದಳು. ಇದನ್ನು ಕೇಳಿ ಅಪ್ಪಯ್ಯನು ಕನಸಿನಲ್ಲಿಯೇ ಗೋಪುರಕಟ್ಟಲು ತೊಡಗಿದ. ವಿಚಾರಮಾಡು

ತ್ತಿದ್ದಂತೆ ಆತನಿಗೆ ಒಮ್ಮೆಲೇ ರೋಮಾಂಚನವೂ ಆಯಿತು. 'ಈ ಸಲ ಆಕೆ ತನ್ನ ಸ್ವಾಧೀನ ಆಗುತ್ತಾಳೆ. ಅವಳ ತುಟಿಯ ಜೇನನ್ನು ನಾನು ಹೀರಿಯೇ ಬಿಡುತ್ತೇನೆ' ಈ ಆಲೋಚನೆಮಾಡುತ್ತಿದ್ದಂತೆ ಅಪ್ಪಯ್ಯನ ತಲೆತಿರುಗುತಿತ್ತು!

ಬೆಳದಿಂಗಳ ರಾತ್ರಿ; ಇಬ್ಬರೂ ಮುಂದೆಮುಂದೆ ಸಾಗಿದರು. ಅಪ್ಪಯ್ಯ ತನ್ನ ಹೃದಯದ ಪ್ರೇಮ ಕೋಲಾಹಲಗಳನ್ನು ವರ್ಣಿಸಿ ಹೇಳುತ್ತಾ ಇದ್ದ. ಅವರು ನಡೆದು ಒಂದು ಬೆಟ್ಟದ ಎತ್ತರ ಸ್ಥಳಕ್ಕೆ ಬಂದರು. ಅಲ್ಲಿ ಒಂದು ಮರದ ನೆರಳಲ್ಲಿ ಬಂದು ಕುಳಿತುಕೊಂಡರು. ಅಪ್ಪಯ್ಯ ಕುಳಿತ ಸ್ಥಳದ ಸಮೀಪ ಒಂದು ಪೊದರು ಇತ್ತು.

'ಹೊನ್ನಿ, ನಾನು ನಿನ್ನ ಮಲ್ಲಯ್ಯನಿಗಿಂತ ಕಡಿಮೆಯವನೆ?'

ಹೊನ್ನಿ ನಗಾಡಿದಳು. ಆತನ ಕಿವಿಗಳಿಗೆ ಅದು ಮಧುರ ಸಂಗೀತವಾಗಿ ಕೇಳಿತು. ತನ್ನ ಹೃದಯದ ಆಕಾಂಕ್ಷೆಗಳನ್ನು ಅಡಗಿಸಲು ಆಕೆ ಹಾಗೆ ನಗಾಡುತ್ತಾಳೆಯೇ ಎಂದುಕೊಂಡ. ತನ್ನಮನೆ, ತನ್ನಕುಲ, ತನ್ನ ಕುಟುಂಬದ ಘನಸ್ತಿಕೆ, ಧನಧಾನ್ಯ ಸಂಪತ್ತು, ಒಂದೊಂದೇ ವಿಷಯಗಳನ್ನು ಆಕೆಯ ಮುಂದೆ ವರ್ಣಿಸಿ ಹೇಳಿದ. ಇದರೊಂದಿಗೆ ಒಬ್ಬ ಕಳ್ಳನನ್ನು ಪ್ರೇಮಿಸುವುದರ ನಿರರ್ಥಕತೆಯನ್ನೂ ತಿಳಿಸಿ ಹೇಳಲು ಮರೆಯಲಿಲ್ಲ. 'ಹೇಳು, ಕೊನೆಗೆ ಅವನ ಗತಿಯೇನ., ಘಾತಿಯಲ್ಲವೆ?' ಅಪ್ಪಯ್ಯ ಕೇಳಿದ.

ಹೊನ್ನಿ ಒಮ್ಮೆ ಹೊರಳಿ ನೋಡಿದಳು. ಇಷ್ಟೇ ಅವನಿಗೆ ಸಾಕಾಯಿತು. ಆಕೆಯನ್ನು ಬರಸೆಳೆಯಲು ಆತ ಮುಂದುವರಿದ.

ಹಾ! ಬಾಣವೊಂದು ಅಪ್ಪಯ್ಯನ ಎದೆಯನ್ನು ನಾಟಿತ್ತು! ನೆಲಕ್ಕೆ ಒರಗಿದವನೇ ಸೊಂಟದ ಖಡ್ಗಕ್ಕೆ ಕೈಹಾಕಿದ. ಅಷ್ಟರಲ್ಲಿ ಇನ್ನೊಂದು ಬಾಣಬಿತ್ತು. ಹೊನ್ನಿ ಗಟ್ಟಿಯಾಗಿ ನಗುತ್ತಿದ್ದಳು! ಬೆಟ್ಟದ ಗುಹೆಗಳೂ ಮಾರ್ದನಿಗೊಡುವಂಥಾ ಅಟ್ಟಹಾಸ! ಮಧುರ ಸಂಗೀತದ ಇಂಪು ಅದರಲ್ಲಿರಲಿಲ್ಲ.

ಪೊದರಿನೆಡೆಯಿಂದ ದೀರ್ಘಕಾಯದ ಮನುಷ್ಯನೊಬ್ಬನು ಹೊರ

ಬಂದ. ಹೊನ್ನಿ ಓಡಿಹೋಗಿ ಆತನನ್ನು ಅಪ್ಪಿಕೊಂಡಳು. ಅಪ್ಪಯ್ಯ ನನ್ನು ಅಲ್ಲಿ ಹಾಗೆಯೇ ಬಿಟ್ಟು ಅವರು ಕೈಕೈ ಹಿಡಿದು ಗುಡಿಸಲ ಹಾದಿ ಹಿಡಿದು ಸಾಗಿದರು.

'ಪ್ರಿಯೇ, ಹೀಗೆ ಆತನನ್ನು ಮರೆಮೋಸದಿಂದ ಕೊಲ್ಲಲು ನನಗೆ ಇಷ್ಟವಿರಲಿಲ್ಲ.'

'ಪ್ರಿಯಾ, ಆತನ ಸೊಂಟದಲ್ಲಿ ಯಾವಾಗಲೂ ಹರಿತವಾದ ಖಡ್ಗ ಇತ್ತು.'

'ಹುಚ್ಚಿ! ಮಲ್ಲಯ್ಯನಿಗೂ ಅದರ ಹೆದರಿಕೆಯೆ?'

ಸಿಂಹ ಸಿಂಹಿಣಿಗಳ ಗರ್ಜನೆಯಂತೆ ಅವರ ನಗು ಗಿರಿಗಹ್ವರಗಳಲ್ಲಿ ಅಲೆಯಲೆಯಾಗಿ ಮಾರ್ದನಿಗೊಡುತಿತ್ತು.

ನ್ಯಾಯ ಮೂರ್ತಿ

ನಿಸ್ಸಹಾಯಕಳಾದ ಆ ತರುಣಿಯು ನೆಲದ ಮೇಲೆ ಬಿದ್ದುಕೊಂಡು ತನ್ನ ದುರವಸ್ಥೆಗಾಗಿ ಮರುಗುತ್ತಾ ತೋಳುಗಳೆಡೆಯಲ್ಲಿ ತಲೆಯಿರಿಸಿ ಕೊಂಡು ಕಂಬನಿ ಸುರಿಸುತ್ತಿದ್ದಳು. ಉಸ್ಮಾನ್ ಖಾನನು ಆಕೆಯನ್ನು ದುರದುರನೆ ನೋಡುತ್ತಿದ್ದನು. ಆ ಮಾನಿನಿಯ ಹೃದಯದ ಮರುಕ ಸಂತಾಪಗಳ ತಿಳಿವೇ ಅವನಿಗಿಲ್ಲ. ಆಕೆ ಯುವತಿಯಿದ್ದು ಆತನ ಕಣ್ಣಿಗೆ ಮೋಹಕಳಾಗಿ ಮಾತ್ರ ತೋರಿದಳು. ಆಕೆಯ ಮುಂಗುರುಳು ಮನೋ ಹರವಾಗಿ ತಲೆತುಂಬಿ ಚೆಲ್ಲಿತ್ತು. ಆದರೂ ಅವಳನ್ನು ದಿಟ್ಟಿಸುತಿದ್ದಂತೆ ಯಾವುದೋ ಒಂದು ತರದ ಭೀತಿ ಆತನ ಹೃದಯವನ್ನು ಆವರಿಸಿತು. ಬಹುಶಃ ಆಕೆಯ ಆತ್ಮಶಕ್ತಿಯಿಂದ ಆತನ ಹೃದಯವು ಹಾಗೆ ಭಯ ಗೊಂಡಿತೇನೊ! ಆಕೆಯನ್ನು ತಾನು ಹೇಳಿದಂತೆ ಒಪ್ಪಿಸಿ ಬಹಳ ಬಹು ಮಾನ ಪಡೆಯುವೆನೆಂಬ ಆಸೆ ಆತನಿಗೆ ಇನ್ನೂ ಇತ್ತು. ಹಾಗಿದ್ದರೂ ಅವಳ ಕಡೆಗೆ ನೋಡುತ್ತಿದ್ದಂತೆ ಏನೋ ಒಂದುತರದ ಸಂಶಯ, ಇದುವ ರೆಗೆ ತನ್ನ ಜೀವಮಾನದಲ್ಲಿ ಎಂದೂ ಅನುಭವಿಸಿರದ ಭೀತಿ, ಆತನನ್ನು ಪೀಡಿಸ ತೊಡಗಿತು.

ಸ್ವಲ್ಪ ಹೊತ್ತಿನ ಹಿಂದೆ ಆಕೆ ಅಲ್ಲಿಗೆ ತರಲ್ಪಟ್ಟಿದ್ದಳು. ಪಲ್ಲಕ್ಕಿ ಯಲ್ಲಿ ತನಗೆ ಪರಿಚಯವಿಲ್ಲದ ಈ ಮನೆಗೆ ತಂದ ಕ್ಷಣದಿಂದಲೇ ಆಕೆಗೆ ಸಿಡಿಲು ಬಡಿದಂತಾಗಿ ಅಲ್ಲಿಯೇ ನೆಲದ ಮೇಲೆ ಬಿದ್ದು ಒಂದೇ ಸಮನೆ ಅಳತೊಡಗಿದಳು. ತನ್ನನ್ನು ಎಲ್ಲಿಗೆ ತಂದಿರುವರು? ಯಾರು ತಂದವರು? ಯಾತಕ್ಕಾಗಿ ತನ್ನ ಮೇಲೆ ಈ ಅನ್ಯಾಯ ಮಾಡಿದರು? ತನ್ನ ಮುಂದಿನ ಅವಸ್ಥೆಯೇನು? ಯಾವುದೂ ಆಕೆಗೆ ಹೊಳೆಯಲೇ ಇಲ್ಲ. ನಿರ್ಗತಿಕಳಾಗಿ, ನಿರಾಶಳಾಗಿ, ದೀನಳಾಗಿ ದುಃಖಿಸುತ್ತಾ ಇದ್ದಳು.

'ಸುಂದರೀ, ನೀನು ವ್ಯರ್ಥ ಅಳುತ್ತೀ' ಉಸ್ಮಾನ್ ಖಾನ್ ಸಮಾಧಾ ನಪಡಿಸುತ್ತಾ, ಮಾತನಾಡಿಸತೊಡಗಿದ. 'ನಿನ್ನ ಜೀವಿತದ ಭಾಗ್ಯೋ

ದಯು ಕಾಲವೀಗ ಬಂದಿದೆ. ನಿನಗೆ ಈ ಲೋಕದಲ್ಲಿ ಒದಗಬಹುದಾದ ಸಕಲ ಭಾಗ್ಯ ಸಂಪತ್ತುಗಳಿಗೂ ಬಾದಶಹನ ಪ್ರೇಮ ಮುಖ್ಯವಾದುದು. ನೀನು ಹಿಂದೂ ಸ್ತ್ರೀಯಾದರೂ ಮಹಾ ಸಾಮ್ರಾಜ್ಯದ ಅಧಿರಾಜ್ಞಿ ಯಾಗುವಿ'

ತರುಣಿ ಒಮ್ಮೆಲೇ ಎದ್ದು ಕುಳಿತು ಉಸ್ಮಾನ್ ಖಾನನನ್ನು ದಿಟ್ಟಿಸಿ ನೋಡಿದಳು. ಯಾವುದೋ ಒಂದು ಕೆಟ್ಟ ಸ್ವಪ್ನಲೋಕದಲ್ಲಿ ತಾನಿರು ವಂತೆ ಆಕೆಗೆ ಭಾಸವಾಯಿತು. ದೃಷ್ಟಿಯನ್ನು ಒಮ್ಮೆ ಅತ್ತಿತ್ತ ತಿರುಗಿಸಿ ದಳು. ತಾನು ಇಲ್ಲಿರುವುದು ನಿಜವಾಗಿ ಒಂದು ಕೆಟ್ಟ ಕನಸೇ ಆಗಿರಬ ಹುದೇ ಎಂದು ಒಮ್ಮೆಗೆ ಅವಳಿಗನಿಸಿತು. ಉಸ್ಮಾನನ ಈ ಧೂರ್ತ ವಚ ನಗಳೂ ಆಕೆಯ ಕಿವಿಗೆ ಕೇಳಿಸಲೇ ಇಲ್ಲ. ಅವಳ ಮುಖದಲ್ಲಿ ಸಹಜ ತೆಯ ಚಿಹ್ನೆಯೇ ಇರಲಿಲ್ಲ. ಕೋಪಸಂತಾಪಗಳು ಆಕೆಯ ಹೃದಯ ದಲ್ಲಿ ಉಕ್ಕಿಬರುತಿದ್ದವು. ಹಾಗೆ ಎದ್ದು ಕುಳಿತವಳೇ ತಾನು ಹೇಗೆ ಈ ನರಕ ಸಮಾನವಾದ ಮನೆಗೆ ಬಂದೆನೆಂದು ಚಿಂತಿಸ ತೊಡಗಿದಳು.

ಉಸ್ಮಾನ್ ಖಾನನಿಗೂ ಅವಳ ಮನೋಭಾವನೆ ಹೊಳೆಯದಿರಲಿಲ್ಲ.

'ತರುಣೀ, ಹೆದರಬೇಡ; ಭದ್ರವಾದ ಮನೆಯೊಳಗೆ ನೀನಿರುತ್ತಿ. ಇಲ್ಲಿ ಯಾರ ಅಂಜಿಕೆಯೂ ಇಲ್ಲ. ನಿನ್ನ ಪಲ್ಲಕ್ಕಿ ಹೊರುವವರೇ ನಿನ್ನನ್ನು ಇಲ್ಲಿಗೆ ಕರತಂದಿದ್ದಾರೆ. ನಿನ್ನ ಅದೃಷ್ಟದಲ್ಲಿ ಮಹಾಸಾಮ್ರಾಟ್ ಬಾದ ಶಹ ಹುಮಾಯೂನನ ಪಟ್ಟದ ರಾಣಿಯಾಗುವ ಸೌಭಾಗ್ಯ ಬರೆದಿರುವುದ ರಿಂದಲೇ ಇಂತಹ ಅಪೂರ್ವ ಸಂದರ್ಭವು ಒದಗಿತು.' ಉಸ್ಮಾನ್‌ಖಾನ್ ಹೀಗೆ ಹೇಳುತ್ತಾ ಆಕೆಯ ಕನಸನ್ನು ಭೇದಿಸಿದನು.

ತನ್ನ ಅವಸ್ಥೆಯ ಅರಿವು ಆಗ ಆಕೆಗೆ ಆಯಿತು. ಶರೀರವು ಆದ್ಯಂತ ನಡುಗುತಿತ್ತು.

'ನಾನೀಗ ಎಲ್ಲಿರುವೆನು? ಇಲ್ಲಿಗೆ ನನ್ನನ್ನು ಯಾರು ಕರೆತಂದರು ಹೇಳು' ತರುಣಿಯು ಭಯ ಆಗ್ರಹಗಳಿಂದ ಆತನೊಡನೆ ಪ್ರಶ್ನಿಸಿದಳು.

ಬಾದಶಹ ಹುಮಾಯೂನನು ಒಮ್ಮೆ ಸಂಜೆಯ ತಿರುಗಾಟಕ್ಕೆ ಹೊರ ಟಿದ್ದಾಗ, ಕಿಟಕಿಯ ಬಳಿ ಕುಳಿತಿದ್ದ ಲಾವಣ್ಯಮಯಿಯಾದ ಆಕೆಯನ್ನು

ಕಂಡು ಅವಳ ರೂಪಲಾವಣ್ಯಗಳಿಗೆ ಮೋಹಿತನಾದ ವಿಷಯವನ್ನು ಉಸ್ಮಾನಖಾನನು ವಿವರಿಸತೊಡಗಿದನು. 'ಮಹಾಪ್ರಭುವು ನಿನ್ನೀ ಸುಂದರ ಮುಖವನ್ನು ದೃಷ್ಟಿಸಿದ ಕ್ಷಣದಲ್ಲಿಯೇ' ಉಸ್ಮಾನ್‌ಖಾನ್ ಮುಂದುವರಿಸಿದ 'ಇಡೀ ಸಾಮ್ರಾಜ್ಯದಲ್ಲಿ ಅರಳಿದ ಹೂಗಳಲ್ಲಿ ನೀನು ಅತ್ಯಂತ ಚೆಲುವಾದ ಪುಷ್ಪವೆಂದು ಸಾರ್ವಭೌಮನ ತುಟಿಗಳಿಂದ ಮಾತು ಹೊರಬಿತ್ತು.' ಹಾಗಾಗಿ ಆಕೆ ಮಹಾರಾಣಿ ಪದವಿಯನ್ನು ದೊರಕಿಸಲು ತಾನು ಹೀಗೆಲ್ಲಾ ಪ್ರಯತ್ನಿಸಬೇಕಾಯಿತೆಂದೂ ಉಸ್ಮಾನನು ವಿವರಿಸಿ ಹೇಳಿದನು. 'ಭಾಗ್ಯವತಿಯಾದ ಸುಂದರಿಯೇ, ದೇಗುಲದಿಂದ ನಿನ್ನನ್ನು ಈ ಮನೆಗೆ ಸೀದಾ ಹೊತ್ತು ತರುವಂತೆ ಪಲ್ಲಕ್ಕಿ ಹೊರುವವರಿಗೆ ಲಂಚ ತೆತ್ತು ಕರೆತಂದೆನು. ಇವೆಲ್ಲಾ ನಿನ್ನ ಸುಖಸೌಭಾಗ್ಯಗಳನ್ನು ಹೆಚ್ಚಿಸುವ ಸಲುವಾಗಿ. ನಿಜವಾಗಿ ಹೇಳು—ನಿನ್ನ ಜೀವಮಾನದಲ್ಲಿ ಎಂದಾದರೂ ನೀನು ಈ ಸುಖಸಂಪತ್ತುಗಳ ಕುರಿತು ಕನವರಿಸಿದ್ದಿಯಾ?' ಉಸ್ಮಾನ್ ಖಾನ್ ಮಾತನ್ನು ಮತ್ತೂ ಮುಂದುವರಿಸಿದ. 'ನನ್ನೀ ಮಾತುಗಳನ್ನು ಗಮನವಿಟ್ಟು ಕೇಳು, ನಿನಗೆ ಶಾಶ್ವತ ಸುಖವೊದಗುವುದು. ನಾನೀಗ ನಿನ್ನನ್ನು ಬಾದಶಹನಲ್ಲಿಗೆ ಕರೆದುಕೊಂಡು ಹೋಗುವೆನು ಅಲ್ಲಿ ನೀನು, ಆತನೊಡನೆ, ಬಾದಶಹನ ಸೇವೆಸಲ್ಲಿಸಲು ಸದಾ ತಾನು ಸಿದ್ಧಳಿರುವುದಾಗಿ ಹೇಳು. ಮುಂದಿನ ಕಾರ್ಯಗಳನ್ನೆಲ್ಲಾ ನಾನು ಮಾಡುವೆನು.'

ಮಾತುಗಳನ್ನು ಕೇಳುತ್ತಿದ್ದಂತೆ ಆಕೆ ಕಂಪಿಸತೊಡಗಿದಳು. ನಿಷ್ಠುರವಾಗಿ ಗಟ್ಟಿಯಾಗಿ ಮಾತನಾಡಬೇಕೆಂದು ಬಯಸಿದ್ದರೂ, ದನಿಯು ಬಹಳ ಕೃಶವಾಗಿಯೇ ಇತ್ತು.

'ನಾನು ವಿವಾಹಿತಸ್ತ್ರೀ; ನನ್ನ ಪತಿಯು ಇನ್ನೂ ಜೀವಂತನಿದ್ದಾನೆ. ಈ ಜೀವನದಲ್ಲಿ ನಾನು ಬೇರೊಬ್ಬನ ಪತ್ನಿಯಾಗುವುದು ಸಾಧ್ಯವಿಲ್ಲ. ಸಂಭವವೂ ಇಲ್ಲ.'

ಉಸ್ಮಾನ್‌ಖಾನನು ಅವಳ ಕಡೆಗೆ ಕಠೋರ ದೃಷ್ಟಿಬೀರಿ ಹೆದರಿಸುವ ಸ್ವರದಲ್ಲಿ ಹೇಳಿದ.

"ಹಾಗಾದರೆ ಭಯಂಕರ ಮೃತ್ಯುವು ನಿನ್ನ ತಲೆಯ ಮೇಲೆ ಸುತ್ತುತ್ತಿದೆಯೆಂದು ತಿಳಿದಿರಲಿ"

ವಿಚಾರ ಮಗ್ನಳಾಗಿ ಆಕೆ ಮೌನಳಾದಳು.

ಉಸ್ಮಾನನು ಈ ಮೌನದಿಂದ ತನ್ನ ಮಾತಿಗೆ ಅವಳು ಸಮ್ಮತಿಸಿದ ಳೆಂದು ಭಾವಿಸಿಕೊಂಡನು. ಬಾದಶಹನ ಅಂತಃಪುರದಲ್ಲಿ ಸಿಗಬಹುದಾದ ಸುಖಸೌಭಾಗ್ಯಗಳನ್ನು, ಭೋಗವಿಲಾಸಗಳನ್ನು, ರತ್ನರಾಶಿಸುವರ್ಣ ಆಭ ರಣ ಅಲಂಕಾರಗಳ ವಿಷಯವನ್ನು, ಸೇವಕ ಸೇವಕಿಯರ ಎಡೆಬಿಡದ ಉಪಚಾರಗಳನ್ನು, ಹುಮಾಯೂನನ ಭವ್ಯವಾದ ಅರಮನೆಯ ಅಂತಃ ಪುರದ ಜೀವಿತ ಸುಖವನ್ನು, ಎಲ್ಲದಕ್ಕಿಂತಲೂ ಮಿಗಿಲಾಗಿ ಬಾದಶಹನ ಹೃದಯ ರಾಣಿಯಾಗಿ, ಸಾಮ್ರಾಜ್ಯದ ಒಡತಿಯಾಗಿ ಜಗತ್ತಿನ ಯಾವ ಸುಂದರಿಯರೂ ಕನವರಿಸಿರದ ಪದವಿಯಲ್ಲಿ ಮೆರೆಯುವ ಸಂತೋಷವನ್ನು ಒಂದೊಂದಾಗಿ ವರ್ಣಿಸ ತೊಡಗಿದನು.

ಪಾಪಿಯ ಈ ಪಾಪಮಯವಾದ ಮಾತುಗಳನ್ನು ಕೇಳುತ್ತಿದ್ದಂತೆ ಅವಳ ಮೈಯಲ್ಲಿ ಉರಿಯೇರುತಿತ್ತು. ಕಣ್ಣಮುಂದೆ ಕತ್ತಲು ಕವಿ ದಂತಾಯಿತು. ಯಾವುದೋ ಒಂದು ದೂರದ ವಸ್ತುವಿನಲ್ಲಿ ಆಕೆಯ ದೃಷ್ಟಿ ನಟ್ಟಂತೆ ತೋರಿತು. ‘ಅರಮನೆ, ಅಂತಃಪುರ,ಬಂಗಾರ, ರತ್ನರಾಶಿ, ವಿಲಾಸ, ಇವುಗಳೆಲ್ಲಾ ನನ್ನ ಪ್ರೇಮಮಯನಾದ ಒಡೆಪತಿಯ ಸ್ನೇಹ ಸುಖಕ್ಕೆ ಸರಿಯೆ?’ ಆಕೆ ತನ್ನಲ್ಲಿಯೇ ಹೇಳಿಕೊಂಡಳು.

ಉಸ್ಮಾನನಿಗೆ ಅವಳ ವಿಚಾರವೊಂದೂ ತಿಳಿಯದು. ಅವಳ ಹೃದಯದಲ್ಲಿ ಮಸುಗುತಿದ್ದ ಕೋಪ ದುಃಖಗಳ ಜ್ವಾಲೆಯನ್ನೂ ಆತನು ಅರಿಯನು; ಬಾದಶಹನಲ್ಲಿಗೆ ಹೋಗಲು ಹೊರಡಬೇಕಾಗಿ ಆತನು ಮತ್ತೆ ಒತ್ತಾಯಪಡಿಸತೊಡಗಿದನು.

ತರುಣಿ ತುಸು ಹೊತ್ತು ಗಾಢ ವಿಚಾರ ಮಾಡಿದಳು. ಕಡೆಗೆ ಬಾದಶಹನಲ್ಲಿಗೆ ಹೋಗಲು ಒಪ್ಪಿಗೆಯಿತ್ತಳು. ಇದನ್ನು ಕೇಳಿ ಉಸ್ಮಾ ನನು ಸಂತೋಷ ಸಂಭ್ರಮಗಳಿಂದ ಪುಲಕಿತನಾದ. ಆತನು ತನ್ನ ಭಾಗ್ಯ ಭವಿಷತ್ತನ್ನು ಕನವರಿಸತೊಡಗಿದ. ಆಸ್ಥಾನದಲ್ಲಿ ತನಗೆ ದೊರಕುವ ಭಾಗ್ಯ ಪದವಿ ಬಾದಶಹನ ವಿಶ್ವಾಸಪಾತ್ರನಾಗಿ ‘ಪ್ರಧಾನ ಮಂತ್ರಿ’ಯಾಗುವ ಕನಸು, ಇವುಗಳನ್ನು ಕನವರಿಸುತ್ತಾ ಇವುಗಳಿಗೆಲ್ಲಾ

ಕಾರಣಾದ ಸುಂದರಿಗೆ ಮನಸ್ಸಿನಲ್ಲಿಯೇ ವಂದಸೆ, ಕೃತಜ್ಞತೆಗಳನ್ನರ್ಪಿಸಿದನು.

ಮುಂದಿನ ಮುಂಜಾನೆ ಬಾದಶಹನನ್ನು ಆಕೆ ಕಾಣುವುದಾಗಿ ಏರ್ಪಾಡಾಯಿತು. ಪ್ರತ್ಯೇಕವಾಗಿ ಸಿಂಗರಿಸಿದ ಒಂದು ಕೋಣೆಗೆ ಸೇವಕಿಯರು ಆಕೆಯನ್ನು ಕರೆದೊಯ್ದರು. ಶೃಂಗಾರ ಸಾಮಗ್ರಿಗಳು, ಸುಗಂಧ ದ್ರವ್ಯಗಳು, ಅನೇಕ ಆಭರಣಗಳು, ನೂತನ ದಿವ್ಯ ವಸ್ತ್ರಗಳು ಎಲ್ಲವೂ ಅಲ್ಲಿ ಸಿದ್ಧವಾಗಿತ್ತು. ಸೇವಕಿಯರು ಸುತ್ತುಗಟ್ಟಿ ಆಕೆಯನ್ನು ಅಲಂಕರಿಸ ಬಂದರು. ಆಕೆ ಯಾವುದನ್ನೂ ಅಂಗೀಕರಿಸಲಿಲ್ಲ. ತಾನು ಉಟ್ಟ ಉಡಿಗೆಯಲ್ಲಿಯೇ ಇರುವುದಾಗಿ ಖಂಡಿತ ಹೇಳಿದಳು.

ಅಂದಿನ ರಾತ್ರಿ ಒಬ್ಬೊಬ್ಬರೇ ಸೇವಕರು ಆಕೆಯ ಬಳಿ ಬಂದು ಬಾದಶಹನ ಒಂದೊಂದೇ ವಿಷಯಗಳನ್ನೆತ್ತಿ ಉಲ್ಲಾಸದಿಂದ ಮಾತನಾಡತೊಡಗಿದರು. ಅರಮನೆಯ ಸೌಭಾಗ್ಯಗಳನ್ನೂ, ಬಾದಶಹನ ಮಹಾ ಪ್ರಭಾವವನ್ನೂ ವಿವರಿಸಿ ಹೇಳುತ್ತಾ ಆಕೆ ಬಹಳ ಅದೃಷ್ಟಶಾಲಿನಿಯೆಂದು ಹೇಳುತ್ತಿದ್ದರು. ಆಕೆ ಇವುಗಳನ್ನೆಲ್ಲಾ ಕೇಳಿ ಒಮ್ಮೆ ನಕ್ಕುಬಿಟ್ಟಳು!

'ಬಾದಶಹನ ಘನತೆ ವೈಭವಗಳಿಂದ ಅರಮನೆಯ ವಿಲಾಸ ಸುಖಗಳಿಂದ ನನಗೇನಾಗಬೇಕು?' ಆಕೆ ತನ್ನಲ್ಲಿಯೇ ಹೇಳಿಕೊಂಡಳು.

ಕತ್ತಲು ಕವಿಯುತ್ತಾ ಬಂದಿತ್ತು. ಸುತ್ತ ಹೆಂಗಳೆಯರು ಮಲಗಿ ಗೊರಕೆ ಹೊಡೆಯುತಿದ್ದರು. ತರುಣಿಗೆ ನಿದ್ರೆ ಬರಲೊಲ್ಲದು. ಚಿಂತಿಸಿ ಕುಳಿತಿದ್ದಳು. ಒಂದೊಂದೇ ವಿಚಾರ ಮೂಡಿದಂತೆ ಹೃದಯವು ದುಃಖದಿಂದ ತುಂಬುತಿತ್ತು. ಧಾರಾಳವಾಗಿ ಅತ್ತುಬಿಟ್ಟಳು. ತನ್ನ ಮನೆ, ತನ್ನ ಪ್ರೇಮಪಾತ್ರನಾದ ಪತಿ, ತನ್ನ ಬಂಧುಬಳಗ ಒಂದೊಂದನ್ನೇ ನೆನೆದು ಆವಳಿಗೆ ತಲೆ ಭಾರವೆನಿಸಿತು. ನೆಲದ ಮೇಲೆ ಹೊರಳಾಡಿದಳು.

ಏನೋ ಒಂದು ದಿವ್ಯ ದೃಶ್ಯ; ಒಂದು ಕನಸು ಕಟ್ಟಿತು. ತೇಜಃಪುಂಜನಾದ ವ್ಯಕ್ತಿ ಬಂದು ಆಕೆಯ ಕಿವಿಯಲ್ಲಿ ಹೀಗೆ ಹೇಳಿತು.

"ಪ್ರೇಮಮಯೀ, ಕಷ್ಟದ ಹೇಮಂತ ಕಾಲ ಹೋಗುವುದು; ಅಳಲಿನ ಮಳೆ ನಿಲ್ಲುವುದು; ಪ್ರೇಮದ ಸುಖದ ವಸಂತ ಕಾಲ ಬೇಗನೇ

ಬರುವುವು ಹೂಗಳು ಅರಳುವವು ಹಕ್ಕಿಗಳು ಇನ್ನೊಮ್ಮೆ ಸುಮಧುರ ಕಂಠಗಳಿಂದ ಹಾಡುವವು. ಯಾವುದೂ ಶಾಶ್ವತವಾಗಿರಲಾರದು. ಈ ಮಹಾ ಸಾಮ್ರಾಜ್ಯವೂ ಸ್ಥಿರವಾಗಿ ಉಳಿಯಲಾರದು. ಪ್ರೇಮ, ಪ್ರೇಮವೊಂದೇ ಅಮರವಾದುದು. ದೇವರನ್ನು ನಂಬು. ಜೀವನದ ದುರ್ದಿನ ಮಾಯವಾಗುವುದು. ನಾವು ಇನ್ನೊಮ್ಮೆ ಒಂದಾಗುವೆವು. ಸುಖದಿಂದ ಕೂಡಿ ಬಾಳುವೆವು."

ಕಣ್ತೆರೆದು ನೋಡಿದಳು. ಕೇವಲ ಕನಸು. ಆಗಲೇ ಬೆಳಕು ಹರಿದಿತ್ತು. ಅಂದೇ ಪ್ರಾತಃಕಾಲ ಆಕೆ ಬಾದಶಹನನ್ನು ನೋಡಲು ಹೋಗಬೇಕಾಗಿತ್ತು.

ಲೋಕದಲ್ಲಿ ಏನೇ ನಡೆಯುತ್ತಿರಲಿ, ಯಾವುದನ್ನೂ ಲೆಕ್ಕಿಸದೆ, ಯಾವುದನ್ನೂ ಗಣಿಸದೆ ಸೂರ್ಯನು ದಿನನಿತ್ಯ ಉದಿಸಿ ಬಂದೇಬರುತ್ತಾನೆ. ಬಾದಶಹನಲ್ಲಿಗೆ ಬರಬೇಕಾಗಿ ಆಕೆಗೆ ಸೂಚನೆ ಬಂತು. ಅಲ್ಲಿಗೆ ಹೋಗುವಾಗಲಾದರೂ ಅಲಂಕಾರ ಮಾಡಿಕೊಳ್ಳೆಂದು ಉಸ್ಮಾನ್‌ಖಾನ್ ಮತ್ತು ಸೇವಕಿಯರು ಒತ್ತಾಯಪಡಿಸಿದರು. ತನ್ನ ದಾರಿದ್ರ್ಯವೇಶದಲ್ಲಿಯೇ ಬಾದಶಹನನ್ನು ನೋಡುವುದಾಗಿ ಆಕೆ ಸ್ಪಷ್ಟ ಹೇಳಿದಳು.

ಉನ್ನತ ರಾಜಪೀಠದಲ್ಲಿ ಹುಮಾಯೂನನು ವಿರಾಜಮಾನನಾಗಿದ್ದನು. ಉಸ್ಮಾನನು ತರುಣಿಯನ್ನು ಕರೆದುಕೊಂಡು ಸಂತೋಷ ಸಂಭ್ರಮದಿಂದ ಬಾದಶಹನ ಬಳಿಬಂದು ಮೂರು ಸಲ ಬಾಗಿ ವಂದಿಸಿದನು.

'ಮಹಾಪ್ರಭೋ, ನಿನ್ನ ನಮ್ರಸೇವಕನು, ನಿನ್ನ ಸಾಮ್ರಾಜ್ಯದಲ್ಲಿ ಅರಳಿರುವ ಎಲ್ಲಾ ಹೂಗಳಿಗಿಂತಲೂ ಅಮೂಲ್ಯವಾದೊಂದು ಪುಷ್ಪವನ್ನು ನಿನಗೆ ಕಾಣಿಕೆಯಾಗಿ ತಂದಿರುವನು. ಈ ಸುಂದರಿಯು ಪ್ರಭುವಿನ ಪಾದಸೇವೆಗೆ ಸಿದ್ಧಳಾಗಿ ಬಂದಿರುವಳು'.

ಪುನಃ ವಂದಿಸಿ ಉಸ್ಮಾನ್‌ಖಾನನು ತನ್ನ ಸ್ಥಳದಲ್ಲಿ ಹೋಗಿ ಕುಳಿತುಕೊಂಡನು.

ತರುಣಿಯೂ ಮುಂದುವರಿದಳು. ಆಕೆಯ ದೃಷ್ಟಿ ಬೆದರಿದ ಜಿಂಕೆಯಂತೆ ಚಲಿಸುತಿತ್ತು. ಬಾದಶಹನಿಗೆ ಬಾಗಿ ವಂದಿಸಿದಳು. ನಡುಗುವ ದನಿಯಲ್ಲಿ ನಮ್ರಳಾಗಿ ಬಿನ್ನವಿಸಿದಳು.

'ನ್ಯಾಯಮೂರ್ತಿಯಾದ ಮಹಾ ಪ್ರಭುವೇ, ನಾನು ಓರ್ವ ಬಡ ಸ್ತ್ರೀ; ನನ್ನ ಪತಿಯೇ ನನ್ನ ದೈವ. ಹಿಂದೂ ಸ್ತ್ರೀ ತನ್ನ ಜೀವಮಾನದಲ್ಲಿ ಇನ್ನೊಬ್ಬನನ್ನು ವರಿಸುವುದು ಸಾಧ್ಯವಿಲ್ಲ. ದೊರೆಯೇ, ನಿನ್ನ ಸೇವಕನು ನನ್ನನ್ನು ವಂಚಿಸಿ ನಿನ್ನಲ್ಲಿಗೆ ತಂದಿರುವನು ನನ್ನ ಮಾನವುಳಿಸಿ ರಕ್ಷಿಸಬೇಕೆಂದು ನಿನ್ನಲ್ಲಿ ನೊರೆಯಿಡುತ್ತೇನೆ'

ಎಲ್ಲರೂ ಮೌನವಾಗಿದ್ದರು. ಸಾಮ್ರಾಟ್ ಹುಮಾಯೂನನು ಎದ್ದು ನಿಂತಾಗ ಸಭೆಯೇ ಭಯಕಂಪಿತವಾಯಿತು. ಉಸ್ಮಾನನ ಕಡೆಗೆ ಬಾದಶಹನು ಉರಿವ ಕಣ್ಣುಗಳಿಂದ ನೋಡಿದನು.

'ನ್ಯಾಯವು ಜಯಿಸಲಿ' ಹುಮಾಯೂನನು ಗಟ್ಟಿಯಾಗಿ ಹೇಳಿದನು.

'ಮೂರ್ಖ, ನೀನು ಹುಮಾಯೂನನಿಗೆ ಮಹಾಪರಾಧಮಾಡಿದ್ದಿ. ನನ್ನ ಸಾಮ್ರಾಜ್ಯದ ಪ್ರಜೆಯೋರ್ವಳಿಗೆ ದುಃಖವನ್ನುಂಟುಮಾಡಿ ಅನ್ಯಾಯಗೈದಿರುವಿ. ಲೋಕದ ಬೆಳಕನ್ನು ನೀನು ಇನ್ನುಮುಂದೆ ನೋಡಬಾರದು.'

ಉಸ್ಮಾನನ ಶರೀರವು ಆದ್ಯಂತ ನಡುಗುತಿತ್ತು.

'ಅವನನ್ನು ಹಿಡಿಯಿರಿ, ಕತ್ತಲು ಕೋಣೆಗೆ ದೂಡಿ ನಾಳೆ ಗಲ್ಲಿಗೇರಿಸಿಬಿಡಬೇಕು'

'ಭಾವೀ ಪ್ರಧಾನಮಂತ್ರಿ'ಯನ್ನು ಸೇವಕರು ಬಂಧಿಸಿದರು. ಬಾದಶಹನು ತರುಣಿಯಕಡೆ ತಿರುಗಿ 'ಕುಲೀನಳಾದ ಗುಣವತಿಯಾದ ಹೆಂಗುಸೇ, ಇನ್ನು ಮುಂದೆ ನೀನು ನನಗೆ ಪುತ್ರಿ ಸಮಾನಳು. ಈ ಸೇವಕನು ಮಾಡಿದ ಅನ್ಯಾಯಕ್ಕಾಗಿ ರಾಜನನ್ನು ಕ್ಷಮಿಸು. ಮಗಳೇ, ನಿನ್ನ ಯಾವ ಅಭಿಲಾಷೆಯನ್ನಾದರೂ ಕೇಳು. ಈಗಲೇ ಕೊಡುತ್ತೇನೆ' ಬಾದಶಹನು ರಾಜಪಲ್ಲಕಿಯನ್ನು ತರುವಂತೆ ಆಜ್ಞಾಪಿಸಿದನು.

ತರುಣಿಯು ಕೃತಜ್ಞತೆಯಿಂದ ಬಾದಶಹನಿಗೆ ಮಣಿದಳು. ಅವಳ ಕಣ್ಣುಗಳಲ್ಲಿ ಆನಂದ ಭಾಷ್ಪವು ಸುರಿಯುತಿತ್ತು.

''ಮಹಾಪ್ರಭೋ, ನಿನ್ನಲ್ಲಿ ನಾನು ಒಂದು ಉಪಕಾರಬೇಡುತ್ತೇನೆ. ನಿನ್ನ ಈ ಸೇವಕನನ್ನು ಕ್ಷಮಿಸಿಬಿಡು. ತಪ್ಪು ಮಾಡುವುದು ಮಾನವಸ್ವಭಾವ; ಕ್ಷಮಿಸುವುದು ದೈವಸಮಾನ. ನಿನ್ನೀ ನ್ಯಾಯದ ನಿರ್ಧಾರವನ್ನು ಈ ದಯಾಭಾವವು ಇನ್ನಷ್ಟು ಬೆಳಗಿಸಲಿ''

ವೀರನಾರಿ

'ಈ ಗುಂಪು ಏಕೆ ಇಲ್ಲಿ ಸೇರಿದೆ?'

'ಭೈರವಿಯೊಬ್ಬಳು ಇಲ್ಲಿಗೆ ಬಂದಿದ್ದಾಳೆ'.

ಹೀಗೆಂದು ಮಾತನಾಡುತ್ತಾ, ಇಬ್ಬರು ಆ ಗುಂಪಿನೊಳ ಹೊಕ್ಕರು. ಈರ್ವರೂ ಒಳ್ಳೆಯ 'ಧಾಂಡಿಗ' ಯುವಕರಿದ್ದರು.

ಕಾಶಿಯ ಮೀನಾಕ್ಷಿ ಘಾಟಿಗೆ ಮೀಯಲೆಂದು ಒಬ್ಬ ಭೈರವಿ ಬಂದಿದ್ದಳು ನೀತಿಗೆಟ್ಟ 'ಫಟಿಂಗ' ಜನರು ಅವಳ ಸುತ್ತು ನೆರೆದು ಗಲಭೆ ಆರಂಭಿಸಿದ್ದರು.

ಪ್ರಾತಃಕಾಲ. ಸುಮಾರು ಎಂಟು ಗಂಟೆಯ ಸಮಯ ಆಗಿರಬಹುದು. ಉದಯ ಸೂರ್ಯನ ಸುವರ್ಣ ಕಿರಣಗಳು ಗಂಗಾನದಿಯ ತೆರೆಯ ಮೇಲೆ ಹೊಳೆಹೊಳೆದು ನರ್ತನಮಾಡುತ್ತಿದ್ದವು. ಹಿಮಕಾಲ. ಛಳಿಯಿಂದ ನಡುಗುತ್ತಿದ್ದರೂ ಪಾವನ ಗಂಗೆಯ ಪವಿತ್ರಸ್ನಾನಕ್ಕಾಗಿ ದೂರಸಮೀಪಗಳಿಂದ ಬಂದ ಹಲವರು ಯಾತ್ರಿಕರು ನದಿಯಲ್ಲಿ ಮುಳುಗೇಳುತಿದ್ದರು. ಹಲವರು ಮುಳುಗು ಹಾಕಿ ಒದ್ದೆಯಾಗಿ ಘಾಟಿನ ಮೇಲೆ ಬಂದು ನಿಂತಿದ್ದರು. ಇನ್ನು ಕೆಲವರು ಆಗಲೇ ವಿಶ್ವನಾಥ ದರ್ಶನಕ್ಕೆ ತೆರಳಿದ್ದರು.

ಆ ಇಬ್ಬರು ಧಾಂಡಿಗರೂ, ಗುಂಪನ್ನು ಚದರಿಸಿ ಭೈರವಿ ಕುಳಿತ ಕಡೆಗೆ ನಡೆದರು. ಯಾರಿಗೂ ಹೆದರದ ಯಾರನ್ನೂ ಗೌರವಿಸದ ಅವರು ಹೆಂಗುಸೊಬ್ಬಳಿಗಾದರೂ ಗೌರವ ಕೊಡಬೇಕೆಂಬುದನ್ನು ಗಣಿಸದೆ ಅವಳ ಹತ್ತಿರ ಹತ್ತಿರ ಬರುತಿದ್ದರು.

ಭೈರವಿಯನ್ನು ಸಮೀಪಿಸಿ ನೋಡಿದಾಗ, ಹಾಗೆ ಅವಳ ಸುತ್ತು ಗುಂಪು ಸೇರಿದ್ದು ಯಾತಕ್ಕೆಂದು ಅವರಿಗೆ ಅರ್ಥವಾಯಿತು ಅವಳು ಯುವತಿಯಾಗಿದ್ದು ಸುಂದರಳೂ ಇದ್ದಳು. ಅವಳ ಬಿಚ್ಚಿದ ಕೇಶ ರಾಶಿಯು ದೀರ್ಘವಾಗಿ ಬಿಟ್ಟಿದ್ದು ತಿರೆತೆರೆಯಾಗಿ ಸೌಂದರ್ಯಮಯ

ವಾಗಿತ್ತು. ಹಿಂದೆ ಒಮ್ಮೆ ಆ ಕೂದಲ ರಾಶಿಯು ಸುಗಂಧಶೋಭಿಯಾಗಿ ಕಾಂತಿಮಯವಾಗಿ ಮನಮೋಹಕವಾಗಿತ್ತೆಂದು ಯಾರಾದರೂ ಊಹಿಸ ಬಹುದಾಗಿತ್ತು. ತಲೆಯ ಕೂದಲನ್ನು ಆಕೆ ಕೆದರದೆ ಇದ್ದರೆ ಅವಳ ಮುಖವು ಮತ್ತಷ್ಟು ಉಜ್ವಲವಾಗಿ ಬೆಳಗುತಿತ್ತು. ಆದರೆ ಇಂದಿನ ಅವಳ ಶರೀರ ಸೌಂದರ್ಯದಲ್ಲಿ ಮಾರ್ದವತೆ ಇರಲಿಲ್ಲ. ಅವಳ ಕಣ್ಣು ಗಳೇ ಆಕೆಯ ಹೃದಯದ ಕಠೋರತೆಯನ್ನು ವ್ಯಕ್ತಪಡಿಸುತಿದ್ದವು. ಅವಳ ಶರೀರವೆಲ್ಲಾ ಏಕ ವಸ್ತ್ರದಿಂದ ಮುಚ್ಚಲ್ಪಟ್ಟು ತಲೆ ಕೈಕಾಲುಗಳು ಮಾತ್ರ ಕಾಣುತಿದ್ದವು. ಅವಳ ತೊಡೆಯ ಮೇಲೆ ಹೊಳೆಯುವ ಮೊನ ಚಾದ ತ್ರಿಶೂಲವೊಂದು ಬಿದ್ದಿತ್ತು.

ಒಮ್ಮೆಯಾದರೂ ಅವಳು ಆ ಹುಚ್ಚು ಜನರ ಗುಂಪಿನ ಕಡೆಗೆ ಕಣ್ಣೆತ್ತಿ ಸಹ ನೋಡಲಿಲ್ಲ. ಅವಳ ದೃಷ್ಟಿ ಎದ್ದು ಬೀಳುವ ಗಂಗೆಯ ತೆರೆಗಳ ಕಡೆಗೆ, ಅದರಲ್ಲಿ ಮನೋಹರವಾಗಿ ಪ್ರತಿಫಲಿಸುವ ಸೂರ್ಯನ ಸುವರ್ಣ ಕಿರಣಗಳ ಸೌಂದರ್ಯದ ಕಡೆಗೆ ಆಕರ್ಷಿಸಲ್ಪ ಟ್ಟಿತ್ತು. ಇಷ್ಟರಲ್ಲಿಯೇ ಅವಳಾದೃಷ್ಟಿಗೆ ಅಡ್ಡವಾಗಿ ಆ ಇಬ್ಬರು 'ಧಾಂಡಿಗರು' ಬಂದು ನಿಂತರು ಅವರ ಕರಿನೆರಳು ಅವಳ ಮೇಲೆ ಬಿತ್ತು.

ಭೈರವಿ ಒಮ್ಮೆ ಕಣ್ಣೆತ್ತಿ ನೋಡಿದಳು. ಅವರು ಹುಚ್ಚು ಹಿಡಿ ದವರಂತೆ ಆಕೆಯನ್ನೇ ದಿಟ್ಟಿಸುತ್ತಿದ್ದರು. ದೃಷ್ಟಿಯನ್ನು ಆಕೆ ಇನ್ನೊಂದು ಕಡೆಗೆ ಹೊರಳಿಸಿದಳು; ಪ್ರಮತ್ತ ಮಾನವ ಪಶುಗಳ ಒಂದು ದೊಡ್ಡ ಗುಂಪೇ ತನ್ನನ್ನು ಎವೆಯಿಕ್ಕದೆ ನೋಡುತಿತ್ತು. ನಿಮಿಷ ಮಾತ್ರದಲ್ಲಿ ಆಕೆ ಎದ್ದು ನಿಂತವಳೇ, ಬಲಗೈಯ್ಯಲ್ಲಿ ಮೊನಚಾದ ತ್ರಿಶೂಲ ವನ್ನು ಹಿಡಿದುಕೊಂಡು ಮಿಂಚಿನಂತೆ ಗುಂಪನ್ನು ಭೇದಿಸಿ ಮುಂದುವರಿ ದಳು. ಜನರು ಬೆದರಿ ಚೆದರಿದರು. ದೀರ್ಘಕಾಯಳಾದ ಅವಳು ಕೇವಲ ಭೈರವಿಯೇ ಆಗಿದ್ದಳು. ದ್ರುತಗತಿಯಿಂದ ವಿಶ್ವನಾಥ ಮಂದಿರದ ಕಡೆಗೆ ಸಾಗಿದಳು. ಆ ಇಬ್ಬರು ಯುವಕರು ಮಾತ್ರ ಅವಳನ್ನು ಹಿಂಬಾ ಲಿಸಿಹೋದರು.

'ಹೆಂಗುಸೇ, ನೀನು ಇಲ್ಲಿಗೆ ಹೊಸಬಳಾಗಿದ್ದೀ. ಏಕಾಂಗಿನಿಯಾಗಿ

ನೀನು ಇಲ್ಲಿ ಇರುವುದು ಸಾಧ್ಯವಿಲ್ಲ. ನಮ್ಮೊಡನೆ ಬಾ, ಇಲ್ಲಿಯೇ ದೇವಾಲಯದ ಸಮೀಪ ನಮ್ಮ ಮನೆಯಿದೆ. ಅಲ್ಲಿ ನಿನ್ನಿಷ್ಟವಿದ್ದಂತೆ ಇರಬಹುದು. ಬೇರೆ ಯಾರ ತೊಂದರೆಯೂ ಇಲ್ಲ' ಅವರಲ್ಲಿ ಒಬ್ಬನು ಆಕೆಯನ್ನು ಸಂಬೋಧಿಸಿ ಹೇಳಿದನು.

'ನನಗೆ ನಿಮ್ಮ ಸಹಾಯ ಆವಶ್ಯವಿಲ್ಲ' ಭೈರವಿಯು ಧೀರ ನಿಷ್ಠುರ ಸ್ವರದಿಂದ ಹೇಳಿದಳು.

ಮಾತು ಕೇಳಿ ಅವರು ಒಮ್ಮೆ ಬೆದರಿ ಹೋದರು. ಆಕೆ ಮೊದಲಿಗಿಂತಲೂ ತೀವ್ರವಾಗಿ ನಡೆಯುತ್ತಿದ್ದಳು. ಆಕೆ ಎಲ್ಲಿ ಉಳಕೊಳ್ಳುವಳು, ಏನು ಮಾಡುವಳು, ಎಂದು ಅವರಿಗೆ ತಿಳಿವ ಕುತೂಹಲ ಹುಟ್ಟಿತು. ಏಕೆಂದರೆ ಭೈರವಿ ಯುವತಿಯಾಗಿದ್ದಳು, ಸಾಲದ್ದಕ್ಕೆ ಅಪೂರ್ವ ಸುಂದರಿ; ಈಗ ಏಕಾಂಗಿನಿ ಅವಳ ಇರುವಿಕೆಯ ಕುರಿತು ತಿಳಕೊಳ್ಳುವುದರಲ್ಲಿ ಪ್ರಮಾದವಿಲ್ಲವೆಂದು ಆಲೋಚಿಸಿ ಅವರಿಬ್ಬರೂ ಆಕೆಯನ್ನು ಹಿಂಬಾಲಿಸಿ ನಡೆದರು.

ದೇಗುಲದ ಬಾಗಿಲಬಳಿ ಭೈರವಿಯು ಕ್ಷಣಹೊತ್ತು ನಿಂತಳು. ಬಾಗಿ ವಂದಿಸಿ ಮಂದಿರದ ಒಳಹೊರಟಳು. ಅವರಲ್ಲಿ ಒಬ್ಬನು ದ್ವಾರದ ಬಳಿ ನಿಂತನು. ಇನ್ನೊಬ್ಬನು ಅವಳೊಡನೆ ದೇಗುಲವನ್ನು ಪ್ರವೇಶಿಸಿದನು.

೦೦ ೦೦ ೦೦

ಆ ರಾತ್ರೆ ಭೈರವಿಯು ಒಂದು ಜೀರ್ಣ ದೇಗುಲದಲ್ಲಿ ಉಳಕೊಂಡಳು. ರಾತ್ರಿ ಹೊತ್ತಿನಲ್ಲಿಯೂ ಯಾವನೂ ಅಲ್ಲಿ ಉಳಕೊಳ್ಳಲು ಸಾಹಸ ಮಾಡುತ್ತಿರಲಿಲ್ಲ. ಸುತ್ತುಮುತ್ತು ಜನರ ವಸತಿಯೇ ಇರಲಿಲ್ಲ. ಅದರ ಬಾಗಿಲು ಕಿಟಕಿಗಳೆಲ್ಲಾ ಮುರಿದು ಹೋಗಿದ್ದು ರಾತ್ರಿ ಹಗಲೆನ್ನದೆ ಗಂಗಾ ನದಿಯ ಗಂಭೀರ ಜಲ ನಿರ್ಘೋಷವು ಮಾತ್ರ ಕೇಳುತಿತ್ತು. ಏಕ ವಸ್ತ್ರಧಾರಿಣಿಯಾದಾ ಭೈರವಿಯು ಆ ಜೀರ್ಣ ದೇಗುಲದಲ್ಲಿ ರಾತ್ರಿ ಕಳೆದಳು.

ನಡುಇರುಳು, ಬೆಳದಿಂಗಳು ಹರಡಿತ್ತು. ಇನ್ನೂ ಪಟ್ಟಣದ

ಜನರ ಗಲಭೆ ಶಾಂತವಾಗಿರಲಿಲ್ಲ. ನಾಯಿಗಳು ಬೊಗಳುತ್ತಾ ಇದ್ದವು. ಆ ಇಬ್ಬರು ಧಾಂಡಿಗರೂ ಅಷ್ಟು ಹೊತ್ತಿಗೆ ಆ ಜೀರ್ಣ ದೇಗುಲದ ಕಡೆಗೆ ಬರುತ್ತಿದ್ದರು.

ಭೈರವಿ ನೆಲದಲ್ಲಿ ಮಲಗಿದ್ದರೂ ಆಕೆಗೆ ನಿದ್ರೆ ಹತ್ತಿರಲಿಲ್ಲ. ಹೆಜ್ಜೆಯ ಸಪ್ಪಳವನ್ನಾಲಿಸಿ ಎದ್ದು ಕುಳಿತಳು. ಆ ದಿನ ಬೆಳಿಗ್ಗೆ ತನ್ನನ್ನು ಹಿಂಬಾಲಿಸಿ ಬಂದಿದ್ದ ಅದೇ ಧೂರ್ತರು ಬಂದಿದ್ದಾರೆ! ಇಬ್ಬರೂ ಚೆನ್ನಾಗಿ ಅಮಲು ಸೇವಿಸಿದ್ದರು. ಒಬ್ಬನ ಕೈಯ್ಯಲ್ಲಿ ಇನ್ನೂ ಒಂದು ಬಾಟ್ಲಿಯಿತ್ತು. ಮದ್ಯದ ದುರ್ವಾಸನೆ ಆ ಸ್ಥಳವನ್ನು ತುಂಬಿಹೋಯಿತು.

ಭೈರವಿ ಎದ್ದುನಿಂತಳು. ತ್ರಿಶೂಲವು ಅವಳ ಕೈಯ್ಯಲ್ಲಿ ಹೊಳೆಯುತಿತ್ತು. ಅವಳನ್ನು ನೋಡಿ ಒಬ್ಬ ಹೇಳಿದ: "ನೀನು ಯಾತಕ್ಕೆ ಎದ್ದು ನಿಂತಿದ್ದೀ. ಇದೋ ಭೈರವಿಗೆ ಸಮರ್ಪಿಸಲು ನಾವು ಈ ಮದ್ಯವನ್ನು ತಂದಿದ್ದೇವೆ, ಕುಡಿ".

ಇನ್ನೊಬ್ಬನು ಅಷ್ಟು ಕುಡಿದಿರಲಿಲ್ಲ. ಬಾಗಿಲಿಗೆ ಅಡ್ಡವಾಗಿ ಅವನು ನಿಂತುಕೊಂಡಿದ್ದ.

"ನೀನು ಎಲ್ಲಿಗೆ ಹೋಗುತ್ತೀಯೆ? ನಾವು ಕರೆದುತರಬೇಕಾದಲ್ಲಿಗೆ ನೀನೇ ಬಂದಿದ್ದಿ. ಇಗೋ ಇದನ್ನು ತಿನ್ನು" ಹುರಿದ ಮಾಂಸದ ತುಂಡೊಂದನ್ನು ಅವಳ ಮುಂದಿಟ್ಟನು.

ಆಕೆಯ ಸಹಾಯಕ್ಕೆ ಅಲ್ಲಿ ಯಾರೂ ಇಲ್ಲ. ಇಬ್ಬರೂ ಧೂರ್ತರು, ಅನ್ಯಾಯಕ್ಕೆ ಹೇಸದ ಪಾಪಿಗಳು, ಮೇಲಾಗಿ ಕುಡಿಕರು. ಏಕಾಂಗಿನಿಯಾದ ಅವಳನ್ನು ಹೀಗೆ ಮುತ್ತಿದ್ದಾರೆ.

ಭೈರವಿಯ ಮುಖದಲ್ಲಿ ಭಯದ ಸೂಚನೆ ಬಂದಿಷ್ಟೂ ಇಲ್ಲ ಎರಡನೆಯ ಮನುಷ್ಯನ ಮಾತು ಮುಗಿದೊಡನೆಯೇ ಅವಳು ಹೇಳಿದಳು. "ಏನು, ಎಲ್ಲಾ ಭೈರವಿಗಳೂ ಕುಡಿಯುತ್ತಾರೆಯೆ?"

"ಕುಡಿಯದೆ ಯಾವ ಹೆಂಗಸೂ ಭೈರವಿಯಾಗುವುದಿಲ್ಲ".

"ಈ ಅಪರ ರಾತ್ರಿಯಲ್ಲಿ ನೀವು ಇಲ್ಲಿಗೆ ಏಕೆ ಬಂದಿದ್ದೀರಿ?" ಅವಳು ಗಂಭೀರಳಾಗಿ ಪ್ರಶ್ನಿಸಿದಳು.

ಇಬ್ಬರೂ ಗಟ್ಟಿಯಾಗಿ ನಕ್ಕುಬಿಟ್ಟರು.

"ನೀನು ಅದನ್ನೇ ಕೇಳಬೇಕು!"

"ನಾನು ಅನಾಥಳಿದ್ದೇನೆ. ಹೀಗೆ ನನ್ನನ್ನು ಅಪಮಾನಗೊಳಿಸುವುದು ಉಚಿತವಲ್ಲ. ನಾನು ಬ್ರಹ್ಮಚಾರಿಣಿ".

"ನಿನ್ನ ಹಾಗೆ ಸಾವಿರ ಬ್ರಹ್ಮಚಾರಿಣಿಗಳನ್ನು ನಾವು ನೋಡಿದ್ದೇವೆ. ನಮ್ಮ ನಡುವೆ ಬಂದು ಕುಳಿಕೋ, ಇಕೋ ಕುಡಿ, ಇದನ್ನು ತಿನ್ನು".

"ಇದು ಪವಿತ್ರ ಕಾಶಿಯೆಂದು ನಿಮಗೆ ತಿಳಿದಿದೆಯೆ?"

"ನಾವು ಹಾಗೆಂದು ಇದುವರೆಗೆ ಭಾವಿಸಿಯೇ ಇರಲಿಲ್ಲ. ಆದರೆ ಇಂದು ನೀನು ಓರ್ವಳು ದೇವಿಯು ಇಲ್ಲಿಗೆ ಬಂದುದರಿಂದ ಕಾಶಿಯು ನಿಜವಾಗಿಯೂ ಪವಿತ್ರವಾಯಿತು" ಇಬ್ಬರೂ ಅಟ್ಟಹಾಸದಿಂದ ನಕ್ಕುಬಿಟ್ಟರು.

"ಹುಚ್ಚುಗಳೇ, ಸ್ವರ್ಗದಲ್ಲಿದ್ದೂ ಪಾಪ ಮಾಡಿದರೆ ನರಕದ ಕೂಪಕ್ಕೇ ಬೀಳುತ್ತೀರಿ. ನರಕದಲ್ಲಿ ಅದ್ದಿದರೂ ನಿಮ್ಮ ಪಾಪ ಮುಗಿಯಲಾರದು. ಎಷ್ಟು ಮಂದಿ ಅಬಲೆಯರನ್ನು ನೀವು ಹಾಳುಮಾಡಿದ್ದಿರೋ ಈ ವಿಶ್ವನಾಥನಿಗೆ ಮಾತ್ರ ಗೊತ್ತು".

ಮೊದಲನೆಯವನು ಎರಡನೆಯವನೊಡನೆ ಹೇಳಿದನು: "ನಾವು ಇಲ್ಲಿ ಇವಳೊಡನೆ ಶಾಸ್ತ್ರ ವಿಚಾರ ಚರ್ಚಿಸಲು ಬಂದಿದ್ದೇವೊ? ಇವಳು ಕುಡಿಯುವುದು ತಿನ್ನುವುದು ಮತ್ತು ನಮಗೆ ಒಲಿಯುವುದು ಬಿಟ್ಟು ರಾತ್ರಿಯಿಡೀ ಚರ್ಚೆಮಾಡಿಯೇ ಹೊತ್ತುಕಳೆದರೆ?"

ಆತನು ಭೈರವಿಯ ಕೈ ಹಿಡಿಯಲು ಹೋದನು.

ಭೈರವಿಯ ರಕ್ತ ಕುದಿಯಿತು! ತ್ರಿಶೂಲವನ್ನು ಎತ್ತಿಹಿಡಿದವಳೇ ಕಾಳಭೈರವಿಯಂತೆ ಕೆರಳಿ "ಪಾಪಿಗಳೇ! ಸಾಯಲು ಬಂದಿದ್ದೀರಿ; ಸತ್ತೇ ಹೋಗಿ".

ತ್ರಿಶೂಲವು ಅವರೆದೆಗಳನ್ನು ನಾಟಿ ದಾಟಿತು!

oo oo oo

ಸಿಪಾಯಿದಂಗೆಯಾಗಿ ಎರಡು ವರ್ಷಗಳು ಕಳೆದಿದ್ದವು. ಬ್ರಿಟಿಷರ ತಳಮಳವು ಕೊಂಚ ಕಡಿಮೆಯಾಗಿತ್ತು. ಆದರೆ ಕ್ರಾಂತಿಪುರುಷನಾದ ನಾನಾಸಾಹೇಬನು ಎಲ್ಲಿರುವನೋ ಏನು ಮಾಡುವನೋ ಎಂದು ಅವರಿಗೆ ತಿಳಿದಿರಲಿಲ್ಲ. ಅವನನ್ನೂ ಅವನ ಕೆಲವು ಅನುಯಾಯಿಗಳನ್ನೂ ಹಿಡಿಯಲು ದೇಶದ ಉದ್ದಗಲದಲ್ಲಿ ಗುಪ್ತಚಾರರು ಚಲಿಸುತ್ತಿದ್ದರು.

ಗುಪ್ತಚಾರರಲ್ಲಿ ಮುಮ್ತಾಜ್ ಅಲಿ ಹೆಸರಾದವ. ಯಾವ ವೇಷವಾದರೂ ಆತನಿಗೆ ಒಪ್ಪುತಿತ್ತು. ಓರ್ವ ಸನ್ಯಾಸಿಯ ವೇಷ ಧರಿಸಿ ಕ್ರಾಂತಿಕಾರರ ಕುರುಹು ಕಂಡು ಹುಡುಕಲು ಆತನು ಕಾಶಿಗೆ ಬಂದಿಳಿದಿದ್ದನು.

ಒಬ್ಬಳು ಭೈರವಿಯ ವಿಷಯ, ಆಕೆಯ ವಿಚಿತ್ರ ವರ್ತನೆಗಳ ವಿಷಯ ಜನರು ಅಲ್ಲಲ್ಲಿ ಮಾತನಾಡುತ್ತಿರುವುದನ್ನು ಕೇಳಿದನು.

'ಭೈರವಿಯ ಮುಖದಲ್ಲಿ ಒಂದು ಗಾಯದ ಕಲೆಯಿದೆಯೆ?' ಸನ್ಯಾಸಿ ಒಬ್ಬನೊಡನೆ ಪ್ರಶ್ನಿಸಿದ. 'ಹೌದು, ನಿನಗವಳ ಪರಿಚಯವುಂಟೊ?' ಆತ ತಿರುಗಿ ಪ್ರಶ್ನೆ ಹಾಕಿದ. ಸನ್ಯಾಸಿ ಜಪಮಾಲೆಯನ್ನು ತಿರುಗಿಸುತ್ತಾ ಧರ್ಮಶಾಲೆಯ ಹಾದಿ ಹಿಡಿದು ನಡೆದನು. ಪೋಲಿಸ್ ಸ್ಟೇಶನಿಗೆ ಬಂದು, ತನ್ನ ಪರಿಚಯದ ಪತ್ರ ತೋರಿಸಿ ಕೆಲಮಂದಿ ಪೋಲಿಸರನ್ನೂ ಒಟ್ಟಿಗೆ ಕರೆದುಕೊಂಡುಹೋದನು.

ಮರುದಿನ ಮುಮ್ತಾಜ್ ಅಲಿಯು ನಿಜವೇಷವನ್ನು ಧರಿಸಿ ಕೈಯ್ಯಲ್ಲಿ ಆಯುಧವನ್ನು ಹಿಡಿದುಕೊಂಡು, ಕೆಲಮಂದಿ ಪೋಲೀಸರಿಗೆ ತನ್ನನ್ನು ಹಿಂಬಾಲಿಸಿ ಬರುವಂತೆ ಆಜ್ಞಾಪಿಸಿ ಘಾಟಿನ ಬಳಿ ಬಂದನು.

ಒಂದು ಕಡೆ ಜನರ ಗುಂಪು ಸೇರಿತ್ತು. ಭೈರವಿಯು ಒಂದು ಪೀಠದ ಮೇಲೆ ಭದ್ರಾಸನ ಹಾಕಿ ಕುಳಿತಿದ್ದಳು.

ಮುಮ್ತಾಜ್ ಅಲಿ ಭೈರವಿಯನ್ನು ಸಮೀಪಿಸಿ, ಸಣ್ಣ ದನಿಯಲ್ಲಿ ಕೇಳಿದನು "ನನ್ನ ಗುರುತು ಸಿಕ್ಕಿತೆ?"

ಭೈರವಿ ಚಕಿತಳಾಗಿ ನೋಡಿದಳು. ಮರುಕ್ಷಣದಲ್ಲಿಯೇ ಧೈರ್ಯ

ತಂದುಕೊಂಡು ನಗುತ್ತಾ ಹೇಳಿದಳು: "ಮುರ್ತಾಜ್ ಆಲಿ, ನೀನು ಇಲ್ಲಿಗೆ ಹೇಗೆ ಬಂದೆ?"

ಆತನೂ ಮುಗುಳುನಗೆ ನಕ್ಕು ಹೇಳಿದ. "ನಾನು ಬಂದುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ನೀನು ಇಲ್ಲಿ ಬಹುಕಾಲದಿಂದ ಇದ್ದೀಯಲ್ಲವೆ?"

"ನಾನು ಬೇರೆಲ್ಲಿಗೆ ಹೋಗಲಿ?" ಭೈರವಿಯು ಕಣ್ಣುಗಳನ್ನು ಸೆರಗಿಂದ ಒರೆಸಿಕೊಂಡಳು.

"ನಾನು ಏಕೆ ಬಂದಿರುವೆನೆಂದು ನಿನಗೆ ಗೊತ್ತೊ?" ಮುರ್ತಾಜ್ ಆಲಿ ಪ್ರಶ್ನಿಸಿದ.

"ಪ್ರತೀಕಾರಕ್ಕಾಗಿ, ಅಲ್ಲವೆ?" ಆಕೆ ದೃಢಸ್ವರದಿಂದ ಹೇಳಿದಳು.

"ನಿನ್ನ ವಿಷಯ ಸರಕಾರದ ಆಜ್ಞೆಯೇನೆಂದು ಬಲ್ಲೆಯಾ?"

"ಸಿಕ್ಕಿದರೆ ಫಾಶಿಗೆ ಕೊಡುವುದು. ಅಷ್ಟು ತಾನೇ ಅಲ್ಲವೆ? ನೀನು ನನ್ನನ್ನು ಸೆರೆಹಿಡಿಯಲು ಬಂದಿರುವೆಯಷ್ಟೆ?"

"ನಾನು ಗುಪ್ತಚಾರ. ಅದು ನನ್ನ ಕರ್ತವ್ಯ".

"ಹೋ, ಅದರಲ್ಲಿ ತಪ್ಪೇನು? ನಾನೂ ನಿಸ್ಸಹಾಯಕಳಿದ್ದೇನೆ. ನಿನ್ನ ಜನರನ್ನು ಬರಹೇಳು".

"ಬೇಡಾ, ನೀನು ನನ್ನೊಡನೆ ಬಾ, ಈ ವಿಷಯ ಜನಂಗೆ ತಿಳಿಯುವುದು ಬೇಡ".

"ಹೂಂ ಹಾಗಾದರೆ ನೀನು ನನ್ನ ನಿಕಾ (ಮದುವೆ) ಮಾಡಿಕೊಳ್ಳುತ್ತೀಯಾ?"

"ಅದು ನೀನು ಒಪ್ಪಿದರೆ, ತಡಮಾಡಬೇಡ, ನನ್ನೊಡನೆ ಹೊರಟು ಬಾ".

"ನಾನು ಬರದಿದ್ದರೆ?"

"ನೀನು ಕ್ರಾಂತಿಕಾರಳು; ಅಪರಾಧಿನಿ. ನಿನ್ನನ್ನು ಪೋಲೀಸರಿಂದ ಬಂಧಿಸಿ ಕೊಂಡೊಯ್ಯುವೆನು".

"ನಾನು ಇಲ್ಲಿಂದ ಚಲಿಸುವುದಿಲ್ಲ".

"ಏನಂದೀ! ಚಲಿಸುವುದಿಲ್ಲ" ಅಲಿ ಸುತ್ತುನೋಡಿದನು. ಪೋಲಿಸರು ಆಕೆಯನ್ನು ಸುತ್ತುಗಟ್ಟಿದರು.

ತ್ರಿಶೂಲವನ್ನು ಕೈಯ್ಯಲ್ಲಿ ಹಿಡಿದೆತ್ತಿ ಭೈರವಿಯು ಮಿಂಚಿನಂತೆ ನೆಗೆದಳು. ಆಕೆಯನ್ನು ಹಿಡಿದು ನಿಲ್ಲಿಸಲು ಯಾರಿಗೂ ಧೈರ್ಯವಿರಲಿಲ್ಲ.

ಭೈರವಿಯು ತ್ರಿಶೂಲವನ್ನು ಬಲವಂತವಾಗಿ ಹಿಡಿದೆತ್ತಿ ಅದರಿಂದ ತನ್ನೆದೆಯನ್ನೇ ಇರಿದುಕೊಂಡಳು!

ಎದೆಯ ಗಾಯದಿಂದ ರಕ್ತ ಚೆಲ್ಲುತಿತ್ತು!

ಜನರು ಎಲ್ಲಾ ಕಡೆಯಿಂದಲೂ ಅಲ್ಲಿಗೆ ಓಡಿಬಂದು ಕೂಡಿದರು.

ಮುಮ್‌ತಾಜ್ ಅಲಿ ಆಕೆಯ ಬಳಿಬಂದನು. ಭೈರವಿಯ ಹೃದಯದಿಂದ ಹೊರಟ ಬಿಸಿರಕ್ತವು ಹರಿದು ಗಂಗಾನದಿಯನ್ನು ಸೇರಿತ್ತು. ಅವಳ ಗಂಭೀರವಾದ ತೇಜೋಮಯ ಮುಖಮಂಡಲದ ಮೇಲೆ ಅಸ್ತಂಗತನಾಗುವ ಸೂರ್ಯನ ರಕ್ತಕಿರಣವು ನರ್ತನವಾಡುತಿತ್ತು.

"ಏನಾಯಿತು? ಅಯ್ಯೋ ಈಕೆ ಸತ್ತುಕೊಂಡಳೆ? ಭೈರವಿ ಯಾರೆಂದು ನಿನಗೆ ಗೊತ್ತಿದೆಯೊ?" ಗುಂಪಿನ ಜನರು ಮುಮ್‌ತಾಜ್ ಅಲಿಯೊಡನೆ ಪ್ರಶ್ನಿಸಿದರು

ಮೃತಿ ಹೊಂದಿದ ಆ ಪುಣ್ಯ ಶರೀರಕ್ಕೆ ಅಲಿಯು ತಲೆ ಬಾಗಿಸಿ ವಂದನೆ ಮಾಡಿ ಹೇಳಿದನು.

"ಆಕೆ ಅಜಾಮ್‌ಗರಿನ ಮಹಾರಾಣಿ ಚಾಂದಳು".

"ಬ್ರಿಟಿಷರೊಡನೆ ಭಯಂಕರ ಕಾದಾಡಿದ ಆ ವೀರನಾರಿಯೆ?" ನೂರಾರು ಕೊರಳುಗಳು ಒಮ್ಮೆಯೇ ಪ್ರಶ್ನಿಸಿದವು.

ಗದ್ಗದಕಂಠನಾಗಿ ಅಲಿ ಮೆಲ್ಲನೆ ಹೇಳಿದ: "ಹೌದು, ಆಕೆಯೇ; ಸ್ವಾತಂತ್ರ್ಯಪ್ರಿಯಳಾದ ಅಭಿಮಾನ ಧನಳಾದ ವೀರನಾರಿಯಾದ ಮಹಾರಾಣಿ ಚಾಂದಳೇ ಈಕೆ!"

ಜನರ ನಿಟ್ಟುಸಿರು ನಭೋಮಂಡಳವನ್ನು ಭೇದಿಸುವಂತಿತ್ತು. ಗಂಗಾನದಿಯು ಕಠೋರವಾಗಿ ನೊರೆಯಿಡುತಿತ್ತು. ದಿಗಂತವನ್ನು ಕತ್ತಲು ಕವಿದು ಬಂದಿತು.

ಅಯೇಷಾ

ಮಲಬಾರಿನಲ್ಲಿ ಮಾಪಿಳ್ಳೆ ದಂಗೆಯೆದ್ದು ನಾಡಿಗೆ ನಾಡೇ ಗೊಂದಲಗೊಂಡಕಾಲ. ಅಬ್ದುಲ್ ರಹಿಮಾನನು ದಂಗೆಗಾರರಲ್ಲಿ ಬಹಳ ಧೈರ್ಯಶಾಲಿಯೂ ಸಾಹಸಿಯೂ ಚತುರನೂ ಎಂದು ಪ್ರಸಿದ್ಧನಾಗಿದ್ದ. ದುಂಡಗಾಗಿರುವ ಮುಖ, ಕುಳ್ಳಗಿನ ಶರೀರ, ಇತರ ಮಾಪಿಳ್ಳೆಯವರಂತೆ ತಲೆ ಬೋಳಿಸಿರದೆ, ಬೆಳಸಿದ್ದು ಭುಜದಲ್ಲಿ ಹರಡಿದ್ದ ಕಪ್ಪುಕೂದಲ ರಾಶಿ, ಎದುರುಬಂದವರನ್ನು ಕಾಠಿಣ್ಯತೆಯಿಂದ ಇದಿರಿಸುವಂತಿದ್ದ ಸೀಳವೂ ವಿಶಾಲವೂ ಆಗಿದ್ದ ಕೆಂಪು ಕಣ್ಣುಗಳು—ಇವುಗಳಿಂದೆಲ್ಲಾ ಆತನು ಓರ್ವ ಅಸಾಮಾನ್ಯ ಭಯಾನಕ ವ್ಯಕ್ತಿಯಾಗಿದ್ದ. ಅಧಿಕಾರಿಗಳಿಗಾಗಲಿ, ಪೋಲೀಸರಿಗಾಗಲಿ, ಗುಪ್ತಚಾರರಿಗಾಗಲಿ ಆತನ ಹೆಸರು ಕೇಳಿ ಗೊತ್ತಿತ್ತೇ ಹೊರತು ಆತನನ್ನು ಕಂಡು ಹುಡುಕುವುದು ಸಾಧ್ಯವಾಗಿರಲಿಲ್ಲ. ದಂಗೆಯ ಆರಂಭದಲ್ಲಿಯೇ ಆತನು ಸುಪ್ರಸಿದ್ಧಿಗೆ ಬಂದಿದ್ದನು. ಆ ಮೇಲೆ ಮಲಬಾರಿನ ನೂರಾರು ಸ್ಥಳಗಳಲ್ಲಿ ನಗರ ಗ್ರಾಮಗಳಲ್ಲಿ ಗಿರಿಗಹ್ವರಗಳಲ್ಲಿ ಎಲ್ಲೆಲ್ಲಿಯೋ ವಾಸಿಸುತ್ತಿದ್ದನು. ಒಮ್ಮೆ ಒಬ್ಬ ಸರಕಾರೀ ಅಧಿಕಾರಿಯನ್ನು ಕೊಂದನೆಂಬ ವಾರ್ತೆಬರುವುದು; ಇನ್ನೊಮ್ಮೆ ಒಬ್ಬ 'ಜಮೀನ್ದಾರ'ನ ಮನೆಯನ್ನು ಸುಲಿಗೆ ಮಾಡಿದನೆಂಬ ಸುದ್ದಿ ಕೇಳುವುದು!

ಅಬ್ದುಲ್ ರಹಿಮಾನನಲ್ಲಿ ಹೊಗಳ ತಕ್ಕಂಥಾ ಒಂದು ಗುಣವಿತ್ತು. ಆತನು ಎಂದೂ ನಿರಪರಾಧಿಗಳನ್ನು ಕೊಲ್ಲುತ್ತಿರಲಿಲ್ಲ. ಬಡವರಿಗೆ ಪೀಡೆಮಾಡುತ್ತಿರಲಿಲ್ಲ. ಅನ್ಯಮತಸ್ಥರಾದ ಹಿಂದುಗಳನ್ನು ಬಲಾತ್ಕಾರದಿಂದ ಸ್ವಜಾತಿಗೆ ಸೇರಿಸುತ್ತಿರಲಿಲ್ಲ. ಹೇಗಿದ್ದರೂ ಆತನ ಮನಸ್ಸು, ಮಾತು, ಕ್ರಿಯೆಗಳೆಲ್ಲಾ ನಿರಂತರ ದಂಗೆಯಲ್ಲಿಯೇ ತಲ್ಲೀನವಾಗಿದ್ದವು. ಮಲಬಾರಿನ ಮೂಲೆ ಮೂಲೆಗಳಲ್ಲಿ ನೆಲಸಿದ್ದ ದಂಗೆಗಾರರಿಗೆ ಆತನು ಸಾಧನಸಾಮಗ್ರಿ ಒದಗಿಸಿ ಕೊಡುತ್ತಿದ್ದನು.

ಇಂತಹ ಗೊಂದಲದ ಸಮಯದಲ್ಲಿ, ಸರಕಾರದವರು, ಸಯ್ಯದ್ ಅಬ್ಬಾಸನನ್ನು ಮಲಬಾರಿನ ದಂಗೆಯನ್ನಡಗಿಸಲು ನೇಮಿಸಿದರು. ಸಯ್ಯ

ದನು ದಂಗೆಗಾರರ ಕೇಂದ್ರಸ್ಥಳವಾದ ಮಲಪುರಮ್ಮಿನಲ್ಲಿಯೇ ಬಂದು ಉಳಕೊಂಡ. ಅಬ್ದುಲ್ ರಹಿಮಾನನನ್ನು ಜೀವಂತವಾಗಲಿ ಕೊಂದಾಗಲಿ ಹಿಡಿದು ಒಪ್ಪಿಸಲು ಆತನಿಗೆ ಸರಕಾರದ ಆಜ್ಞೆಯಾಗಿತ್ತು.

ಮಲಪುರಮಿಗೆ ಹೋದವನೇ ಸಯ್ಯದನು ರಹಿಮಾನನ ಎಲ್ಲಾ ಚಲನವಲನಗಳನ್ನು ಚಟುವಟಿಕೆಗಳನ್ನು ಸಾಹಸ ಕಥೆಗಳನ್ನು ಕೇಳಿ ಸೂಕ್ಷ್ಮವಾಗಿ ಪರೀಕ್ಷಿಸಿ ತಿಳಕೊಳ್ಳಲು ತೊಡಗಿದ. ತನ್ನ ಕೆಳನೌಕರರನೇಕರನ್ನು ತಿರೂರಿನಲ್ಲಿ-ಎಲ್ಲೆಡೆಗಳಲ್ಲಿಯೂ ಸುತ್ತಿ ಬರುವಂತೆಯೂ ದಂಗೆಗಾರರ ಕುರುಹು ಕಂಡು ಹುಡುಕುವಂತೆಯೂ ಹೇಳಿ ಕಳುಹಿಸಿದನು.

ಕೆಲ ದಿನಗಳಲ್ಲಿಯೇ ರಹಿಮಾನನು ಕಲ್ಲಿಕೋಟೆಯಲ್ಲಿ ತನ್ನ ಪ್ರಣಯಿನಿಯಾದ ಆಯೇಷಾ ಎಂಬ ಸುಂದರಿಯೊಡದೆ ಇರುವುದಾಗಿ ಸುದ್ದಿ ಸಿಕ್ಕಿತು. ಕೆಲಜನ ಪೋಲೀಸರನ್ನು ಕರೆದುಕೊಂಡು ಕೂಡಲೇ ಆ ಸುಂದರಿಯ ಮನೆಯನ್ನು ಹುಡುಕಲು ಸಯ್ಯದ್ ಹೊರಟ ಅತನು ಅಲ್ಲಿಗೆ ಮುಟ್ಟಬೇಕಾದರೆ ಯಾರೋ ಆಕೆಗೆ ಈ ವಾರ್ತೆಯನ್ನು ತಿಳಿಸಿದ್ದರು. ಅವರು ಬರುವುದಕ್ಕಿಂತ ಒಂದು ತಾಸಿನ ಮೊದಲು ಆ ತರುಣಿಯು ಮನೆಬಿಟ್ಟು ಇನ್ನೆಲ್ಲಿಗೋ ಓಡಿಹೋಗಿರುವುದಾಗಿ ತಿಳಿದು ಬಂತು.

ಸುತ್ತು ಮನೆಗಳೆಲ್ಲಾ ಶೋಧಿಸಲ್ಪಟ್ಟವು. ಆದರೆ ಆಯೇಷಾಳ ವಿಷಯ ತಮಗೇನೂ ತಿಳಿದಿಲ್ಲವೆಂದೂ, ಕೆಲದಿನಗಳ ಹಿಂದೆ ನೆರೆಮನೆಯೊಂದರಲ್ಲಿ ಒಬ್ಬ ಸುಂದರ ಯುವತಿಯು ವಾಸವಾಗಿದ್ದಳೆಂದೂ ಅವರು ಹೇಳಿದರು. ಎರಡು ದಿವಸವಿಡೀ ಹುಡುಕಾಡಿ ಬೇಸರ ಬಂದು ಸಯ್ಯದನು ಮಲಪುರಮಿಗೆ ಹಿಂತೆರಳಿದನು. ಸಯ್ಯದನ ಹಂಚಿಕೆಗಳೆಲ್ಲವೂ ವಿಫಲವಾಗಿ ದಿನದಿಂದ ದಿನಕ್ಕೆ ಸಮಸ್ಯೆಯು ಬಿಕ್ಕಟ್ಟಾಗುತ್ತಾ ಬಂತು.

ಒಬ್ಬ ಹಿಂದೂ ಕಾನ್‌ಸ್ಟೇಬಲನು ತಾನು ಉಳಕೊಳ್ಳುವ ಹೋಟೆಲಲ್ಲಿ ಕೆಲಸಮಾಡುತ್ತಿದ್ದ ಅಸಾಧಾರಣ ಸುಂದರಿಯೋರ್ವಳನ್ನು ಕಂಡನು. ಅವಳ ರೂಪಕ್ಕೆ ಆತನು ಮರುಳಾಗಿಹೋದನು. ಆಕೆ ಓರ್ವ ನಾಯರ್ ಹುಡುಗಿಯಿರಬೇಕೆಂದು ಆತ ತಿಳಿದಿದ್ದ. ಒಮ್ಮೆ ಕೆರೆಗೆ ಆಕೆ ಸ್ನಾನಕ್ಕೆಂದು

ಹೋಗುತ್ತಿದ್ದಾಗ ಆತನೂ ಅವಳನ್ನು ಹಿಂಬಾಲಿಸಿ ಬಂದನು. ದಾರಿಯಲ್ಲಿ ಆಕೆಯ ಮೇಲೆ ತನಗೆ ಪ್ರೇಮಬಿದ್ದಿರುವುದಾಗಿ ಹೇಳಿದನು. ಅವಳ ಹತ್ತಿರ ಬಂದು ಮಾತನಾಡುತ್ತಿದ್ದಾಗ, ಮಾಪಿಳ್ಳೆ ಹುಡುಗಿಯಂತೆ ಆಕೆಯ ಕಿವಿ ತೂತು ಮಾಡಿರುವುದು ಅವನ ದೃಷ್ಟಿಗೆ ಬಿತ್ತು. ಅದನ್ನು ಕಂಡು ಆತನಿಗೆ ತುಸು ಸಂದೇಹವೂ ಆಯಿತು. ಚತುರಳಾದ ಆ ಸ್ತ್ರೀಯು, ಅದನ್ನು ಕೂಡಲೇ ತಿಳಿದು ದಂಗೆದಾರರಾದ ಮೂರ್ಖ ಮಾಪಿಳ್ಳೆಯವರು ತಮ್ಮ ಮನೆ ಹೊಕ್ಕು ಸುಲಿಗೆ ಮಾಡಿ, ತಂದೆತಾಯಿಗಳನ್ನು ನಿರ್ದಯರಾಗಿ ಕೊಂದು ತನ್ನನ್ನು ಬಲಾತ್ಕಾರದಿಂದ ಅವರ ಜಾತಿಗೆ ಸೇರಿಸಿದರೆಂದೂ ತಾನು ಹೇಗಾದರೂ ಅವರ ಕೈಯಿಂದ ತಪ್ಪಿಸಿಬಂದೆನೆಂದೂ ಅವನೊಡನೆ ಕತೆಕಟ್ಟಿ ಹೇಳಿದಳು. ಪಾಪ! ಅವಳ ಅವಸ್ಥೆಗಾಗಿ ಮರುಗುವುದರೊಡನೆ ಆಕೆಯ ಸಾಹಸವನ್ನು ಕೊಂಡಾಡಿದನು. ಹೀಗೆ ಆ ಪರಮ ಸುಂದರಿಯೊಡನೆ ಬಹುಕಾಲ ಮಾತನಾಡಿ, ಅವರಿಬ್ಬರೂ ಅಲ್ಲಿಂದ ಅಗಲಿದರು.

ಸಹಜವಾಗಿ ಆ ಕಾಲದಲ್ಲಿ ಪೋಲೀಸರು ಒಂದುಕಡೆ ಸೇರಿದಾಗ ದಂಗೆದಾರರ ಕೃತ್ಯಗಳನ್ನೇ ಬಣ್ಣಿಸುತ್ತಿದ್ದರು. ಈ ಸಂದರ್ಭದಲ್ಲಿ ಈ ಹುಡುಗಿಯ ಕತೆಯನ್ನೂ ಆಕೆಯ ಸಾಹಸವನ್ನೂ ಆ ಕಾನ್‌ಸ್ಟೇಬಲನು ಇತರರಿಗೆ ತಿಳಿಸಿದ. ಈ ಮಾತು ಕತೆಯನ್ನು ಕೇಳಿದ ಸಯ್ಯದನು ಆಕೆ ಆಯೇಷೆಯೇ ಇರಬಹುದೆಂದು ತಿಳಿದು ಕೂಡಲೇ ಅವಳನ್ನು ಸೆರೆಹಿಡಿದು ತರಲು ಪೋಲೀಸರನ್ನು ಕಳುಹಿಸಿದನು. ಅವರು ಆಕೆಯನ್ನು ಸೆರೆಹಿಡಿದು ತಂದರು. ಆಯೇಷೆಯ ಮೂಲಕ ರಹಿಮಾನನನ್ನು ಹಿಡಿದು ದಂಗೆಯನ್ನು ಅಣಗಿಸಲು ಸುಲಭವಾಯಿತೆಂದು ಸಯ್ಯದ್ ಹಿಗ್ಗಿಹೋದನು.

ಆಯೇಷೆಯನ್ನು ಸಯ್ಯದನಲ್ಲಿಗೆ ಹಿಡಿದುತಂದರು. ಆಕೆ ಇದರಿಂದೆಲ್ಲಾ ಏನೂ ಗಾಬರಿಗೊಂಡಂತೆ ತೋರಲಿಲ್ಲ. ಆಕೆಯನ್ನು ನೋಡಿದವರಿಗೆ ಆವಳು ಓರ್ವ ವಿಶಿಷ್ಟ ಸ್ತ್ರೀಯೆಂದು ಖಚಿತವಾಗುತ್ತಿತ್ತು. ಸಯ್ಯದನು ಆಕೆಯೊಡನೆ ಹಲವು ಪ್ರಶ್ನೆಗಳನ್ನು ಕೇಳಿದನು. ಕಲ್ಲಿಕೋಟೆಯಲ್ಲಿ ಮಾಪಿಳ್ಳೆಯವರ ದಂಗೆಯು ಸುರುವಾಗುವುದೆಂಬ ಸುದ್ದಿಕೇಳಿ ತಾನಲ್ಲಿಂದ ಓಡಿಬಂದಿರುವುದಾಗಿ ಅವಳು ಹೇಳಿದಳು

'ನಿನಗೆ ಅಬ್ದುಲ್ ರಹಿಮಾನನ ಪರಿಚಯವಿದೆಯೋ?'

'ಆತನ ವಿಷಯ ಕೇಳಿದ್ದೇನೆ'

'ನೀವಿಬ್ಬರೂ ಒಳ್ಳೆ ಪರಿಚಿತರೆಂದು ನಾನು ಕೇಳಿದ್ದೇನೆ' ಅಧಿಕಾರಿಯು ಸ್ಪಷ್ಟ ದನಿಯಲ್ಲಿ ಹೇಳಿದ.

ಆಯೇಷೆ ಒಮ್ಮೆ ನಕ್ಕಳು!

'ಇದು ಬಹಳ ವಿಚಿತ್ರದ ವಿಚಾರ. ನಾನೀಗ ಹೇಳಿದ್ದು ಆತನ ವಿಷಯ ಕೇಳಿದ್ದೇನೆಂಬುದು ಮಾತ್ರ. ಅವನನ್ನು ನೋಡಿಯೂ ಮಾತಾಡಿಯೂ ಇಲ್ಲದವಳಿಗೆ ಅವನ ಪರಿಚಯವಿರಲು ಸಾಧ್ಯವುಂಟೆ?' ತರುಣಿಯು ನಗುಮುಖದಿಂದ ಹೇಳಿದಳು.

'ಹಾಗಾದರೆ ನಿನಗೆ ಚನ್ನಾಗಿ ಅವನ ಪರಿಚಯವಿಲ್ಲವೆಂದು ತೋರುತ್ತದೆ' ಸಯ್ಯದ್ ತಿರುಗಿ ಪ್ರಶ್ನೆ ಹಾಕಿದ.

'ನನಗೆ ಆತನ ಪರಿಚಯವೇನೂ ಇಲ್ಲ.' ಆಕೆ ಸ್ಪಷ್ಟವಾಗಿ ಹೇಳಿದಳು.

'ಹಾಗಾದರೆ ನಿನಗೆ ರಹಿಮಾನನು ಒಂದು ಪತ್ರ ಬರೆದಿದ್ದಾನೆ. ಇದು ನಮ್ಮ ಕೈವಶವಾಗಿದೆ' ಸಯ್ಯದ್ ಹೇಳಿದ.

ಇದಕ್ಕೆ ಆಯೇಷೆ ಉತ್ತರಕೊಡಲಿಲ್ಲ. ಏನೂ ತಿಳಿಯದವಳಂತೆ ಒಮ್ಮೆ ಸಯ್ಯದನನ್ನು ದಿಟ್ಟಿಸಿ ನೋಡಿದಳು.

'ಹಾಗಾದರೆ ಈ ಕುರಿತು ನಿನಗೇನೂ ಹೇಳಲಿಕ್ಕಿಲ್ಲೇನು?'ಸಯ್ಯದ್ ಪುನಃ ಪ್ರಶ್ನಿಸಿದ.

'ನಾನು ಏನು ಹೇಳಬೇಕು?' ತರುಣಿಯು ಸಯ್ಯದನನ್ನೇ ಕೇಳಿದಳು.

'ಇದರಿಂದ ನಿಮ್ಮಿಬ್ಬರೊಳಗೆ ಪರಿಚಯವಿದೆಯೆಂದೂ ನಿನಗೆ ಆತನು ಯಾವಾಗಲೂ ಪತ್ರ ಬರೆಯುತ್ತಿದ್ದನೆಂದೂ ರುಜುವಾಯಿತು.'

'ಇದರಿಂದ ರಹಿಮಾನನು ಯಾರಿಗೋ ಪತ್ರ ಬರೆಯುತ್ತಿದ್ದನೆಂದು

ನೀವು ರುಜು ಮಾಡಬಹುದು. ಆದರೆ ನನಗೆ ಓದಲೂ ಬರೆಯಲೂ ತಿಳಿವುದೇ ಇಲ್ಲವಲ್ಲಾ'.

ಸಯ್ಯದನ ಯಾವ ಯುಕ್ತಿಯೂ ಸಫಲವಾಗಲಿಲ್ಲ. ಆತನು ಪುನಃ ಆಕೆಯನ್ನು ಪ್ರಶ್ನಿಸಿ ಅವಳಿಂದಲೇ ವಿಚಾರವನ್ನು ಹೊರಗೆಡವಲು ಯತ್ನಿಸಿದನು.

'ಅದರಲ್ಲಿ ರಹಿಮಾನನು ಈಗ ಎಲ್ಲಾ ಗಂಡಾಂತರಗಳಿಂದ ತಪ್ಪಿಸಿಕೊಂಡಿರುವುದಾಗಿಯೂ, ನಿನ್ನನ್ನು ಒಂದು ಗುಪ್ತ ಸ್ಥಳದಲ್ಲಿ ಕಾಣಬೇಕಾಗಿಯೂ ತಿಳಿಸಿರುವನು.'

ಆಯೇಷೆ ಈ ಮಾತುಗಳನ್ನು ಆಗ್ರಹದಿಂದ ಕೇಳುತ್ತಿದ್ದಳು. 'ಮಾತ್ರವಲ್ಲದೆ ನೀನು ಮೊಯಿನ್‌ಕುಟ್ಟಿಯನ್ನು ನಂಬಬಾರದೆಂದೂ ಆತನು ಸರಕಾರಕ್ಕೆ ತಾನಾಗಿ ಹೋಗಿಸಿಕ್ಕಿ ಕ್ಷಮೆ ಬೇಡಿರುವನೆಂದೂ ಬರೆದಿತ್ತು.'

ಇದೆಲ್ಲಾ ಸಯ್ಯದನ ಉಪಾಯದ ಮಾತುಗಳಾಗಿದ್ದವು.

'ಮೊಯಿನ್‌ಕುಟ್ಟಿಯನ್ನು ಇದು ವರೆಗೆ ಸರಕಾರವು ಹಿಡಿದಿಲ್ಲ' ಆಯೇಷೆ ನಿರ್ಧಾರಪೂರ್ವಕ ಹೇಳಿದಳು.

ಸಯ್ಯದನು ಸಂತೋಷಗೊಂಡನು.

'ಹಾಗಾದರೆ ದಂಗೆಗಾರರು ಏನು ಮಾಡುತ್ತಿದ್ದಾರೆಂದು ನಿನಗೆ ಗೊತ್ತು. ರಹಿಮಾನನು ಒಂದು ವಾರದಿಂದ ಇಲ್ಲಿಯೇ ಇದ್ದಾನಂತಲ್ಲ; ಅವನ ವಿಷಯ ನಿನಗೆ ಗೊತ್ತಿಲ್ಲವೆ?'

'ನನಗೆ ಯಾರ ವಿಷಯವೂ ಗೊತ್ತಿಲ್ಲ. ಜನರು ಮಾತನಾಡುತ್ತಿರುವ ಸುದ್ದಿಗಳನ್ನು ನಾನು ಕೇಳಿದ್ದೇನೆ. ಅಷ್ಟೇ ನನಗೆ ಗೊತ್ತು. ಆ ಮೂರ್ಖರು ಆದಷ್ಟು ಬೇಗ ಮುಗಿದರೆ ಲೋಕದ ಮಹಾಕಂಟಕವು ಪರಿಹಾರವಾದೀತು.'

'ಅವರನ್ನು ಸೆರೆಹಿಡಿದು ಕೊಲ್ಲುವುದು ಒಳ್ಳೆಯದೆಂದು ನಿನ್ನ ಅಭಿಪ್ರಾಯವೊ?'

'ನಿಜವಾಗಿಯೂ! ಬಡವರಿಗೆ ಅವರು ಎಷ್ಟು ಪೀಡೆ ಕೊಡುತ್ತಾರೆ ಆದರೆ ಆತನನ್ನು ಮಾಪಿಳ್ಳೆಯವರೆಲ್ಲಾ ಪ್ರೀತಿಸುತ್ತಾರೆಂದೂ. ಮಾಪಿಳ್ಳೆ ಜಾತಿಯವನು ಯಾವನೂ ಆತನನ್ನು ಹಿಡಿದು ಸರಕಾರದ ಕೈಗೆ ಒಪ್ಪಿಸಲು ಯತ್ನಿಸಲಾರನೆಂದೂ ನಾನು ಕೇಳಿದ್ದೇನೆ' ಆಕೆ ಅಣಕಿಸುವ ಮಾತಿನಿಂದ ಹೇಳಿದಳು.

ಈ ಮಾತನ್ನು ಕೇಳಿ ಸಯ್ಯದನಿಗೆ ಸಂಶಯ ಮತ್ತಷ್ಟು ಹೆಚ್ಚಿತು. ಈಕೆಯನ್ನು ಸೆರೆಯಲ್ಲಿಡುವುದೇ ರಹಿಮಾನನ್ನು ಹಿಡಿಯಲು ಸುಲಭೋಪಾಯವೆಂದು ಸಯ್ಯದನು ಯೋಚಿಸಿದನು. ಊರಲ್ಲೆಲ್ಲಾ ರಹಿಮಾನನ ಪ್ರಣಯಿನಿಯನ್ನು ಸರಕಾರವು ಸೆರೆ ಹಿಡಿದಿರುವುದೆಂದೂ ಬೇಗನೇ ಆಕೆಯನ್ನು ಪಾಶಿಗೆ ಕೊಡಲಾಗುವುದೆಂದೂ ಸುದ್ದಿ ಹರಡಿತು. ಪ್ರಣಯಿನಿಯ ಸಲುವಾಗಿ ಮನುಷ್ಯನು ಜೀವವನ್ನಾದರೂ ಅರ್ಪಿಸುವನೆಂದು ಸಯ್ಯದ್ ತಿಳಿದಿದ್ದನು.

ಸಂತತಿಯಿಲ್ಲದೆ ತೀರಿ ಹೋದ ನಂಬೂದಿರಿ ಮನೆಯೊಂದು ಸರಕಾರದ ಸ್ವಾಧೀನವಿತ್ತು. ಸುತ್ತು ಬಯಲು, ಬಯಲ ಮಧ್ಯದಲ್ಲಿ ಎರಡು ಮಾಳಿಗೆಯ ಮನೆ. ಆಯೇಷೆಯನ್ನು ಅಲ್ಲಿಟ್ಟು ಸುತ್ತಲೂ ಪೋಲೀಸು ಕಾವಲಿರಿಸಿದ್ದರು. ಇನ್ನು ಒಂದು ವಾರದಲ್ಲಿ ಆಕೆಯನ್ನು ಪಾಶಿಕೊಡುವುದಾಗಿ ಸರಕಾರ ತೀರ್ಮಾನಿಸಿರುವುದೆಂದು ಸುದ್ದಿ ಹಬ್ಬಿತು.

ರಹಿಮಾನನ ಚಾತುರ್ಯಗಳನ್ನು ತಿಳಿದಿದ್ದ ಸಯ್ಯದನು ಆ ಮನೆಯ ಸುತ್ತು ಪೋಲೀಸರ 'ಸರ್ಪಕಾವಲು' ಇರಿಸಿದ್ದನು. ಮೂರನೆಯದಿನ ರಾತ್ರಿ ಆ ಮನೆಯ ಕಾವಲುಗಾರರಿಗೆ ಹೊರಗಿನ ಯಾವುದೋ ಒಂದು ಗುಂಪಿನವರೊಡನೆ ಕಾದಾಟ ನಡೆದ ಸುದ್ದಿ ಬಂತು. ಗುಂಪಿನವರಲ್ಲಿ ಇಬ್ಬರು ಮಡಿದು ಉಳಿದವರು ಓಡಿಹೋದರು. ಇದರಿಂದ ಸಯ್ಯದನಿಗೆ ಮತ್ತಷ್ಟು ಕುತೂಹಲ ಹೆಚ್ಚಿತು. ಖಂಡಿತವಾಗಿಯೂ ರಹಿಮಾನನನ್ನು ಈ ಬಲೆಯಲ್ಲಿ ಹಿಡಿದುಹಾಕಬೇಕೆಂದು ಆತನು ನಿಶ್ಚಯಮಾಡಿದನು. ಆ ದಿನವೇ ಸೆರೆಮನೆಗೆ ಹೋಗಿ ತರುಣಿ ಆಯೇಷೆಯನ್ನು ಕಂಡಾಗ ಆಕೆ ಕುತೂಹಲವನ್ನು ತಡೆಯಲಾರದೆ 'ನೀನು ರಹಿಮಾನನನ್ನು ಹಿಡಿದೆಯಾ?' ಎಂದು ಕೇಳಿದಳು.

'ನಿನಗೂ ಅವನಿಗೂ ಏನೂ ಪರಿಚಯವಿಲ್ಲದಿರುವಾಗ ಒಬ್ಬ ಮಾಪಿಳ್ಳೈ ದಂಗೆದಾರನು ನಿನ್ನನ್ನು ಸೆರೆಮನೆಯಿಂದ ಬಿಡುಗಡೆ ಮಾಡಬಹುದೆಂದು ನೀನು ಏಕೆ ಹಾರೈಸುತ್ತಿ?' ಸಯ್ಯದನು ಪ್ರಶ್ನಿಸಿದನು.

'ಅವನ ಸಲುವಾಗಿ, ಓರ್ವ ನಿಪರಾಧಿನಿ ಹೆಂಗಸನ್ನು ಸರಕಾರವು ಗಲ್ಲಿಗೇರಿಸುತ್ತಿದೆಂದು ಕೇಳಿ, ಯಾವನಾದರೂ ಓರ್ವ ಅಭಿಮಾನಶಾಲಿಯು ವರ್ತಿಸಬಹುದಾದಂತೆ ಆತನೂ ಯತ್ನಿಸುತ್ತಾನೆ. ಆತನು ನಿಜವಾಗಿ ಒಳ್ಳೆಯ ಅಭಿಮಾನಿಯಿರಬೇಕು. ಅದಲ್ಲದೆ ಇದ್ದರೆ ಓರ್ವ ಹೆಂಗುಸನ್ನು ಮೃತ್ಯುಮುಖದಿಂದ ಜೀವವನ್ನರ್ಪಿಸಿಯಾದರೂ ಬಿಡಿಸಲು ಆತನು ನಿಶ್ಚಯಮಾಡುತ್ತಿರಲಿಲ್ಲ.' ಹೀಗೆನ್ನುವಾಗ ಆಕೆ ಆವೇಶಗೊಂಡಿದ್ದಳು.

ಮರುದಿನವೇ ಸಯ್ಯದನು,ದಂಗೆಗಾರರು ಆಯೇಷೆಯನ್ನು ಬಿಡುಗಡೆಮಾಡಲು ಯತ್ನಿಸುವುದರಿಂದ 'ಬೇಗನೇ ಆಕೆಯನ್ನು ಗಲ್ಲಿಗೇರಿಸುವ ಸುದ್ದಿ ಹರಡಿದನು. ಹಗಲುರಾತ್ರಿ ಆತನಿಗೆ ನಿದ್ರೆಯಿಲ್ಲ. ಆ ದಿನ ಪೋಸ್ಟ್ ಮೂಲಕ ಒಂದು ಪತ್ರವು ಆತನಿಗೆ ತಲಪಿತು. ಅದರಲ್ಲಿ ಹೀಗೆ ಬರೆದಿತ್ತು.

"ಪ್ರಿಯ ಸಯ್ಯದ್,

ಓರ್ವಧೀರ ಮುಸ್ಲಿಂ ಸಹೋದರನೆಂದು ನಾನು ನಿನ್ನನ್ನು ಅಭಿನಂದಿಸುತ್ತೇನೆ. ಆದರೆ ನನ್ನನ್ನು ಹಿಡಿಯಲು ಯತ್ನಿಸುವವನೆಂದು ಬಹು ದ್ವೇಷಿಸುತ್ತೇನೆ. ಓರ್ವ ತರುಣ ಮುಸಲ್ಮಾನನಿಗೆ, ಆತನಿಗೆ ಇಡೀ ಜಗತ್ತಿನಲ್ಲಿಯೇ ಅತ್ಯಂತ ಪ್ರಿಯವಾಗಿರುವ ವಸ್ತುವೊಂದನ್ನು ಸೆರೆಯಲ್ಲಿಟ್ಟು ಹೀಗೆ ಯಾಕೆ ಸಂಕಟಕೊಡುತ್ತಿ? ನೀನು ಇಂತಹ ಸಂದರ್ಭದಲ್ಲಿ ನಿನ್ನ ಪ್ರಣಯಿನಿಗಾಗಿ ಏನುಮಾಡುತ್ತಿದ್ದೀ ಎಂದು ಯೋಚಿಸಿನೋಡು. ನನ್ನನ್ನು ಪರೀಕ್ಷಿಸುವ ಸಲುವಾಗಿ ಹೀಗೆಮಾಡುತ್ತೀಯೋ? ಇತ್ತೀಚೆಗೆ ನಾನು ಮುಂದೆ ರಕ್ತಪಾತ ಮಾಡುವುದಿಲ್ಲವೆಂದು ನಿಶ್ಚಯಿಸಿದ್ದೇನೆ. ಆದರೆ ನೀನು ನನ್ನನ್ನು ಸುಮ್ಮ ಸುಮ್ಮಗೆ ಕೆರಳಿಸುತ್ತಿ. ನಾನು ಪ್ರೇಮಿಸುವ ಸ್ತ್ರೀಗೆ ನಿನ್ನ ಮರಣದಿಂದ ಪ್ರಯೋಜನವಾದೀತೆಂದು ನಾನು ತಿಳಿ

ಯುವುದಿಲ್ಲ. ನೀನು ಆಕೆಯನ್ನು ಗಲ್ಲಿಗೇರಿಸಿದರೆ ಮುಂದೆ ನನ್ನನ್ನು ಕೊಂದಾಗಲಿ ಜೀವಂತವಾಗಲಿ ಹಿಡಿವ ಯೋಚನೆಯನ್ನೇ ಬಿಟ್ಟುಬಿಡು. ದೊಡ್ಡ ಅನರ್ಥವೊಂದು ಸಂಭವಿಸಲಿದೆ. ಎಚ್ಚರಿಕೆಯಿರಲಿ.

ಅಬ್ದುಲ್ ರಹಿಮಾನ್"

ಸಯ್ಯದನು ಈ ಪತ್ರವನ್ನೋದಿ ಒಮ್ಮೆ ದಿಗಿಲುಗೊಂಡನು. ಹೇಗಿದ್ದರೂ ಈ ಸಂದರ್ಭದಲ್ಲಿ ಸ್ವತಃ ರಹಿಮಾನನು ಬರದಿರಲಾರನೆಂದು ಅವನು ಖಂಡಿತ ಮಾಡಿದನು. ಕಾವಲು ಮೊದಲಿಗಿಂತಲೂ ಬಲವಾಯಿತು. ರಹಿಮಾನನು ಸೆರೆಸಿಕ್ಕುವುದಿದ್ದರೆ ಆಯೇಷೆಯನ್ನು ಬಿಡುಗಡೆ ಮಾಡುವುದಾಗಿ ಸುದ್ದಿ ಹರಡಿದನು.

ಮಳೆಜೋರಾಗಿ ಸುರಿಯುತಿತ್ತು. ಮಧ್ಯರಾತ್ರಿಯ ವೇಳೆ 'ಗೇಟಿನಿಂದ ಮೂರುಗಜ ದೂರದಲ್ಲಿ ಒಂದು ವ್ಯಕ್ತಿ ನಿಂತಿರುವುದು ಕಂಡುಬಂತು. ಕಾವಲುಗಾರನು 'ಯಾರು' ಎಂದು ಕೇಳಿದನು. 'ಅಬ್ದುಲ್ ರಹಿಮಾನ್' ಎಂಬ ಉತ್ತರಬಂತು. ಆ ವ್ಯಕ್ತಿ ಅಪೇಕ್ಷಿಸಿದಂತೆ ಅವನನ್ನು ಬಹಳ ಜಾಗ್ರತೆಯಿಂದ ಇನ್‌ಸ್ಪೆಕ್ಟರರಲ್ಲಿಗೆ ಕೊಂಡುಹೋದರು.

'ನಿನ್ನೊಡನೆ ಹೊರಗೆ ಯಾರಾದರೂ ಬಂದಿದ್ದಾರೇನು?' ಇನ್‌ಸ್ಪೆಕ್ಟರನು ಕೇಳಿದನು.

'ಶತ್ರುಗಳ ಕೈವಶವಾಗಲು ಬಂದವನು ಸಂಗಡಿಗರನ್ನು ಕರೆದುಕೊಂಡು ಬರುವುದು ಶಕ್ಯವಿಲ್ಲ. ನನಗೆ ಆಯೇಷೆಯನ್ನು ನೋಡಬೇಕು'.

'ಆಫೀಸರರ ಒಪ್ಪಿಗೆಯಿಲ್ಲದೆ ನನಗೆ ಆಕೆಯನ್ನು ತೋರಿಸಲು ಸಾಧ್ಯವಿಲ್ಲ.'

'ಕೇವಲ ಐದು ನಿಮಿಷ ಮಾತ್ರ' ರಹಿಮಾನ್ ಅತೀ ದೈನ್ಯದಿಂದ ಕೇಳಿದ. ಕರುಣೆಗೊಂಡು ಇನ್‌ಸ್ಪೆಕ್ಟರನು ಒಪ್ಪಿ ಆಯೇಷೆ ಇದ್ದ ಕೋಣೆಗೆ ಅವನನ್ನು ಕರೆದೊಯ್ದು ಹೊರಗೆ ಕಾವಲುಗಾರರು ನಿಂತಿದ್ದರು. 'ಆಯೇಷಾ, ನಾನು ನಿನ್ನನ್ನು ಬಿಡಿಸಲು ಬಂದಿದ್ದೇನೆ' ರಹಿಮಾನ್ ಗಂಭೀರನಾಗಿ ಹೇಳಿದ. ಆಯೇಷಾ ಆತನ ಕಡೆಗೆ ಕೃತಜ್ಞತೆಯಿಂದ

ನೋಡಿದಳು. 'ನೀನು ಹೀಗೆ ಯಾಕೆ ಮಾಡುತ್ತೀ?' ಆಕೆ ಕೇಳಿದಳು. ಅವನು ಉತ್ತರ ಕೊಡಲಿಲ್ಲ. ಅಧಿಕಾರಿಯು ಆತನಿಗೆ ಇನ್ನೊಂದು ಕೋಣೆಯನ್ನು ತೋರಿಸಿ ಅಲ್ಲಿ ಇರುವಂತೆ ಹೇಳಿ ಆತನ ಬಳಿ ಇನ್ನಿಬ್ಬರು ಕಾವಲುಗಾರರನ್ನಿರಿಸಿದನು.

'ನಾನು ತಪ್ಪಿಸುವೆನೆಂಬ ಹೆದರಿಕೆಯೆ?' ರಹಿಮಾನ್ ಕೇಳಿದ. ಉತ್ತರಕೊಡದೆ ಅಧಿಕಾರಿ ಕೋಣೆಯಿಂದ ಹೊರಬಂದನು. ಈ ಸಂತೋಷದ ಸುದ್ದಿಯನ್ನು ಸಯ್ಯದನಿಗೆ ಹೇಳಿ ಕಳುಹಿಸುವ ಸಂಭ್ರಮದಲ್ಲಿ ಆತನು ಆತುರಗೊಂಡಿದ್ದನು. ಮಳೆ ಮತ್ತೂ ಜೋರಾಗಿ ಬರುತಿತ್ತು. ನಿಬಿಡ ಅಂಧಕಾರವು ಸುತ್ತು ಆವರಿಸಿಕೊಂಡಿತ್ತು. ಅಲ್ಲಿ ಕೇವಲ ಹತ್ತೇ ಮಂದಿ ಕಾವಲುಗಾರರು ಮಾತ್ರ ಇದ್ದರು. ಒಬ್ಬಿಬ್ಬರು ಹೋಗುವುದು ಅಪಾಯವೆಂದು ಗ್ರಹಿಸಿ, ಆತನು ಸಯ್ಯದನಿಗೆ ಸುದ್ದಿ ತಿಳಿಸಲು ಐದು ಜನರನ್ನು ಹೋಗ ಹೇಳಿ, ಆದಷ್ಟು ಬೇಗ ಮರಳಿಬರುವಂತೆ ಅವರಿಗೆ ತಿಳಿಸಿದನು.

ಅವರು ಹೊರಟು ಹೋದರು. ಬಾಗಿಲನ್ನು ಭದ್ರವಾಗಿ ಮುಚ್ಚಿ ಅವರು ತಿರುಗಿ ಯಾವಾಗ ಬರುವರೆಂದು ಆಗ್ರಹ ಪೂರ್ವಕ ಇದಿರು ನೋಡುತ್ತಿದ್ದನು ಹತ್ತು ನಿಮಿಷ ಕಳೆದಿರಲಿಲ್ಲ. ಮನೆಯ ಹೊರಗಿನಿಂದ ಗುಂಡಿನ ಧ್ವನಿ ಕೇಳಿಸಿತು. ಮೂರು ಬದಿಗಳಿಂದಲೂ ಗುಂಪು ಮನೆಯನ್ನು ಮುತ್ತಿ ಬಂದಿತು. ಸಬ್‌ಇನ್‌ಸ್ಪೆಕ್ಟರನಿಗೆ ಕೈಕಾಲು ಬಂದಾಯಿತು. ಇದ್ದ ಕಾವಲುಗಾರರನ್ನು ಸಿದ್ಧರಾಗಿರುವಂತೆ ಆಜ್ಞಾಪಿಸಿ, ಒಬ್ಬನು ಆಯೇಷೆ ಮತ್ತು ರಹಿಮಾನರನ್ನು ನೋಡಿಕೊಂಡಿರುವಂತೆಯೂ ಉಳಿದವರು ಮನೆಯನ್ನು ರಕ್ಷಿಸುವಂತೆಯೂ ನೇಮಿಸಿದನು.

ಈ ಗೊಂದಲದಲ್ಲಿ ಒಳಗಿನ ಕಾವಲುಗಾರನೊಡನೆ ರಹಿಮಾನನ ಕೈಗೆ ಕೋಳ ಹಾಕುವಂತೆ ಕೂಗಿ ಹೇಳಿದನು. ಆತನು ಹಾಗೆ ಮಾಡಲು ಯತ್ನಿಸುವಷ್ಟರಲ್ಲಿ ರಹಿಮಾನನು ಆತನನ್ನು ನೆಲಕ್ಕೆ ಕೆಡವಿ, ದೀಪವನ್ನು ನಂದಿಸಿ ಹೊರ ದುಮುಕಿದನು. ರಹಿಮಾನನು ಆಯೇಷೆಯೊಡನೆ ತಪ್ಪಿಸಿ ಹೋದನೆಂದು ಕಾವಲುಗಾರನು ಬೊಬ್ಬಿಟ್ಟನು. ಇಷ್ಟರಲ್ಲಿ ಇನ್‌ಸ್ಪೆಕ್ಟರನು ಒಳಹೋಗಿ ದೀಪ ಹಚ್ಚಿ ನೋಡಲು ರಹಿಮಾನನು

ಎಲ್ಲಿಯೂ ಕಾಣಲಿಲ್ಲ. ಆಯೇಷೆ ಮಾತ್ರ ಚಕಿತಳಾಗಿ ನೆಲದ ಮೇಲೆ ಬಿದ್ದಿದ್ದಳು.

ಅಷ್ಟರಲ್ಲಿ ಸಯ್ಯದನೂ ಅಲ್ಲಿಗೆ ಪೋಲೀಸದಳದೊಂದಿಗೆ ಬಂದಿದ್ದನು. ಆಗ ಎಲ್ಲಾ ಕಡೆ ಶಾಂತತೆ ಹರಡಿತ್ತು. ತಪ್ಪಿಸಿ ಹೋದ ರಹಿಮಾನನು ಆಯೇಷೆಯನ್ನು ಯಾಕೆ ಕರಕೊಂಡು ಹೋಗಲಿಲ್ಲವೆಂಬುದು ಎಲ್ಲರಿಗೂ ಆಶ್ಚರಿಯನ್ನುಂಟು ಮಾಡಿತು.

ಒಳಗಡೆ ಪರೀಕ್ಷಿಸಲು ಒಂದು ಪತ್ರ ಸಿಕ್ಕಿತು. ಅದರಲ್ಲಿ ಹೀಗೆ ಬರೆದಿತ್ತು.

"ಪ್ರಿಯ ಸಯ್ಯದ್,

ನಾನು ಇಂದು ಸ್ವತಃ ನಿನಗೆ ಶರಣಾಗಿಯಾದರೂ ನನ್ನ ಆಯೇಷೆಯನ್ನು ಬದುಕಿಸಲು ಬಂದಿದ್ದೆ. ನೀನು ಬಹಳ ದೊಡ್ಡ ಅವಿಚಾರದ ಕೆಲಸಮಾಡಿದ್ದಿ! ಹಾಗೆಯೇ ನಾನೂ ಮಾಡಿದೆ. ನನ್ನ ಆಯೇಷೆ ಇವಳಲ್ಲ. ಲೋಕದಲ್ಲಿ ನೂರಾರು ಆಯೇಷೆಯರಿರಬಹುದು. ಆದರೆ ನೀನು ಹಿಡಿದಾಕೆಗೂ ನನಗೂ ಯಾವ ಸಂಬಂಧವೂ ಇಲ್ಲ. ನಿನಗೆ ಇಷ್ಟೆಲ್ಲಾ ಗೊಂದಲವನ್ನುಂಟುಮಾಡಿದ್ದಕ್ಕಾಗಿ ನಿಜವಾಗಿಯೂ ನನಗೆ ಬಹಳ ಬೇಸರವಾಗಿದೆ.

ರಹಿಮಾನ್"

ಸಯ್ಯದನಿಗೆ ಹಲವು ಕಾಲದತನಕ ಇದು ಸಮಸ್ಯೆಯಾಗಿಯೇ ಉಳಿಯಿತು. ಕೆಲಕಾಲ ಮತ್ತೂ ಆಕೆಯನ್ನು ಆತನು ಸೆರೆಯಿಂದ ಬಿಡಲೇ ಇಲ್ಲ. ಕೊನೆಗೆ ಆಕೆಯ ಚಲನವಲನಗಳನ್ನೆಲ್ಲಾ ಪರೀಕ್ಷಿಸಿ ಬಿಟ್ಟುಬಿಟ್ಟನು.

ಕೆಲವರ್ಷದ ಮೇಲೆ ಸಯ್ಯದ್ ಮದ್ರಾಸಿನಲ್ಲಿ ಪೋಲೀಸ್ ಸುಪರಿಂಟೆಂಡೆಂಟ್ ಆಗಿ ಅಧಿಕಾರವಹಿಸಿದನು. ಆಗ, ಒಬ್ಬ ತರುಣ ವ್ಯಾಪಾರಿಯುವನು ಸುಪರಿಂಟೆಂಡೆಂಟರಲ್ಲಿ ಬಂದು, ತಾನು ರಹಿಮಾನನೆಂದೂ, ತನ್ನ ಹೆಂಡತಿ ಆಯೇಷೆ ಈಕೆಯೆಂದೂ ಪರಿಚಯಮಾಡಿಕೊಟ್ಟನು. ಸಯ್ಯದನಿಗೆ ಆಶ್ಚರ್ಯ! ತಾನು ಸೆರೆಯಲ್ಲಿಟ್ಟ ಹೆಂಗುಸು ಇವಳೇ! ಆಯೇ

ಪೆಯು ಸೆರೆಮನೆಯಲ್ಲಿಯೇ ಕೆಲಕಾಲ ಸುಖವಾಗಿರಬೇಕೆಂದು ತಾನು ಬಯಸಿದ್ದರಿಂದ, ಆ ದಿನ ಅವಳನ್ನು ಬಿಟ್ಟು ಹೋದೆನೆಂದು ಹೇಳಿ, ಸುಪರಿಂಟೆಂಡೆಂಟರ ಸಮಸ್ಯೆಯನ್ನು ರಹಿಮಾನನೇ ಪರಿಹರಿಸಿದನು.

‘ಸ್ವಾಮಿ ಒಬ್ಬ ಮಾಪಿಳ್ಳೆಯುವನನ್ನು ನಿಮ್ಮ ಯಾವ ಸರಕಾರವಾದರೂ ಮೋಸಗೊಳಿಸಲು ಸಾಧ್ಯವಿಲ್ಲ’ ರಹಿಮಾನ್ ನಗಾಡುತ್ತಾ ಹೇಳಿದ!

ಮರವೆಯಲ್ಲಿ

ಬಾಳುವೆಯ ಹಾದಿಯಲ್ಲಿ ನಮ್ಮನ್ನು ಮುನ್ನಡೆಸಿಯೂ ಹಿಂದೆ ತಳ್ಳಿಯೂ ಹೀಗೆ ಅನುಕೂಲ ಪ್ರತಿಕೂಲಗಳೆರಡನ್ನೂ ಒದಗಿಸುವ ಹಲವು ಘಟನೆಗಳನ್ನು ನಾವು ಇದಿರಿಸುತ್ತೇವೆ. ಸಮಯವು ಸಾಗಿದಂತೆ ಅವುಗಳಲ್ಲಿ ಹಲವು ಮರೆತೇ ಹೋಗುವವು. ಸಂತೋಷ ಸಂಕಷ್ಟ ಸಂಪತ್ತು ವಿಪತ್ತುಗಳ ನೆರಳನ್ನು ನಮ್ಮ ಮೇಲೆ ಬೀರಿ ಹಲವು ವಿಷಯಗಳು ನಮಗೆ ಅಗೋಚರವಾಗಿಯೇ ಸಾಗುತ್ತವೆ. ಇವುಗಳನ್ನೆಲ್ಲಾ ಮಾನವನು ತಿಳಿಯದಿರುವುದೇ ಒಳ್ಳಿತು. ಇಲ್ಲವಾದರೆ ಆತನ ಜೀವನದಲ್ಲಿ ಆಶೆ ನಿರಾಶೆ ಭಯ ಔತ್ಸುಕ್ಯ ಹೀಗೆ ವಿವಿಧ ಭಾವನೆಗಳು ನಿಮಿಷ ನಿಮಿಷಗಳಲ್ಲಿಯೂ ಮುತ್ತಿಗೆ ಹಾಕಿ ಮರುಳುಮಾಡುತ್ತಿದ್ದುವು. ಗೋಚರಕ್ಕೆ ಬಂದ ವಿಷಯಗಳಿಂದಲೇ ಹೃದಯವು ಅಶಾಂತಿಯಿಂದ ಕದಡುತ್ತಿರುವಾಗ, ಮಾನವನಿಗೆ ತಿಳಿಯದೇ ಸಾಗುತ್ತಿರುವ ಸಾವಿರಾರು ಸಂಭವಗಳು ಖಂಡಿತವಾಗಿ ನಮ್ಮನ್ನು ಹುಚ್ಚು ಹಿಡಿಸಲು ಸಾಕಾಗುತ್ತಿದ್ದುವು.

ಶೀನಪ್ಪನು ತನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ ಹುಟ್ಟೂರನ್ನು ಬಿಟ್ಟು ಪೇಟೆಗೆ ಹೋಗಿ ತನ್ನ ಮುಂದಿನ ಜೀವನವನ್ನು ಅಲ್ಲಿ ಯಾವುದಾದರೊಂದು ಉದ್ಯೋಗದಲ್ಲಿ ಸಾಗಿಸಬೇಕೆಂದು ಹೊರಟಿದ್ದನು. ಕೆಲ ವರ್ಷಗಳ ಹಿಂದೆ ಆತನ ಚಿಕ್ಕಪ್ಪನೊಬ್ಬನು ಹಾಗೆ ಪೇಟೆಗೆ ಹೋಗಿ ನೋಡಲು ತನ್ನ ವಶದಲ್ಲಿದ್ದ ಅಲ್ಪಸ್ವಲ್ಪ ಹಣದಿಂದಲೂ ಅಲ್ಲಿನ ಪ್ರಸಿದ್ಧ ವ್ಯಾಪಾರಿಗಳೊಬ್ಬರ ಉದಾರ ಆಶ್ರಯದಿಂದಲೂ ಒಂದು ಸಣ್ಣ ಅಂಗಡಿಯಿಟ್ಟು ವ್ಯಾಪಾರ ನಡೆಸಿ ಈಗ ತಕ್ಕಷ್ಟು ಸುಧಾರಿಸಿ ವ್ಯಾಪಾರ ಸಾಗಿಸುತ್ತಿದ್ದನು. ಯಾವುದಕ್ಕೂ ತನ್ನ ಅದೃಷ್ಟವನ್ನು ಒಮ್ಮೆ ಪರೀಕ್ಷಿಸಲು ಪೇಟೆಗೆ ಹೋಗಿ ನೋಡಬೇಕೆಂದು ಶೀನಪ್ಪನು ಹೊರಟನು.

ಪೇಟೆಗೆ ಇನ್ನೂ ಅರ್ಧ ದಿನದ ಹಾದಿ ಉಳಿದಿತ್ತು. ದಣಿವನ್ನು ಆರಿಸಿಕೊಂಡು ಬಿಸಿಲು ಕಡಿಮೆಯಾಗುವಷ್ಟರಲ್ಲಿ ಯಾವುದಾದರೂ ಬಂಡಿ ಬಂದರೆ ಮುಂದಿನ ಪ್ರಯಾಣವನ್ನು ಅದರಲ್ಲಿ ಮಾಡಬೇಕೆಂದು ನಿರ್ಧಾರ

ಮಾಡಿ ಮಾರ್ಗದ ಬದಿಯ ತಂಪಾದ ಒಂದು ಮರದ ನೆರಳಲ್ಲಿ ವಿಶ್ರಮಿಸಿ ಕೊಂಡನು. ಕಣ್ಣಿಗೆ ಜೊಂಪು ಹತ್ತಲು ಆ ಮರದ ನೆರಳಲ್ಲಿ ನಿದ್ರಿಸಿ ದನು.

ಜನರು ಆ ದಾರಿ ಹಿಡಿದು ಹೋಗುತ್ತಲೇ ಇದ್ದರು. ಕೆಲವರು ಕಾಲ್ನಡೆಯಿಂದ, ಕೆಲವರು ಬಂಡಿಗಳ ಮೇಲೆ, ಕೆಲವರು ಇನ್ನಿತರ ವಾಹನಗಳಲ್ಲಿ, ಹೀಗೆ ಮಾರ್ಗದಲ್ಲಿ ಸಂಚಾರವು ತಪ್ಪಿದ್ದಿಲ್ಲ. ಹಲವರು ಎಡಬಲ ನೋಡದೆ ಸೀದಾ ಸಾಗಿದರು. ಕೆಲವರು ಮಲಗಿ ನಿದ್ರಿಸುತ್ತಿರುವ ತರುಣನ ಕಡೆಗೊಮ್ಮೆ ಕಣ್ಣೆತ್ತಿ ನೋಡಿ ಮುಂದೆ ಹೋದರು. ನಿದ್ರೆ ಮಾಡುವವನ ಕುರಿತು ವಿಚಾರಮಾಡುವುದಕ್ಕಿಂತ ಅವರ ಚಿಂತೆಯೇ ಅವರಿಗೆ ಸಾಕಾಗಿತ್ತು. ಇನ್ನು ಕೆಲವರು ಹೀಗೆ ಚಿಂತೆಯಿಲ್ಲದೆ ಮಲಗಿ ನಿದ್ರಿಸುತ್ತಿದ್ದ ಯುವಕನ ಕುರಿತು ಮತ್ಸರಪಡುತ್ತಾ ಅವನನ್ನು ನಿಂದಿಸಿ ಮುನ್ನಡೆದರು. ಓರ್ವ ತರುಣ ಪ್ರಾಯದ ವಿಧವೆ ಶಾಂತನಾಗಿ ಮಲಗಿ ನಿದ್ರಿಸುತ್ತಿದ್ದ ಸುಂದರ ತರುಣನ ಚೆಲುವಾದ ಮುಖವನ್ನೊಮ್ಮೆ ಕಣ್ಣ ರಳಿಸಿ ನೋಡಿದಳು. ಓರ್ವ ಧಾರ್ಮಿಕನೂ ತತ್ವಜ್ಞನೂ ಆದ ಉಪಾ ಧ್ಯಾಯನೊಬ್ಬನು ಆತನನ್ನು ನೋಡಿ ಕುಡಿದು ಮಲಗಿರುವನೆಂದೇ ನಿರ್ಧ ರಿಸಿ ಅಮಲಿನ ಹಾನಿಯ ಕುರಿತು ತನ್ನ ವಿದ್ಯಾರ್ಥಿಗಳಿಗೆ ಒಂದು ನಡೆದ ಸಂಗತಿಯ ಕತೆಯನ್ನು ಕಟ್ಟಿ ಹೇಳಲು ಸಿದ್ಧತೆಮಾಡಿಕೊಂಡನು. ಆದರೆ ಇವರ ನಿರ್ಲಕ್ಷ್ಯತೆ, ಮತ್ಸರ, ಒಲವು, ಬೇಸರ, ನಿಂದೆ, ಊಹನೆ ಇವು ಗಳೆಲ್ಲವೂ ಶಾಂತನಾಗಿ ಮಲಗಿ ನಿದ್ರಿಸುತ್ತಿದ್ದ ಶೀನಪ್ಪನ ಪಾಲಿಗೆ ಒಂದೇ ಆಗಿದ್ದವು.

ಇಳಿಹರೆಯದ ಗಂಡಹೆಂಡಿರಿಬ್ಬರು ಆ ದಾರಿಯಾಗಿ ಬಂದರು. ಬಂಡಿಯ ಚಕ್ರವೊಂದು ಸ್ವಲ್ಪ ಕೀಲು ತಪ್ಪಿರಲು, ಬಂಡಿಯಾಳು ಅದನ್ನು ಸರಿಪಡಿಸುವ ವರೆಗೆ ಮುಂದೆ ನೆರಳಲ್ಲಿ ಹೋಗಿ ನಿಲ್ಲುವ ಎಂದು ಶೀನಪ್ಪನು ಮಲಗಿದ್ದಲ್ಲಿಗೇ ಅವರು ಬಂದರು. ಸಹಜವಾಗಿ, ಒಬ್ಬ ಬಡ ಪಾಯಿಯು ದಣಿದು ಮಲಗಿರಬಹುದೆಂದು ತಿಳಿದು ಅವನಿಗೆ ನಿದ್ರಾಭಂಗ ಮಾಡಬಾರದೆಂದು ಗಟ್ಟಿಯಾಗಿ ಮಾತನಾಡದೆ ಕಾಲಸಪ್ಪಳವನ್ನೂ ಮಾಡದೆ ಆತನನ್ನು ಸಮಿಾಪಿಸಿದರು.

'ಚಿಂತೆಬೇಸರಗಳಿಲ್ಲದೆ ನಿರ್ಮಲ ಹೃದಯದ ಆಳದಿಂದ ಹೇಗೆ ಎಷ್ಟು ಸುಖವಾಗಿ ಈತನು ಉಸಿರೆಳೆಯುತ್ತಿದ್ದಾನೆ. ಇಂತಹ ಸುಖ ನಿದ್ರೆಯೊದಗುವ ಪಕ್ಷದಲ್ಲಿ ನನ್ನ ಸೊತ್ತಿನ ಅರ್ಧ ಪಾಲನ್ನಾದರೂ ನಾನು ವ್ಯಯಮಾಡಬಲ್ಲೆನು' ಆತನು ತನ್ನಷ್ಟಕ್ಕೇ ಹೇಳಿಕೊಂಡನು. ಆಕೆಯೂ ಶೀನಪ್ಪನ ಪ್ರಸನ್ನ ಮುಖವನ್ನೂ ನಿದ್ರಾಸುಖದಲ್ಲಿ ಆತನು ಪಡಬಹುದಾದ ಆನಂದವನ್ನೂ ನೋಡುತ್ತಾ ತನಗೆ ಅಂತಹ ಸುಖನಿದ್ರೆಯು ಒಮ್ಮೆಯೂ ಬಂದಿರಲಾರದೆಂದೇ ಭಾವಿಸಿಕೊಂಡಳು. ಶೀನಪ್ಪನನ್ನು ದಿಟ್ಟಿಸಿನೋಡುತ್ತಿದ್ದಂತೆ ಇಬ್ಬರಿಗೂ ಮಮತೆ ಹೆಚ್ಚುತಿತ್ತು. ಅಷ್ಟರಲ್ಲಿ ಸೂರ್ಯ ಕಿರಣವು ಮರದ ನೆರಳಿನೆಡೆಯಿಂದ ಆತನ ಕಣ್ಣಿಗೆ ನೇರವಾಗಿ ಬೀಳುವಂತಾಯಿತು. ಮರದ ಗೆಲ್ಲನ್ನು ಬಾಗಿಸಿ ಆಕೆ ತರುಣನ ಮುಖಕ್ಕೆ ಬಿಸಿಲು ಬೀಳದಂತೆ ಮಾಡಿದಳು. ಹೀಗೆ ಮಾಡುತ್ತಿರುವಾಗ ಆ ಅಜ್ಞಾತ ಯುವಕನ ವಿಷಯದಲ್ಲಿ ಆಕೆಗೆ ಮಾತೃಪ್ರೇಮವೇ ಉಕ್ಕಿಬರುತಿತ್ತು.

'ಅದೃಷ್ಟವು ನಮ್ಮನ್ನು ಇಲ್ಲಿಗೆ ಕರೆತಂದಿರಬೇಕು' ಹೀಗೆಂದು ಆಕೆ ತನ್ನ ಗಂಡನೊಡನೆ ಮೆಲ್ಲನೆಯಿಂದ ಹೇಳ ತೊಡಗಿದಳು. 'ಮಗು ನಾಣಿಯು ತೀರಿ ಹೋದ ಮೇಲೆ, ಯಾರನ್ನಾದರೂ ದತ್ತಕ್ಕೆ ತೆಗೆದು ಕೊಳ್ಳಬೇಕೆಂದು ಹಲವು ಕಡೆ ಹುಡುಕಿ ಹುಡುಕಿ ಸಾಕಾಯಿತು. ಇವನ ಮುಖವೂ ನಮ್ಮ ನಾಣಿಯ ಮುಖವನ್ನೇ ಹೋಲುವುದು ಅಲ್ಲವೆ? ಈತ ನನ್ನು ಎಚ್ಚರಿಸಿ ಮಾತನಾಡಿದರೆ ಆಗದೆ?'

'ಇವನ ಗುಣನಡತೆಗಳ ವಿಷಯ ನಮಗೆ ಏನೂ ಗೊತ್ತಿಲ್ಲ........' ಆತನ ಮಾತು ಮುಗಿಯ ಬೇಕಾದರೆ ಅವಳು ಅಂದಳು. 'ಇಂತಹ ಪ್ರಸನ್ನ ಮುಖಭಾವ, ಈ ಶಾಂತ ನಿರ್ಮಲ ನಿದ್ರೆ, ಇವುಗಳು ಪಾಪ ಹೃದಯವುಳ್ಳವರಿಗೆ ಇರಲು ಸಾಧ್ಯವುಂಟೆ?'

ಹೀಗೆ ಐಶ್ವರ್ಯವಂತರಾದ ಆ ಗಂಡಹೆಂಡರು ಮಾತನಾಡುತ್ತಿರುವಾಗ ಶೀನಪ್ಪನ ಹೃದಯವು ತನ್ನ ಭಾಗ್ಯಕ್ಕಾಗಿ ಹಿಗ್ಗಿಹಾರಲಿಲ್ಲ. ನಿಜವಾಗಿಯೂ ಭಾಗ್ಯವು ಅವನ ಮೇಲೆ ದಯಾದೃಷ್ಟಿಯನ್ನು ಬೀರಿತ್ತು. ಈ ಐಶ್ವರ್ಯವಂತರಾದ ಗಂಡಹೆಂಡರ ಗಂಡು ಮಗುವು ತೀರಿ ಹೋಗಿ

ದ್ದರಿಂದ, ದೂರದ ಬಂಧುಬಳಗದವರಿದ್ದರೂ ಅವರ ಗುಣನಡತೆಗಳ ವಿಷಯ ಇವರು ಬೇಸರಗೊಂಡಿದ್ದು, ಯಾರನ್ನಾದರೂ ಒಬ್ಬನನ್ನು ದತ್ತಕ್ಕೆ ತೆಗೆದುಕೊಳ್ಳುವ ನಿರ್ಧಾರ ಮಾಡಿದ್ದರು. ಇಂತಹ ಕೆಲವು ಸಂದರ್ಭಗಳು ಐಂದ್ರಜಾಲಕ್ಕಿಂತಲೂ ಆಶ್ಚರ್ಯಕರವಾದ ಕಾರ್ಯಗಳನ್ನು ನಡೆಸಿಬಿಡುವುದುಂಟು. ಬಡತನದಲ್ಲಿಯೇ ಹುಟ್ಟಿ ಬಳೆದ ಶೀನಪ್ಪನು ನಿದ್ರೆಯಿಂದೆದ್ದವನೇ ಆಕಸ್ಮಾತ್ ಈ ಸೌಭಾಗ್ಯವನ್ನು ಹೊಂದಬಹುದಾಗಿತ್ತು.

'ನಾನು ಅವನನ್ನು ಎಚ್ಚರಿಸಲೇ?' ಗಂಡನೊಡನೆ ಪುನಃ ಆಕೆ ಪ್ರಶ್ನಿಸಿದಳು.

'ಸ್ವಾಮೀ ಬಂಡಿ ಸಿದ್ಧವಾಯಿತು' ಬಂಡಿಯಾಳು ಕೂಗಿ ಹೇಳಿದನು.

ಇಬ್ಬರೂ ಕೂಡಲೇ ಬಂಡಿಯ ಕಡೆಗೆ ಧಾವಿಸಿ ನಡೆದರು. ಆತನು ಬಂಡಿಯಲ್ಲಿ ಕುಳಿತುಕೊಂಡು ತನ್ನ ಭಂಡಸಾಲೆ, ಸಾಮಾನುಗಳು, ಮಾರಾಟ, ಗಿರಾಕಿಗಳು, ಲಾಭ, ಇವುಗಳನ್ನೆಲ್ಲಾ ಲೆಕ್ಕ ಹಾಕುತ್ತಾ ಸಾಗಿದ್ದನು. ಶೀನಪ್ಪನು ಗಾಢವಾಗಿ ನಿದ್ರೆಮಾಡುತ್ತಲೇ ಇದ್ದನು. ಆಕೆ ನಿಸರ್ಗ ಸೌಂದರ್ಯವನ್ನು ನೋಡುವುದರಲ್ಲಿ ತನ್ಮಯಳಾದಳು. ಗಾಡಿ ಮುಂದೆಮುಂದೆ ಸಾಗುತ್ತಾ ಹೋಯಿತು.

ಹತ್ತು ನಿಮಿಷವಾಗಿರಲಿಲ್ಲ. ಒಬ್ಬ ಸುಂದರ ತರುಣಿಯು ಆ ದಾರಿಯಾಗಿ ಬಂದಳು. ಆಕೆಯ ಒಯ್ಯಾರದ ನಡಿಗೆಯೇ ಆಕೆಯ ಹೃದಯದ ಪ್ರೇಮನಾಟ್ಯವನ್ನು ತೋರಿಸುವಂತಿತ್ತು. ಸೀರೆಯ ಸೆರಗು ಬಳಿಯ ಪೊದರಿಗೆ ಸಿಕ್ಕಿಕೊಂಡಿತು. ಅದನ್ನು ಬಿಡಿಸಲು ತಿರುಗಿನೋಡುವಾಗ ಮಲಗಿ ನಿದ್ರಿಸುತ್ತಿದ್ದ ಸುಂದರ ತರುಣನನ್ನು ಕಂಡಳು. ಒಮ್ಮೆಲೇ ಆಕೆಯ ಮುಖವು ಕೆಂಪು ಗುಲಾಬಿಗಿಂತಲೂ ರಕ್ತವರ್ಣವಾಗಿ ರಂಜಿಸಿತು. ಮರದಿಂದ ಹಾರಿಬಂದ ಒಂದು ತುಂಬಿಯು ಅವನ ಮುಖದ ಬಳಿ ನಿಷ್ಠುರವಾಗಿ ಶಬ್ದಮಾಡುತ್ತಿತ್ತು. ಆತನ ಚೆಲುವಾದ ಮುಖಕ್ಕೆ ಎಲ್ಲಿಯಾದರೂ ತುಂಬಿಯು ಕಚ್ಚಿಬಿಡಬಹುದೇ ಎಂದು ಆಕೆ ಉದ್ವಿಗ್ನ

ಳಾದಳು. ತನ್ನ ಸೀರೆಯ ಸೆರಗಿನಿಂದ ಬೀಸಿ ಮೆಲ್ಲನೆ ತುಂಬಿಯನ್ನು ಓಡಿಸಿದಳು. ತಾನು ಓರ್ವ ತರುಣನ ದಣುವಾರಿಸಲು ಸೀರೆಯ ಸೆರಗಿನಿಂದ ಗಾಳಿ ಹಾಕುತ್ತಿದ್ದೇನೆಯೇ ಎಂದು ಗ್ರಹಿಸಿ ಒಮ್ಮೆ ನಾಚಿಕೊಂಡರೂ ಆನಂದಪರವಶಳಾದಳು.

'ಚೆಲುವಿನ ಮೂರ್ತಿಯೇ ಆಗಿದ್ದಾನೆ' ಹೀಗೆ ಮೆಲ್ಲನಿಯಿಂದ ಹೇಳುವಾಗ ಆಕೆಯ ಮುಖವು ಮತ್ತಷ್ಟು ಕೆಂಪಡರಿತು. ಒಂದೇ ಒಂದು ಮಂದಸ್ಮಿತದಿಂದಾದರೂ ಆತನು ಆಕೆಯ ಪ್ರೇಮಸಂಭಾಷಣೆಗೆ ಸ್ವಾಗತವೀಯಲಿಲ್ಲ. ಅಂತಹ ಅನುಪಮ, ಅನುರೂಪ ಸುಂದರಿಯು ಆತನಿಗೆ ಬೇರೆ ದೊರಕುವುದೂ ಸಾಧ್ಯವಿರಲಿಲ್ಲ. ಆತನನ್ನಲ್ಲದೆ ಆಕೆ ಬೇರೆಯವರನ್ನು ಕೈಹಿಡಿಯುತ್ತಲೂ ಇರಲಿಲ್ಲ. ಆತನ ಚಲುವಿನ ಮೂರ್ತಿ ಆಕೆಯ ಹೃದಯದಲ್ಲಿ ಬಿಂಬಿಸಿಹೋಗಿತ್ತು. ಆದರೆ ಅವನಿಗೆ ಇದರ ಯಾವ ಪರಿವೆಯೂ ಇಲ್ಲ!

'ಎಷ್ಟು ಪ್ರಶಾಂತನಾಗಿ ನಿದ್ರಿಸುತ್ತಿದ್ದಾನೆ' ಹೀಗೆಂದು ಹೇಳಿ, ಒಂದು ನಿಟ್ಟುಸಿರೆಳೆದು ಆಕೆ ಮೆಲ್ಲನೆ ಅಲ್ಲಿಂದ ಕಾಲ್ತೆಗೆದು ಮುಂದೆ ದಾರಿ ಹಿಡಿದು ಸಾಗಿದಳು.

ಆಕೆ ಓರ್ವ ಜಮೀನ್ದಾರನ ಏಕಮಾತ್ರ ಪುತ್ರಿ. ಪ್ರಾಯ ತುಂಬಿದ್ದರಿಂದ ತಂದೆ ವರಾನ್ವೇಷಣಕ್ಕೆ ತೊಡಗಿದ್ದನು. ಆಕೆ ಸ್ವತಃ ಶೀನಪ್ಪನನ್ನು ಮದುವೆಯಾಗಬೇಕೆಂದು ಹೇಳುತ್ತಿದ್ದರೆ ತಂದೆ ಸಂತೋಷದಿಂದ ಆದಕ್ಕೆ ಒಪ್ಪುತಿದ್ದನು. ಜಮೀನಿನ ಮೇಲ್ವಿಚಾರಣೆಯನ್ನೂ ಮಾಡಿಕೊಂಡಿದ್ದು, ಜಮೀನ್ದಾರನ ನಂತರ ಶೀನಪ್ಪನೇ ಆತನ ಉತ್ತರಾಧಿಕಾರಿಯಾಗಬಹುದಿತ್ತು. ಹೀಗೆ ಶೀನಪ್ಪನನ್ನು ಅರಸಿಬಂದ ಸೌಭಾಗ್ಯವು ಇನ್ನೊಮ್ಮೆಯೂ ಆತನಿಗೆ ತಿಳಿಯದಂತೆಯೇ ಅಳಿಸಿ ಮಾಯವಾಗಿ ಹೋಯಿತು.

ತರುಣಿಯು ಕಣ್ಮರೆಯಾಗುವಷ್ಟರಲ್ಲಿ ಮಾಸಿದ ಹರಕು ಬಟ್ಟೆ ತೊಟ್ಟ, ಕೈಗಳಲ್ಲಿ ಬಲವಾದ ದೊಣ್ಣೆಗಳನ್ನು ಹಿಡಕೊಂಡಿದ್ದ ಕರಿಯ ಮುಖದ ಇಬ್ಬರು, ಜನರ ದೃಷ್ಟಿಯಿಂದ ತಪ್ಪಿಸಬಯಸುವವರಂತೆ ಕಳ್ಳ ಹೆಜ್ಜೆಯಿಡುತ್ತ ಅದೇ ಮರದ ಬಳಿಗೆ ಬಂದರು. ಅವರಿಬ್ಬರೂ ಯಾವುದೇ

ಕೃತ್ಯವನ್ನಾದರೂ ಮಾಡಿ ಯಾವುದೇ ರೀತಿಯಿಂದಲಾದರೂ ಜೀವನ ಸಾಗಿಸುತ್ತಿದ್ದ ಧೂರ್ತರಿದ್ದರು. ಯಾರನ್ನೋ ದಾರಿಹೋಕರನ್ನು ಸುಲಿಗೆಮಾಡಿ ಅದನ್ನು ಹಂಚಿಕೊಳ್ಳಲು ಅವರು ಅಲ್ಲಿಗೆ ಬಂದಿದ್ದರು. ಶೀನಪ್ಪನು ಮಲಗಿ ನಿದ್ರಿಸುತ್ತಿರುವುದನ್ನು ಕಂಡು ಒಬ್ಬನು ಇನ್ನೊಬ್ಬ ನೊಡನೆ ಹೀಗೆಂದು ಹೇಳಿದನು.

'ತಡಿ, ಅವನ ತಲೆಯ ಕೆಳಗಿರುವ ಗಂಟನ್ನುನೋಡು' ತನ್ನ ಗೆಳೆಯನ ಸೂಕ್ಷ್ಮ ಬುದ್ಧಿಗೆ ಮೆಚ್ಚಿ ಮತ್ತೊಬ್ಬನೂ ಹಿಗ್ಗಿಹೋದ.

ಇಬ್ಬರೂ ಹಾಯಾಗಿ ಮಲಗಿ ನಿದ್ರಿಸುತ್ತಿದ್ದ ಶೀನಪ್ಪನ ಬಳಿ ಬಂದರು. ಒಬ್ಬನು ಕೈಯ್ಯಕತ್ತಿಯನ್ನು ಶೀನಪ್ಪನ ಕಡೆಗೆ ಎತ್ತಿ ಹಿಡಿದು ನಿಂತನು. ಇನ್ನೊಬ್ಬನು ಅವನ ಗಂಟನ್ನು ಬಿಚ್ಚಿನೋಡಲು ತೊಡಗಿದನು. ಶೀನಪ್ಪನು ಫಕ್ಕನೇ ಎಚ್ಚರಗೊಂಡರೆ ಏನುಮಾಡಬೇಕೋ, ಏನಾಗಬಹುದೋ ಎಂಬೀ ವಿಚಾರಗಳಿಂದ ಅವರ ಮುಖಭಾವವು ಪಿಶಾಚ ಸದೃಶ್ಯವಾಗಿತ್ತು.

'ಗಂಟನ್ನು ನಾನು ಮೊದಲು ಬಿಚ್ಚಿನೋಡುತ್ತೇನೆ' ಒಬ್ಬನುಹೇಳಿದ.

'ಅದಾಗದು, ನಾನೇ ಬಿಚ್ಚಿನೋಡುತ್ತೇನೆ' ಎರಡನೆಯವನು ಉತ್ತರವಿತ್ತನು. ಅಷ್ಟರಲ್ಲಿ ಒಂದು ನಾಯಿಯು ನೆಲವನ್ನು ಮೂಸುತ್ತಾ ಆ ಕಡೆಗೆ ಬಂದಿತು. ಇಬ್ಬರು ಕಳ್ಳರ ಚಕಿತಮುಖಭಾವ ವನ್ನೂ ಮಲಗಿ ನಿದ್ರಿಸುತ್ತಿದ್ದ ಯುವಕನನ್ನೂ ಹೀಗೆ ಆಚೆ ಈಚೆಗೆ ಹೊರಳಿನೋಡಿತು.

'ನಾಯಿಯ ಹಿಂದೆ ಅದರ ಯಜಮಾನನೂ ಇರಬಹುದು. ನಿಲ್ಲು, ಗಂಟು ಇಲ್ಲಿಯೇ ಇರಲಿ' ಹೀಗೆಂದು ಕತ್ತಿಯನ್ನು ಸೊಂಟದಲ್ಲಿ ಸೇರಿಸಿಕೊಂಡು ಅವರಿಬ್ಬರೂ ಅಲ್ಲಿಂದ ಪರಾರಿಯಾದರು. ಶೀನಪ್ಪನು ಅಲ್ಲಿಯೇ ಮಲಗಿದ್ದನು. ತನ್ನ ತಲೆಯ ಮೇಲೆ ಸುತ್ತಿಬಂದ ಮೃತ್ಯುವೂ ಅವನಿಗೆ ತಿಳಿದಿರಲಿಲ್ಲ; ಕೊನೆಗೆ ಅಪಾಯ ತಪ್ಪಿದ್ದೂ ಅವನ ಗೋಚರಕ್ಕೆ ಬರಲಿಲ್ಲ.

ಒಂದು ತಾಸು ಕಳೆಯಲು ಆತನಿಗೆ ಮೆಲ್ಲನೆ ಎಚ್ಚರವಾಯಿತು.

ದೂರದಲ್ಲಿ ಬಂಡಿಬರುವ ಶಬ್ದ ಕೇಳಿಸಿತು. ಮಾರ್ಗದ ಬಳಿಗೆ ಓಡಿಹೋಗಿ ಕೈತೋರಿಸಿದನು. ಬಂಡಿನಿಂತಿತು.

'ಜಾಗವುಂಟೆ?' ಶೀನಪ್ಪ ವಿನಯದಿಂದ ಪ್ರಶ್ನಿಸಿದ.

'ಕುಳಿತುಕೊಳ್ಳಿ' ಉತ್ತರಬಂತು.

ಬಂಡಿಯಲ್ಲಿ ಕುಳಿತುಕೊಂಡು ಶೀನಪ್ಪನು ಪೇಟೆಯ ತನ್ನ ಭವಿಷ್ಯ ಜೀವನದ ವಿಷಯವಾಗಿಯೇ ಯೋಚಿಸ ತೊಡಗಿದನು. ತಾನು ಅಲ್ಲಿ ಪಡಬೇಕಾದ ಕಷ್ಟಗಳ ಅರಿವೂ ಇತ್ತು ಅವನಿಗೆ ಸಾಹಸ ಮಾಡಬೇಕೆಂದೂ ನಿರ್ಧರಿಸಿಕೊಂಡನು. ಭವಿಷ್ಯದ ಹಲವಾರು ವಿಚಾರಗಳನ್ನು ಕಲ್ಪಿಸಿಕೊಂಡು ಆತನು ಮುಂದೆ ಮುಂದೆ ಸಾಗಿದನು.

ಮಾನವನ ಸಾಹಸಗಳಿಗೂ ಒಂದು ಮಿತಿಯುಂಟು; ಆದರೆ ಅದೃಷ್ಟದ ಆಟಕ್ಕೆ ಅಂತ್ಯವಿಲ್ಲ.

ಅವಳ ಹೃದಯ

ಮನೆ ತುಂಬ ಸಂಸಾರವಿದ್ದು ಹಿಂದೆ ಒಮ್ಮೆ ಆತನ ಜೀವನವು ಸುಖಮಯವಾಗಿ ಸಾಗಿತ್ತು. ಮೀನು ಹಿಡಿಯುವ ತನ್ನ ಕುಲವೃತ್ತಿಯಿಂದಲೇ ಆತ ಮನೆ ಹಿತ್ತಲುಗಳನ್ನು ಗಳಿಸಿಕೊಂಡಿದ್ದ. ತನ್ನ ಮಗನೂ ಪ್ರಾಯಕ್ಕೆ ಬಂದು ತನ್ನ ಕಸುಬಿನಲ್ಲಿ ಕೈಕೊಟ್ಟು ನಿಂತಾಗ ನಿಜವಾಗಿ ಅವನ ಸಂಪಾದನೆ ಏರಿ ಹೋಯಿತು. ಅಂತಹ ಸಮಯದಲ್ಲಿ ತನ್ನ ಒಬ್ಬಳೇ ಮಗಳು ಗಂಡನ ಮನೆಯಲ್ಲಿ ಹತ್ತಾರು ಮಂದಿ ಕುಟುಂಬದೊಂದಿಗೆ ಕಷ್ಟದಿಂದ ದಿನ ಕಳೆಯುತ್ತಿರುವುದನ್ನು ನೋಡಿ ಆಕೆಯನ್ನೂ ಆಕೆಯ ಗಂಡನನ್ನೂ ತನ್ನ ಮನೆಗೇ ಕರೆಸಿಕೊಂಡಿದ್ದ.

ಮನುಷ್ಯನ ಜೀವನದಲ್ಲಿ ಇಂತಹ ಸಂತಸದ ದಿನಗಳು ಬಹುಕಾಲ ಇರುವುದಿಲ್ಲ. ದೊಡ್ಡ ರೋಗವೊಂದು ಹರಡಿ ಊರಿಗೆ ಊರೇ ಸಾವಿನ ಬಾಯಿಗೆ ಬಲಿಯಾಯಿತು. ಪುಟ್ಟಮ್ಮ—ಆತನ ಹೆಂಡತಿ—ಮೊದಲು ರೋಗಕ್ಕೆ ತುತ್ತಾದಳು. ಬಹು ಕಾಲದ ಸಂಗಾತಿನಿ, ಜತೆಯ ಜೀವ, ಹೀಗೆ ಅಗಲಿ ಹೋದಾಗ ಬೀರನಿಗೆ ಸಹಿಸಲಾರದ ವೇದನೆಯಾಯಿತು. ಆದರೆ ತನ್ನ ವಂಶವನ್ನು ಬೆಳಗಿಸುವ ಮಗನ ಮುಖವನ್ನು ನೋಡಿ,ಮಗಳು ಅಳಿಯ ಈ ಸಂಸಾರದ ಮಮತೆಯಲ್ಲಿ,ಆತ ಆ ವ್ಯಥೆಯನ್ನು ಮರೆತುಬಿಟ್ಟ. ಆದರೆ ಪುಟ್ಟಮ್ಮ ತೀರಿ ಹೋದದ್ದೇ--ಆತನ ಮನೆಯ ಬೆಳಕು ನಂದಿ ಹೋದಂತೆ ಆಯಿತು. ಕೆಲವೇ ದಿನಗಳಲ್ಲಿ ಅಳಿಯನೂ ತೀರಿಹೋದ. ಮಗಳ ವೈಭವವನ್ನು ಕಂಡು ಆತ ಬಹಳವಾಗಿ ಮರುಗಿದ. ಆದರೆ ಗಂಡನ ನೆನಪಿಗಾಗಿ ಆಕೆಗೂ ಒಂದು ಮಗು ಇದೆ. ಜೀವನಕ್ಕಾಗಿ ಆಕೆ ದುಡಿಯಬೇಕಾಗಿಲ್ಲ. ತನ್ನ ಮನೆಯಲ್ಲಿ ಸುಖವಾಗಿರಬಹುದೆಂದು ತಿಳಿದು ಸಮಾಧಾನಪಟ್ಟುಕೊಂಡ; ಹಾಗೆ ಹೇಳಿ ಮಗಳನ್ನೂ ಸಂತೈಸಿದ.

ಅದೃಷ್ಟವು ಆತನನ್ನು ಅಷ್ಟರಲ್ಲೇ ಬಿಡಲಿಲ್ಲ. ಕೆಲ ದಿನಗಳಲ್ಲಿ ಆತನ ಮಕ್ಕಳಿಬ್ಬರೂ ರೋಗಕ್ಕೆ ಬಲಿಯಾದರು. ಇದು ಆತನ

ಸಂಕಷ್ಟದ ಪರಮಾವಧಿಯಾಗಿತ್ತು. ಇಡೀ ಪ್ರಪಂಚದಲ್ಲಿ ತನ್ನ ಮೊಮ್ಮಗಳು, ಆ ಐದು ವರ್ಷ ಪ್ರಾಯದ ಹಸುಳೆಯೊಂದು, ತಾನೊಬ್ಬ. ಯಾವುದೊಂದು ಅಪರಾಧವೂ ಮಾಡದೆ ಸಂಕಷ್ಟಕ್ಕೆ ಗುರಿಯಾದ ಅವರಿಬ್ಬರೇ! ಬೀರನು ಒಮ್ಮೆ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದ. ಕಡಲು ಭೋರ್ಗರೆದು ಗರ್ಜಿಸುವ ಗಂಭೀರ ಸಮುದ್ರವು, ಎಷ್ಟು ನೊಂದವರಿಗೂ ತನ್ನೊಡಲಲ್ಲಿ ಆಶ್ರಯವೀಯುವುದಾಗಿ ಕೂಗಿ ಕರೆಯುತಿತ್ತು. ಬೀರ ಕಡಲಿಗೆ ಹಾರಿ ಬೇನೆಗೊಂಡ ಜೀವವನ್ನು ಮುಗಿಸಿಬಿಡಬೇಕೆಂದು ನಿರ್ಧರಿಸಿ ಕಡಲ ದಂಡೆಯಲ್ಲಿ ಬಂದು ನಿಲ್ಲುವಷ್ಟರಲ್ಲಿ, ಆತನಿಗೆ ನಿರಪರಾಧಿನಿಯಾದ ಹಸುಳೆ ತನ್ನ ಮೊಮ್ಮಗಳ ನೆನಪಾಗಲು, ಆಕೆಗೆ ಮುಂದೆ ಗತಿಯಿಲ್ಲವಲ್ಲಾ ಎಂಬ ನೆನಪಾದಾಗ, ತನ್ನ 'ಚಿಂತೆ ನಿರ್ಧಾರವನ್ನೆಲ್ಲಾ ಒಮ್ಮೆಲೇ ಮರೆತು ಮಮತೆ ಉಕ್ಕಿಬಂದು, ಒಂದೇ ಓಟದಿಂದ ಮನೆಯ ಕಡೆಗೆ ಓಡಿಬಂದು ಮೊಮ್ಮಗಳನ್ನೆತ್ತಿ ಮುದ್ದಿಸಿ ಮುದ್ದಿಸಿ ತನ್ನ ಕರುಳಿನ ವೇದನೆಯನ್ನು ಹಾಗೆ ಸಂತೈಸಿಕೊಳ್ಳುತ್ತಿದ್ದ.

ಹೀಗೆ ದಿನ, ತಿಂಗಳು, ವರ್ಷಗಳು ಉರುಳಿ ಹೋದವು. ಬೀರನ ಮಮತೆಯ ಪಾಲನೆಯ ಆತನ ಮೊಮ್ಮಗಳು ಚೆನ್ನಿ ಬಳೆಯುತ್ತಾ ಬಂದಳು. ಪ್ರಾಯ ಹೆಚ್ಚಿದಂತೆ ಬೀರನಿಗೆ ಕೈಕಾಲು ಗಂಟುಗಳಲ್ಲಿ ನೀರು ಬಂದು ಮುಂದೆ ದುಡಿಯುವುದೂ ಆಗಲಿಲ್ಲ. ಹದಿನಾರು ವರ್ಷದ ಹುಡುಗಿ ಚೆನ್ನಿಯೇ ದುಡಿದು ಮುದುಕನನ್ನು ಸಾಕುತ್ತಿದ್ದಳು

ಕಡಲ ತಡಿಯಲ್ಲಿದ್ದ ಎತ್ತರವಾದೊಂದು ಬಂಡೆಯ ಮೇಲೆ ತೆರೆಗಳ ಹೊಡೆತದಿಂದ ರಾಶಿಬೀಳುತಿದ್ದ ಹಸಿಹುಲ್ಲನ್ನು ಹೆಕ್ಕಿತಂದು ಹಳ್ಳಿಗೆ ಹೋಗಿ ಮಾರಾಟ ಮಾಡಿ ಚೆನ್ನಿ ತನ್ನ ಮತ್ತು ಅಜ್ಜನ ಜೀವನ ಸಾಗಿಸುತ್ತಿದ್ದಳು. ಪೈರಿಗೆ ಆ ಹುಲ್ಲು ಒಳ್ಳೆಯ ಗೊಬ್ಬರವಾಗುತ್ತಿದ್ದುದರಿಂದ ಚೆನ್ನಿಗೆ ಇದರಿಂದ ಸಾಕಷ್ಟು ಉತ್ಪತ್ತಿಯೂ ಇತ್ತು. ಸಮುದ್ರದ ಅಲೆಗಳು ಬಂಡೆಯ ಮೇಲೆ ಬಲವಂತವಾಗಿ ಬಡಿಯುತ್ತಿದ್ದರೂ ಏಕಾಂಗಿನಿಯಾಗಿ ಆಕೆ ದಿನವಿಡೀ ಅಲ್ಲಿನಿಂತುಕೊಂಡಿದ್ದು ಹುಲ್ಲನ್ನು ಹೆಕ್ಕುತ್ತಾ ಇರುವಳು. ನಿಜವಾಗಿಯೂ ಆಕೆಯ ಆ ಸಾಹಸ ಮೆಚ್ಚುವಂತಿತ್ತು.

ಚೆನ್ನಿಯು ಈ ಸಾಹಸವನ್ನು ನೋಡಿ ನೆರೆಕೆರೆಯುವರು ಕೆಲವರು ಮತ್ಸರ ಪಡುತ್ತಿದ್ದರು. ಒಂದು ದಿನ ಅಪ್ಪಳಿಸುವ ತೆರೆಯೆದ್ದು ಆಕೆಯನ್ನು ಕೊಚ್ಚಿಕೊಂಡು ಹೋದರೆ, ಮುಂದೆ ಆ ಸ್ಥಳವನ್ನು ತಾವು ಆಕ್ರಮಿಸಿಕೊಂಡು ಸಂಪಾದನೆ ಮಾಡಬೇಕೆಂದು ಅವರ ದುರಾಗ್ರಹದ ಬಯಕೆ. ಆದರೆ ಎಷ್ಟೋ ವರ್ಷಗಳಿಂದ ತಾವು ಈ ಬಂಡೆಯು ಹುಲ್ಲು ಕೆಕ್ಕುತ್ತಿದ್ದುದರಿಂದ ಇತರರಿಗಾದರೂ ಅಲ್ಲಿಗೆ ಬರಲು ಹಕ್ಕಿಲ್ಲವೆಂದೇ ಚೆನ್ನಿ ತೀರ್ಮಾನಿಸಿ ಬಿಟ್ಟಿದ್ದಳು. ಯಾರಾದರೂ ಅಪ್ಪಿ ತಪ್ಪಿ ಆ ಬಂಡೆಯ ಬಳಿ ಸುಳಿದರೆ ಸಾಕು, ಆಕೆ ಸಿಡಿದು ಸಿಂಹಿಣಿಯಾಗುತ್ತಿದ್ದಳು. ಆಕೆಗೆ ಹೆದರಿಯೇ ಜನರು ಯಾರೂ ಆ ಬಂಡೆಯ ಬಳಿ ಸುಳಿಯುತ್ತಿರಲಿಲ್ಲ.

ಎಣ್ಣೆ ಬಾಚಣಿಗೆಗಳನ್ನು ಕಾಣದ ಕಪ್ಪು ದಟ್ಟತಲೆ ಕೂದಲುಗಳು, ಪುಷ್ಟವಾದ ಶರೀರ, ಹೆಚ್ಚು ಹಿರಿದೂ ಕೇವಲ ಕಿರಿದೂ ಅಲ್ಲದ ಗಾತ್ರ, ಶುಭ್ರವಾದ ಹೊಳಪು ಕಣ್ಣುಗಳು, ಚೆನ್ನಿ ಹೀಗೆ ಒಂದು ವಿಶೇಷ ತರದ ಹೆಂಗುಸಾಗಿದ್ದಳು. ಸುತ್ತಲಿನ ಜನರು ಆಕೆ ಬಹಳ ಶಕ್ತಿವಂತಳೆಂದೂ, ಧೈರ್ಯಶಾಲಿನಿಯೆಂದೂ, ಹಗಲೂ ಇರುಳೂ ದುಡಿದರೂ ಆಕೆಗೆ ಆಯಾಸವೇ ಇಲ್ಲವೆಂದೂ ಹೇಳುತ್ತಿದ್ದರು. ಮತ್ಸರ ಪಡುವ ಜನರು ಆಕೆಯ ಕುರಿತು ಏನೇ ಹೇಳಲಿ, ಸುತ್ತಲು ಹಳ್ಳಿಯ ಪ್ರಾಯ ತುಂಬಿದ ಹಿರಿಯರು ಆಕೆಯನ್ನು, ಅವಳು ತನ್ನ ಮುದಿ ಅಜ್ಜನನ್ನು ಅಷ್ಟು ಪ್ರೀತಿಯಿಟ್ಟು ಸಾಕುತ್ತಿರುವುದನ್ನು ನೋಡಿ ಬಹಳವಾಗಿ ಕೊಂಡಾಡುತ್ತಿದ್ದರು. ಸುತ್ತುಮುತ್ತಲಿನ ಜನರು ಏನೇ ಹೇಳಲಿ, ಆಗೆ ಒಂದನ್ನೂ ಗಮನಿಸಿದವಳಲ್ಲ ಯಾವುದೇ ಹಬ್ಬ ಹುಣ್ಣಿಮೆ ಬರಲಿ, ಜಗತ್ತಿನಲ್ಲಿ ಏನೇ ನಡೆಯುತ್ತಿರಲಿ, ಅವಳದು ಒಂದೇ ರೀತಿಯ ಉಡಿಗೆ, ಅದೇ ಕಸುಬು, ಅದೇ ರೀತಿ. ಸಹಜವಾಗಿ ಜನರು ಆಕೆಯ ವಿಚಿತ್ರ ಪ್ರಕೃತಿಯನ್ನು ನೋಡಿ ಆಶ್ಚರ್ಯಗೊಳ್ಳುವರು. ತರುಣರಂತೂ ಆಕೆಯನ್ನು ನೋಡಿದರೇ ಒಂದು ರೀತಿಯಿಂದ ಹೆದರಿಕೊಳ್ಳುತ್ತಿದ್ದರು!

ಬಸಪ್ಪ ಒಂದು ದಿನ ಚೆನ್ನಿಯೊಡನೆ ಹುಲ್ಲಿನ ಕ್ರಯದ ವಿಷಯವಾಗಿ ಚರ್ಚೆಮಾಡಿದ. ಅವನು ಹೇಳಿದ ಕ್ರಯಕ್ಕೆ ಹುಲ್ಲನ್ನು ಕೊಡು

ವುದಕ್ಕಿಂತ, ತಾನು ಅದನ್ನು ಸಮುದ್ರಕ್ಕೇ ಎಸೆದು ಬಿಡುವೆನೆಂದು ಚೆನ್ನಿ ಹೇಳಿ ಬಿಟ್ಟಳು. ಒಂದು ಚಿಕ್ಕಾಸೂ ಬೆಲೆ ಹೆಚ್ಚು ಕೊಡಲಾರೆನೆಂದು ಬಸಪ್ಪನೂ ಹಠ ಹಿಡಿದ. ಚೆನ್ನಿ ಮುಂದೆ ಮಾತೇ ಆಡದೆ ಅಲ್ಲಿಂದ ಹೊರಟು ಬಂದಿದ್ದಳು. ಸರಿ, ಆ ಮೇಲೆ ಚೆನ್ನಿಯ ಕುರಿತು ಬಸಪ್ಪನಿಗೆ ದ್ವೇಷ ಮಸಗಿತು. ಆಕೆಗೆ ತಿಳಿಯದಂತೆ, ಬಂಡೆಗೆ ಹೋಗಿ ಅಲ್ಲಿನ ಹುಲ್ಲನ್ನೆಲ್ಲಾ ಕದ್ದು ತರುವುದಾಗಿ ತನ್ನ ಮಗ ನರಸನೊಡನೆ ಹೇಳಿದ.

ತನ್ನ ಬಂಡೆಯ ಮೇಲಿಂದ ಹುಲ್ಲು ಕಳವಾಗುತ್ತಾ ಇರುವುದು ಚೆನ್ನಿಗೂ ತಿಳಿಯಿತು. 'ಒಮ್ಮೆ ನಾನು ಮೆಲ್ಲನೆ ಹಿಂದಿನಿಂದ ಹೋಗಿ ಕಳ್ಳನನ್ನು ಬಂಡೆಯ ಮೇಲಿನಿಂದ ಕೆಳಗೆ ಕಡಲಿಗೆ ದೂಡಿ ಬಿಡುತ್ತೇನೆ' ಎಂದು ಚೆನ್ನಿ ಒಮ್ಮೆ ತನ್ನಜ್ಜನೊಡನೆ ಸಿಟ್ಟುಗೊಂಡು ಹೇಳಿದ್ದಳು. ಒಂದು ದಿನ ನರಸನನ್ನು ಬೆಳಗು ಮುಂಜಾನೆಯ ಹೊತ್ತಿನಲ್ಲಿ ಚೆನ್ನಿ ಆ ದಂಡೆಯ ಮೇಲೆ ಕಂಡು ಬಿಟ್ಟಳು. ಸೀದಾ ಆತನ ಕಡೆಗೆ ಹೋಗಿ, 'ನಿನಗೆ ಇನ್ನೆಲ್ಲಿಯಾದರೂ ಹುಲ್ಲು ಹೆಕ್ಕಲು ಮಾರಿಯೆ! ಕಳ್ಳತನ ಮಾಡಿ ನೀನು ಎಂದೂ ನನ್ನ ಕಣ್ಣು ತಪ್ಪಿಸಿಕೊಳ್ಳಲಾರೆ' ಎಂದು ಸಿಟ್ಟಿನಿಂದ ಹೇಳಿದಳು.

'ಚೆನ್ನೀ, ಇಲ್ಲಿದ್ದಷ್ಟು ಹುಲ್ಲು ಇನ್ನೆಲ್ಲಿಯೂ ಸಿಗುವುದಿಲ್ಲ ಸಮುದ್ರದ ಬಂಡೆಗೆ ನೀನು ಬರುವಂತೆ ನಾನೂ ಬರುತ್ತೇನೆ. ಇದರಲ್ಲಿ ಕಳ್ಳತನವೇನಿದೆ?' ನರಸ ಆಕೆಯೊಡನೆ ಸರಸವಾಗಿ ಹೇಳಿದ. ಕೊನೆಗೆ ಆಕೆಯನ್ನು ಸಮಾಧಾನಪಡಿಸಲು, ಅದೇ ಬಂಡೆಯ ಸಮೀಪದಲ್ಲಿರುವ ಇನ್ನೊಂದು ಬಂಡೆಯ ಕಡೆಗೆ ಕೈ ತೋರಿಸಿ, ಮುಂದಕ್ಕೆ ತಾನು ಅಲ್ಲಿ ಹುಲ್ಲನ್ನು ಹೆಕ್ಕುವುದಾಗಿಯೂ ಆಕೆ ಈ ಬಂಡೆಯಲ್ಲಿ ಹೆಕ್ಕುವ ಹುಲ್ಲಿನ ಇಮ್ಮಡಿಯಷ್ಟು ತಾನು ಅಲ್ಲಿ ಸಂಗ್ರಹಿಸಿ, ಮುಂದೆ ಆಕೆಗಿಂತ ಕಡಿಮೆ ಕ್ರಯದಲ್ಲಿಯೇ ತಾನು ಹುಲ್ಲು ಮಾರುವುದಾಗಿಯೂ ಹೇಳಿದ

ಇದನ್ನು ಕೇಳುತ್ತಿದ್ದಂತೆ ಚೆನ್ನಿಗೆ ಸಿಟ್ಟು ಸಂತಸಗಳೆರಡೂ ಹೆಚ್ಚಿದವು. ಆತನು ತನ್ನ ಬಂಡೆಯ ಸಮೀಪದಲ್ಲಿಯೇ ನಿಂತು ಹುಲ್ಲು ಹೆಕ್ಕಿ ತನ್ನೊಡನೆ ಸ್ಪರ್ಧಿಸುವುದಾಗಿಯೂ, ತನಗಿಂತ ಕಡಿಮೆ ಕ್ರಯಕ್ಕೆ

ಮಾರಾಟ ಮಾಡುವುದಾಗಿಯೂ ಹೇಳಿದ್ದಕ್ಕಾಗಿ ಸಿಟ್ಟುಗೊಂಡಳು; ಆದರೆ ಬಳಿಯ ಬಂಡೆಗೆ ಹೋಗಿ ಆತನು ಬಹುಕಾಲ ಹುಲ್ಲು ಹೆಕ್ಕಲಾರನೆಂದು ತಿಳಿದು ಸಂತಸಗೊಂಡಳು. ಅವಳ ಸಿಟ್ಟು ಧಾರ್ಷ್ಟ್ಯಗಳಿಗಾಗಿಯೂ ಆಕೆಯ ವೇಷಕ್ಕಾಗಿಯೂ ನರಸ ಆಕೆಯನ್ನು ತಮಾಷೆ ಮಾಡಿ ಹುಲ್ಲಿನ ಕಟ್ಟನ್ನು ತಲೆಯ ಮೇಲೇರಿಸಿಕೊಂಡು ಮನೆಯ ದಾರಿ ಹಿಡಿದು ನಡೆದ. ಚೆನ್ನಿ ಆತನ ಕಡೆಗೇ ಕಣ್ಣರಳಿಸಿ ನೋಡುತ್ತಿದ್ದಳು. ವಿಶಾಲವಾದ ಹಣೆ, ಹಣೆಯ ಮೇಲೆ ಕೆದರಿದ್ದ ಮುಂಗುರುಳುಗಳು, ದೀರ್ಘವಾದ ಆಕಾರ, ಅಗಲವಾದ ಎದೆ, ಗಟ್ಟಿಮುಟ್ಟಾದ ತೋಳುಗಳು—ಹೀಗೆ ನರಸ ತುಂಬು ಜವ್ವನದ ತರುಣ. ಆತನನ್ನು ನೋಡುತ್ತಾ ಇದ್ದಂತೆ ಚೆನ್ನಿಗೆ ಏನೋ ಒಂದು ಅಪೂರ್ವ ಆನಂದದ ಅನುಭವವಾಯಿತು. ತಿರುಗಿ ಆಕೆ ತನ್ನ ಕೆಲಸಕ್ಕೆ ಸುರು ಹಚ್ಚಿದಳು. ಪೂರ್ವ ದಿಕ್ಕಿನಲ್ಲಿ ಅರುಣರಾಗವನ್ನು ಚೆಲ್ಲಿ ಸೂರ್ಯನು ಉದಿಸಿ ಬರುತ್ತಿದ್ದನು. ಸೂರ್ಯ ಕಿರಣಗಳು ಕಡಲ ತೆರೆಗಳ ಮೇಲೆ ಸುಂದರವಾಗಿ ನರ್ತನ ಮಾಡುತ್ತಿದ್ದವು. ಕಡಲು ಶಾಂತ ಗಂಭೀರವಾಗಿ ಶಬ್ದ ಮಾಡುತ್ತಿರಲು, ಆ ಆನಂದದ ಸಮಯದಲ್ಲಿ ಚೆನ್ನಿ ತನ್ನ ಜಜ್ಜ ಕಲಿಸಿಕೊಟ್ಟ ಪಾಡ್ದನವೊಂದನ್ನು ಗಟ್ಟಿಯಾಗಿ ಹಾಡುತ್ತಾ ಹುಲ್ಲು ಕೂಡಹಾಕತೊಡಗಿದಳು.

ಮರುದಿನ ಮುಂಜಾನೆ ನರಸ ಬರುವುದಕ್ಕಿಂತ ಮೊದಲೇ ಚೆನ್ನಿ ತನ್ನ ಬಂಡೆಯ ಮೇಲೆ ಬಂದು ನಿಂತಿದ್ದಳು ಆತ ಬಂದಾಗ ಇನ್ನು ಬೇರೆ ಉಪಾಯವಿಲ್ಲದೆ, ನಿನ್ನೆ ಆಕೆಯೊಡನೆ ಹೆಮ್ಮೆ ಕೊಚ್ಚಿಕೊಂಡಂತೆ ಆಗ ಹತ್ತಿರದ ಇನ್ನೊಂದು ಬಂಡೆಗೆ ಹೋಗಲೇಬೇಕಾಯಿತು. ನರಸ ಬಂದವನೇ ಹಿಂದು ಮುಂದು ನೋಡದೆ ಸಮುದ್ರಕ್ಕಿಳಿದು ಆ ಬಂಡೆಯ ಕಡೆಗೆ ಈಜತೊಡಗಿದ. ಆತ ಬಂದಿರುವುದನ್ನು ಚೆನ್ನಿ ತಿಳಿದಿದ್ದರೂ ಅವನೊಡನೆ ಮಾತನಾಡದೆಯೇ ಆಕೆ ತನ್ನ ಕೆಲಸವನ್ನು ಮಾಡುತ್ತಾ ಇದ್ದಳು. ಆತನೇ ಮೊದಲು ಮಾತನಾಡಿಸಬೇಕೆಂದೂ, ಈ ದಿನ ತಾನು ಆತನನ್ನು ಮೊದಲು ಬಂದು ಸೋಲಿಸಿದೆನೆಂದೂ ಆಕೆ ಹೆಮ್ಮೆಗೊಂಡಿದ್ದಳು. ಆದರೆ ನರಸನು ಸೀದಾ ಸಮುದ್ರಕ್ಕೆ ಇಳಿದು ಬಂಡೆಯ ಕಡೆಗೆ ಈಜುವುದನ್ನು ನೋಡಿ ಅವಳ ನಿರ್ಧಾರವು ತಪ್ಪಿ ಹೋಯಿತು!

'ಅಯ್ಯೋ ನಿನಗೆ ಹುಚ್ಚು. ನೀನು ಆ ಬಂಡೆಯ ಕಡೆಗೆ ಈಜಿ ಹೋದರೆ ತಿರುಗಿ ಬರುವಂತಿಲ್ಲ' ಚೆನ್ನಿ ಕೂಗಿ ಹೇಳಿದಳು.

'ನೀನು ನಿನ್ನ ಕೆಲಸ ಮಾಡು. ನನ್ನ ವಿಷಯ ನಿನಗೆ ಯೋಚನೆ ಯೇಕೆ?' ನರಸ ಈಜುತ್ತಾ ಮುಂದೆ ಹೋಗುತ್ತಿದ್ದ.

'ಒಳ್ಳೆಯದಾಯಿತು, ಅವನ ದರ್ಪ ಈಗ ಇಳಿಯುತ್ತದೆ' ಹೀಗೆಂದು ಆಕೆ ತನ್ನ ಕೆಲಸದಲ್ಲಿ ತೊಡಗಿದಳು.

ಎರಡು ನಿಮಿಷ ಕಳೆದಿರಲಿಲ್ಲ. ಸಮೀಪದ ಬಂಡೆಯ ಕಡೆಯಿಂದ ಕೂಗಿದ ಶಬ್ದ ಕೇಳಿಸಿತು ಚೆನ್ನಿ ಹೊರಳಿ ನೋಡಿದಳು. ಎದ್ದು ಹಾರುವ ತೆರೆಗಳ ನಡುವೆ ನರಸನ ಶರೀರವು ಹೊಡೆದಾಡುತ್ತಿತ್ತು! ಒಂದು ತೆರೆಯೆದ್ದು ಆತನ ಶರೀರವನ್ನು ಬಂಡೆಗೆ ಬಡಿಯಿತು. ಚೆನ್ನಿ ಚೀರಿ ಬಿಟ್ಟಳು! ಪುನಃ ಆತನ ಶರೀರವು ತೆರೆಗಳ ನಡುವೆ ಎದ್ದು ಮುಳುಗುತ್ತಿರುವುದು ಕಂಡಿತು. ಆತನ ತಲೆಗೆ ಗಾಯವಾಗಿ ನೆತ್ತರು ಚಿಮ್ಮುತ್ತಿರುವುದೂ ಆಕೆಗೆ ತೋರದಿರಲಿಲ್ಲ.

ದಡದ ಕಡೆಗೆ ಧಾವಿಸಿ ಹೋದವಳೇ ಚೆನ್ನಿ, ಅಲ್ಲಿದ್ದ ಆತನ ಅಂಗಿಯನ್ನು ಹರಿದು ಹಗ್ಗ ಮಾಡಿ, ಆತನು ತಂದಿದ್ದ ಹಗ್ಗ ಮತ್ತು ತನ್ನ ಹಗ್ಗ ಇವುಗಳನ್ನು ಸೇರಿಸಿ, ಆತನ ಸಮೀಪದ ಬಂಡೆಯ ಕಡೆಗೆ ಈಜಿ ಹೋಗಿ, ಒಂದು ಕೈಯಿಂದ ಬಂಡೆಯನ್ನೂ ಹಗ್ಗದ ತುದಿಯನ್ನೂ ಹಿಡಕೊಂಡು, ಇನ್ನೊಂದು ತುದಿಯನ್ನು ಆತನು ಮುಳುಗಿ ಏಳುತ್ತಿರುವಲ್ಲಿಗೆ ಎಸೆದಳು.

'ನರಸಾ ಹಗ್ಗದ ತುದಿ ಹಿಡಿದುಕೋ' ಆಕೆ ಕೂಗಿ ಹೇಳಿದಳು. ಹೇಗೋ ಮಾಡಿ ಆತನು ಹಗ್ಗದ ತುದಿಯನ್ನು ಹಿಡಕೊಂಡನು. ಚೆನ್ನಿ ಗಟ್ಟಿಯಾಗಿ ಎಳೆದಳು. ಅಲೆಗಳು ಇನ್ನೂ ಕೆರಳಿದ್ದವು. ನರಸ ಹೇಗೋ ಕೊನೆಗೆ ತನ್ನ ಕಡೆಗೆ ಬರುತ್ತಿದ್ದ. ಹಗ್ಗವನ್ನು ಬಾಯಿಯಲ್ಲಿ ಕಚ್ಚಿಕೊಂಡು ಚೆನ್ನಿ ತನ್ನ ಬಂಡೆಯ ಕಡೆಗೆ ಈಜಿ ಬಂದಳು. ನರಸನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು. ರಕ್ತ ಹರಿಯುತ್ತಿದ್ದ ಗಾಯಕ್ಕೆ ವಸ್ತ್ರವನ್ನು ಗಟ್ಟಿಯಾಗಿ ಕಟ್ಟಿದಳು ಅಷ್ಟರಲ್ಲಿ ಸಮುದ್ರದಲ್ಲಿ

ಭರತ ಉಂಟಾಗಿತ್ತು. ಮುಂದೇನು ಮಾಡುವುದೆಂದು ಒಮ್ಮೆ ಆಕೆಗೆ ಏನೂ ತೋಚಲಿಲ್ಲ. ಐದು ನಿಮಿಷ ದಾಟಿದರೆ ಆಕೆ ಕುಳಿತಿದ್ದ ಬಂಡೆಯನ್ನು ನೀರು ಮುಚ್ಚಿ ಬಿಡುವುದು! ಮೃತ್ಯುಮುಖದಿಂದ ಒಮ್ಮೆ ಆತನನ್ನು ಪಾರುಗೊಳಿಸಿದ ಮೇಲೆ ಮುಂದೆ ಆತನನ್ನು ಬದುಕಿಸುವಲ್ಲಿ ಆಕೆ ಜೀವವನ್ನೇ ಅರ್ಪಿಸಲು ಸಿದ್ಧಳು. ಮೆಲ್ಲನೇ ಆತನನ್ನು ಎತ್ತಿಕೊಂಡು ದಡಕ್ಕೆ ತಂದು ಬಿಟ್ಟಳು.

ಅಷ್ಟರಲ್ಲಿ ಬೀರನೂ ಅಲ್ಲಿಗೆ ಬಂದಿದ್ದ. 'ನರಸ ಈ ಹೊಂಡಕ್ಕೆ ಇಳಿದ. ನೋಡು, ಬಂಡೆಗೆ ಬಡಿದು ಆತನ ತಲೆಗೆ ಎಷ್ಟು ಗಾಯವಾಗಿದೆ!' ಚೆನ್ನಿ ಮುದುಕನೊಡನೆ ಹೇಳಿದಳು. 'ಮಗೂ, ಆತನು ಜೀವಿಸಿದ್ದಾನಷ್ಟೆ?' ಮುದುಕ ಆತುರದಿಂದ ಕೇಳಿದ. 'ನಾನು ಇಲ್ಲಿ ಇಲ್ಲದಿದ್ದರೆ ಆತ ಸಾಯುಬಹುದಿತ್ತೇನೊ, ಈಗ ನಾನು ಅವರ ಮನೆಗೆ ಹೋಗಿ ತಿಳಿಸಿ ಬರುತ್ತೇನೆ' ಚೆನ್ನಿ ಹೊರಡಲು ಅನುವಾದಳು. 'ಚೆನ್ನೀ, ಅವನನ್ನು ನಾವೇ ಕೊಲ್ಲಲು ಪ್ರಯತ್ನ ಮಾಡಿದೆವೆಂದು ಅವನ ಮನೆಯವರು ಹೇಳಿದರೆ?' ಮುದುಕ ಸಾಶಂಕನಾಗಿ ಪ್ರಶ್ನಿಸಿದ. 'ಏನು, ನಾವು ಕೊಲ್ಲುವುದೆ? ಹಾಗೆ ಸುಳ್ಳು ಹೇಳಲು ಯಾರಿಗೆ ನಾಲಿಗೆ ಬಂದೀತು? ನಾನು ನಿಜವಾಗಿ ಅವನನ್ನು ಬದುಕಿಸಿದ್ದೇನಲ್ಲಾ?' ಮುಂದಿನ ಮಾತನ್ನು ಕಾಯದೆ ಚೆನ್ನಿ ನರಸನ ಮನೆಗೆ ಓಡಿಹೋದಳು.

ಓಡಿ ಬಂದ ಸಂಭ್ರಮದಲ್ಲಿಯೂ ಆಯಾಸದಲ್ಲಿಯೂ ನರಸನ ಸುದ್ದಿಯನ್ನು ತಿಳಿಸುವಾಗ ಚೆನ್ನಿಯ ಮಾತು ತಡವರಿಸುತಿತ್ತು. ಬಹಳ ಕಷ್ಟದಿಂದ ನರಸನ ಅವಸ್ಥೆಯನ್ನು ಅವನ ಮನೆಯವರಿಗೆ ತಿಳಿಸಿದಳು. ನರಸನ ತಾಯಿ ಅಳತೊಡಗಿದಳು. ಬಸಪ್ಪನು ಬಂದು ಪ್ರಶ್ನೆ ಮಾಡುವಷ್ಟರಲ್ಲಿ, ಅವಳು, ನರಸನು ಗಾಯಗೊಂಡಿರುವುದಾಗಿಯೂ ಬೇಗನೇ ವೈದ್ಯರನ್ನು ಕರೆದುಕೊಂಡು ಬರಬೇಕಾಗಿಯೂ ಹೇಳಿ, ಕೂಡಲೇ ನರಸನು ಇದ್ದಲ್ಲಿಗೆ ಓಡಿ ಬಂದಳು ಮನೆಯವರೂ ಆಕೆಯನ್ನು ಹಿಂಬಾಲಿಸಿದರು. ನರಸನನ್ನು ಅವನ ಮನೆಯಕಡೆ ಹೊತ್ತು ತರುವಾಗ ಚೆನ್ನಿಯೂ ಅವರನ್ನು ಹಿಂಬಾಲಿಸಿ ಬಂದಳು.

ಸ್ವಲ್ಪ ದೂರದ ವರೆಗೆ ಎಲ್ಲರೂ ಮೌನವಾಗಿ ನಡೆದರು. ಬಸಪ್ಪನ ಕಿವಿಯಲ್ಲಿ ಯಾರೋ ಏನೋ ಹೇಳುತ್ತಿದ್ದರು. 'ಆತನ ಜೀವಕ್ಕೆ ಏನಾದರೂ ಅಪಾಯವುಂಟಾದರೆ ನಿನ್ನ ಜೀವವೂ ಉಳಿಯಲಾರದು' ಬಸಪ್ಪ ಚೆನ್ನಿಯೊಡನೆ ನಿಷ್ಠುರನಾಗಿ ನುಡಿದ. 'ಅಯ್ಯೋ! ಈ ಕಾಳಿ ನನ್ನ ಮಗನನ್ನು ಕೊಂದಳಲ್ಲಾ!' ನರಸನ ತಾಯಿಯೂ ಬೊಬ್ಬಿಟ್ಟಳು. ಚೆನ್ನಿಗೆ ಈಗ ತನ್ನ ಅಜ್ಜನು ಹೇಳಿದ ಮಾತು ನೆನಪಾಯಿತು. 'ಇವರು ಪಾಪಿಗಳು, ಸುಳ್ಳುಗಾರರು, ಮಾಡಿದ ಉಪಕಾರ ಇಲ್ಲದವರು' ಎಂದು ಅವರನ್ನೆಲ್ಲಾ ಬೈಯುತ್ತಾ ಚೆನ್ನಿ ತನ್ನ ಮನೆಯ ಕಡೆಗೆ ಓಡಿಬಂದಳು. ಅಜ್ಜನೊಡನೆ ಹೇಳಿ ಕಣ್ಣೀರು ಹೊಳೆಯಾಗಿ ಹರಿಸಿಬಿಟ್ಟಳು!

ಹತ್ತು ದಿನಗಳು ದಾಟಿದವು.

ಒಂದು ದಿನ ಬಸಪ್ಪ ಚೆನ್ನಿಯ ಮನೆಗೆ ಬಂದ. ಏನು ಅನಾಹುತವಾಯಿತೋ ಎಂದು ಮುದುಕ ಬೀರನಿಗೆ ಭಯ. ಚೆನ್ನಿಗೆ ನರಸನ ವಿಷಯ ತಿಳಿವ ಕುತೂಹಲ. ಬಂದವನೇ ಬಸಪ್ಪನು, ನರಸನು ಮೂರ್ಛೆ ತಿಳಿದು ಗುಣಹೊಂದುತ್ತಿರುವುದಾಗಿಯೂ ಈಗ ಕೆಲದಿನಗಳಿಂದ ಚೆನ್ನಿಯನ್ನೇ ಕನವರಿಸುತ್ತಿರುವನಾಗಿಯೂ ಹೇಳಿ, ತನ್ನ ಮಗನ ಜೀವವುಳಿಸಿದ ಚೆನ್ನಿಯ ವಿಷಯ ನಿಷ್ಠುರ ಮಾತನಾಡಿ ತಾನು ಮಹಾಪರಾಧ ಮಾಡಿದ ಬಗ್ಗೆ ಆಕೆಯ ಕ್ಷಮೆ ಕೇಳಿ, ತನ್ನೆಲ್ಲಾ ಅಪರಾಧಗಳನ್ನು ಮನ್ನಿಸಿ ಒಮ್ಮೆ ಚೆನ್ನಿ ತನ್ನ ಮನೆಗೆ ಬಂದು ನರಸನನ್ನು ಕಂಡು ಸಮಾಧಾನಪಡಿಸಿ ಬರಬೇಕಾಗಿಯೂ ಬೇಡಿಕೊಂಡ.

ಚೆನ್ನಿ ಇದನ್ನು ಕೇಳಿ ನಾಚಿಕೊಂಡಳು. ನಿಜವಾಗಿಯೂ ಆಕೆಗೆ ಇಂಥಾ ಉಪಚಾರ ಬೇಕಾಗಿರಲಿಲ್ಲ. ಆತನನ್ನು ನೋಡ ಹೋಗುವಲ್ಲಿ ಚೆನ್ನಿಯೂ ಸಹಜವಾಗಿ ಉತ್ಸುಕಳಿದ್ದಳು. ಬಸಪ್ಪನು ಮಾತನಾಡಿ ಮುಗಿಸಬೇಕಾದರೆ ಚೆನ್ನಿ ಮುನ್ನಡೆದಿದ್ದಳು. ಬಸಪ್ಪ ಆಕೆಯನ್ನು ಹಿಂಬಾಲಿಸಿ ಹೊರಟ.

'ಅವ್ವಾ, ಚೆನ್ನಿ ಬಂದಳೆ?' ನರಸ ತಾಯಿಯೊಡನೆ ಕೇಳಿದ. ಅಷ್ಟರಲ್ಲೇ ಚೆನ್ನಿಯೂ ಬಸಪ್ಪನೂ ಒಳಗೆ ಕಾಲಿಟ್ಟರು. ಬಂದವಳೇ ಚೆನ್ನಿ

ನರಸನ ಚಾಪೆಯ ಬಳಿ ಬಂದು ಕುಳಿತು ಬಿಟ್ಟಳು. 'ಚೆನ್ನಿ ಬಂದೆಯಾ' ಆಕೆಯ ಕೈಯನ್ನು ಹಿಡಿದು ನರಸ ತನ್ನ ಹಣೆಗೆ ಒತ್ತಿಕೊಂಡ. 'ಅಮ್ಮಾ, ಚೆನ್ನಿಯಿಲ್ಲದಿದ್ದರೆ ನಾನು ಆ ದಿನ ಬದುಕುತ್ತಿರಲಿಲ್ಲವಮ್ಮಾ! ಚೆನ್ನಿ, ಇನ್ನು ಮುಂದೆ ನಿನ್ನ ಬಂಡೆಯ ಬಳಿ ಬಂದು ನಿನಗೆ ತೊಂದರೆ ಮಾಡಲಾರೆ' ಹೀಗೆ ಹೇಳುತ್ತಾ ನರಸನ ಕಂಠವು ಬಿಗಿದು ಬಂದಿತ್ತು!

'ಮಗೂ ಚೆನ್ನಿ, ನಿನ್ನ ವಿಷಯ ಹಗಲುರಾತ್ರಿ ಹೇಳಿಕೊಂಡು ಆತ ನಿದ್ದೆ ಮಾಡುವುದೇ ಇಲ್ಲ. ನಿದ್ದೆ ಮಾಡದಿದ್ದರೆ ಆರೋಗ್ಯ ಕೆಟ್ಟು ಹೋಗುತ್ತದೆಂದು ವೈದ್ಯರು ಹೇಳುತ್ತಾರೆ. ನೀನು ಕೆಲಸಮಯ ನಮ್ಮ ಮನೆಯಲ್ಲಿಯೇ ಇರುತ್ತೀಯೇನಮ್ಮಾ?' ನರಸನ ತಾಯಿ ಕಂಬನಿ ತುಂಬಿ ಚೆನ್ನಿಯ ತಲೆ ಸವರಿ ಕೇಳಿದಳು. 'ಚೆನ್ನೀ, ಮುಂದೆ ನೀನು ಮಗಳಾಗಿರು; ನನ್ನ ಮಗನ ಜೀವವುಳಿಸಿದ ಉಪಕಾರವನ್ನು ನಾನು ಬೇರಿ ಸಲಿಸುವಂತಿಲ್ಲ' ಬಸಪ್ಪ ಕೃತಜ್ಞತೆಯಿಂದ ಹೇಳಿದ. ಇಷ್ಟರಲ್ಲಿ ನರಸನೂ ನಿದ್ದೆ ಹೋಗಿದ್ದ.

ಚೆನ್ನಿಗೆ ತನ್ನ ಮನೆಯ ಹಾಗೂ ಅಜ್ಜನ ನೆನಪಾಯಿತು. ಯಾರು ಏನೆಂದರೂ ಕೇಳದೆ ತನ್ನ ಮನೆಗೆ ಹಿಂತೆರಳಿದಳು. ಬಸಪ್ಪನೂ ಆಕೆಯನ್ನು ಮನೆ ವರೆಗೆ ಬಿಟ್ಟು ಬಂದನು. ಬರುವಾಗ ದಾರಿಯಲ್ಲಿ 'ತಾನು ಅವರ ಮಗಳಾಗುವುದೆ? ಅದು ಹೇಗೆ?' ಇದೇ ವಿಚಾರ ಅವಳ ತಲೆತುಂಬ ತುಂಬಿ ಹೋಗಿತ್ತು. ಈ ಯೋಚನೆಯಿಂದ ಚೆನ್ನಿಗೆ ರಾತ್ರಿ ಇಡೀ ನಿದ್ರೆ ಬರಲೇ ಇಲ್ಲ.

ನರಸನು ಪೂರ್ಣ ಆರೋಗ್ಯ ಹೊಂದಿದನು. ಚೆನ್ನಿ ನರಸನ ಕೈ ಹಿಡಿದಳು. ಚೆನ್ನಿಯೆಂದರೆ ನರಸನ ತಂದೆ ತಾಯಿಗಳಿಗಿಂದು ಜೀವ. ನರಸ ಹಂಡತಿ ಚೆನ್ನಿಯನ್ನು ಆರೆಕ್ಷಣ ಬಿಟ್ಟಿರಲಾರ. ಆಕೆ ಒಂದು ಗಂಡು ಮಗುವನ್ನೂ ಹೆತ್ತಳು. ಹೊಲದ ಬೇಸಾಯ ಮಾಡಿಕೊಂಡು ನರಸ ತಂದೆತಾಯಿಗಳನ್ನೂ ಸಂಸಾರವನ್ನೂ ಸಾಕುತ್ತಿದ್ದ. ಹುಲ್ಲು ಹೆಕ್ಕುವ ಆ ಬಂಡೆಯ ವಿಷಯವನ್ನೇ ಚೆನ್ನಿ ಮರೆತು ಬಿಟ್ಟಳು. ಮುದುಕ ಬೀರ— ಕಡೆಗೊಮ್ಮೆ ತನ್ನ ಬಾಳುವೆಯ ಇಳಿತದ ಸಮಯದಲ್ಲಿ, ಚೆನ್ನಿಯ ಮಗುವನ್ನೆತ್ತಿ ಆಡಿಸುತ್ತಾ ಸಂತೋಷಗೊಂಡನು

ಒಂದು ನಿಟ್ಟುಸಿರು

ಸಂಜೆ ಕಾಲೇಜು ಬಿಟ್ಟು ಬಂದ ವೇಳೆಯೇ ಶಾಂತಿಗೆ ಶರೀರದಲ್ಲಿ ಸೌಖ್ಯವಿಲ್ಲ. ಹಾಸಿಗೆಗೆ ಹೋಗಬೇಕಾದರೆ ತಲೆಸಿಡಿತ ಜೋರಾಗಿತ್ತು. ರಾತ್ರಿ ಚನ್ನಾಗಿ ಜ್ವರಬಂತು. ಮುಂಜಾವದಲ್ಲಿ ಹಾಗೆ ಮೈಬೆವರಿ ಕಣ್ಣಿಗೆ ಜಾಡ್ಯ ಹತ್ತಿತೋ ಎನ್ನುವಷ್ಟರಲ್ಲಿ ಆಶ್ರಮದ ಪ್ರಾರ್ಥನೆಯ ಗಂಟೆಯೂ ಆಯಿತು. ಮೈಯ್ಯ ಅಸ್ವಸ್ಥವನ್ನು ಗಣಿಸದೆ ಎಲ್ಲರೊಡನೆ ಆಕೆಯೂ ಹಾಸಿಗೆಬಿಟ್ಟು ಎದ್ದುಹೋದಳು.

ಮೈ ಸ್ವಸ್ಥವಿರಲಿಲ್ಲವಾಗಿ ಕಾಲೇಜಿಗೆ ರಜಾ ಮಾಡಿಬಿಡೋಣವೇ ಎನಿಸಿತು ಆಕೆಗೆ. ಒಂದು ದಿನದ ಪಾಠವನ್ನು ಕಳಕೊಂಡರೆ ಎಷ್ಟೊಂದು ವಿಷಯಗಳು ತಪ್ಪಿಹೋಗುವವೋ ಎಂಬ ಆತುರ ಬೇರೆ. ಅದರಲ್ಲೂ ಶ್ರೀಮತಿ ಆಲಿಸರ ಪಾಠವೆಂದರೆ ಶಾಂತಿಗೆ ಜೀವ. ತನ್ನ ಅಪಾರವಾದ ವಿದ್ಯೆ, ಅದ್ಭುತ ಪ್ರತಿಭೆ, ಇಡೀ ಬಾಳುವೆಯನ್ನೇ ಸೇವೆಗಾಗಿ ಅರ್ಪಿಸಿದ್ದ ಆಕೆಯ ನಿರ್ಮಲ ತಪೋಜೀವನ– ಇವು ಶಾಂತಿಯ ಹೃದಯವನ್ನು ಸೂರೆಗೊಂಡಿತ್ತು. ಆಗಾಗ 'ಸೇವೆಗಾಗಿ ಜೀವ' ಎಂದು ಹೇಳುತ್ತಿದ್ದ ಮಾತು ಶಾಂತಿಯ ಹೃದಯದಲ್ಲಿ ಆಳವಾಗಿ ನಟ್ಟಿಕೊಂಡಿತ್ತು. ಹಾಗಾಗಿ ಕಾಲೇಜಿಗೆ ಹೋಗದಿದ್ದರೆ ಶಾಂತಿಯ ಮನಸ್ಸಿಗೆ ಶಾಂತಿಯಿರಲಿಲ್ಲ.

ತಾನು ಸದಾ ಉಲ್ಲಾಸದಿಂದಿದ್ದು ಸಹಪಾಠಿಣಿಯರಲ್ಲೂ ಉಲ್ಲಾಸ ತುಂಬಿಸುವುದು ಆಕೆಯ ನೈಸರ್ಗಿಕ ಶಕ್ತಿ. ಇಂದು ಶಾಂತಿಯೇ ಹುಷಾರಿಲ್ಲವಾಗಿ ಎಲ್ಲರ ಮುಖದ ನಗೆಯೂ ಮಾಸಿಹೋದಂತಿತ್ತು. ತನ್ನ ಪ್ರೀತಿಯ ಉಪಾಧ್ಯಾಯಿನಿ ಶ್ರೀಮತಿ ಆಲಿಸರೇ ಬಂದು 'ಏನು ಶಾಂತಿಗೆ ಹುಷಾರಿಲ್ಲವೆ?' ಎಂದು ಕೇಳಿದಾಗ ಆಕೆಗೆ ಹೇಗೋ ಅನ್ನಿಸಿತು.

ಸಂಜೆ ಕಾಲೇಜು ಬಿಟ್ಟು ಗೆಳತಿಯರೆಲ್ಲಾ ಅತ್ತಿತ್ತ ಓಡಾಡುತ್ತಿದ್ದರು. ಎಲ್ಲರ ಕಣ್ಣು ತಪ್ಪಿಸಿ ಶಾಂತಿ ಒಬ್ಬಳೇ ಕೋಣೆಗೆ ಬಂದು

ತನ್ನ ಭಾರವಾದ ತಲೆಯನ್ನು ಕೈಗಳಿಂದ ಒತ್ತಿಹಿಡಿದುಕೊಂಡು ಮೇಜಿಗೆ ಆಧರಿಸಿ ಮೌನವಾಗಿ ಕುಳಿತುಕೊಂಡಳು. ಹೊರಗಿನ ಪ್ರಕೃತಿಯು ಎಂದಿನಂತೆ ಆನಂದವನ್ನುಂಟುಮಾಡುವ ಬದಲು, ಇಂದು ಬೇಸರವನ್ನೇ ಹೆಚ್ಚಿಸುತಿತ್ತು.

'ತಂದೆತಾಯಿಗಳ ಮರಣ.......ದೂರದ ಸಂಬಂಧಿಕರಾದ ಡಾ| ರಮಾನಾಥರು ತನ್ನನ್ನು ಅಕ್ಕರೆಯಿಂದ ಸಾಕಿದ್ದು.... ಮುಂದೆ ನಗರಕ್ಕೆ ಕರತಂದು ಮಹಿಳಾಶ್ರಮದಲ್ಲಿ ಸೇರಿಸಿ ತನ್ನನ್ನು ವಿದ್ಯಾಭ್ಯಾಸಕ್ಕೆ ಹಚ್ಚಿದ್ದು ....ಅವರ ಪಿತೃಸಮಾನ ಪ್ರೇಮಲ ಹೃದಯ...ಸಂಸಾರವನ್ನು ಕಳೆದು ಕೊಂಡು ಏಕಾಂಗಿಯಾಗಿ ಹಳ್ಳಿಯ ಚಿಕಿತ್ಸಾಭವನದಲ್ಲಿ ಬಿಡುವಿಲ್ಲದೆ ದುಡಿಯುತ್ತಿರುವ ಅವರ ಜೀವನ....'. ಈ ವಿಚಾರಗಳೆಲ್ಲಾ ಆಕೆಯ ಮನಸ್ಸಿಗೆ ಬಂದಾಗ ಹೃದಯವು ದುಃಖದಿಂದ ಭಾರವಾಯಿತು. ತನ್ನ ಷ್ಟಕ್ಕೆ ಚೆನ್ನಾಗಿ ಅತ್ತುಬಿಟ್ಟಳು. ವಿದ್ಯಾಭ್ಯಾಸ ಮುಗಿದ ಮೇಲೆ, ಅವರ ಬಳಿಯಲ್ಲಿಯೇ ಇದ್ದು ನಿತ್ಯ ಶುಶ್ರೂಷೆಯಿಂದ ತನ್ನ ಋಣವನ್ನು ಸಲ್ಲಿಸ ಬೇಕೆಂದೂ ನಿಶ್ಚಯಿಸಿಕೊಂಡಳು.

ಅಂಚೆಯ ಜವಾನನು ತಂತಿಯೊಂದನ್ನು ಹಿಡಿದು ಓಡಿಬಂದ. ಶಾಂತಿಯ ಹೆಸರಲ್ಲಿ ತಂತಿ. ಎದೆಯು ಬಡಿದುಕೊಂಡಿತು. ಆಗ್ರಹದಿಂದ ಬಿಚ್ಚಿ ಓದಿನೋಡಿದಳು.

'ಇಂದು ಮಧ್ಯಾಹ್ನ ಡಾ| ರಮಾನಾಥರು ಅಕಸ್ಮತ್ತಾಗಿ ಹೃದಯ ಸ್ತಂಭನದಿಂದ ತೀರಿಹೋದರು' ಸ್ಮೃತಿತಪ್ಪಿ ನೆಲದ ಮೇಲೆ ಬಿದ್ದ ಶಾಂತಿಗೆ ಬಹಳ ಸಮಯದ ಶುಶ್ರೂಷೆಯ ಮೇಲೆ ಎಚ್ಚರವಾಯಿತು. ತಾನೆಲ್ಲಿದ್ದೇನೆ, ಏನಾಗಿದೆಯೆಂಬ ಅರಿವೂ ಆಕೆಗೆ ತಪ್ಪಿಹೋಯಿತು. ಮತ್ತೆ ಕಳದ ಘಟನೆಗಳೆಲ್ಲಾ ಸ್ಮೃತಿಪಥಕ್ಕೆ ಬಂದವು. . ದುಃಖವು ತಡೆ ಯದಾಯಿತು. ಪಿತೃಸಮಾನರನ್ನು ಕಳೆದುಕೊಂಡು ಅನಾಥೆಯಾದೆ ನೆಂದು ಅತ್ಯಂತ ಮರುಗಿದಳು. ಗೆಳತಿಯರು–ಸ್ವತಃ ಆಶ್ರಮದ ಮೇಲ್ವಿ ಚಾರಕಿಯರಾದ ಶ್ರೀಮತಿ ಅನಸೂಯಾದೇವಿಯರೇ ಬಂದು ಸಂತೈಸಿ ದರು. ವಿಧಿ ಘಟನೆಯನ್ನು ತಪ್ಪಿಸಲಾಗುವುದಿಲ್ಲವೆಂದೂ, ಜೀವನದಲ್ಲಿ ತಮ್ಮ ಪಾಲಿಗೆ ಬಂದಿರುವ ಸುಖದುಃಖಗಳೆರಡನ್ನೂ ಸಮಾನ ಧೈರ್ಯ

ದಿಂದ ಎದುರಿಸಬೇಕಾದುದು ಜೀವಿತ ಧರ್ಮವೆಂದೂ ಹೇಳಿ ಸಮಾಧಾನ ಪಡಿಸಿದರು.

ಬಿ. ಎ. ಪರೀಕ್ಷೆಯಲ್ಲಿ ಶಾಂತಿ ಉತ್ತಮ ತರಗತಿಯಲ್ಲಿ ತೇರ್ಗಡೆ ಹೊಂದಿದಳು. ಪ್ರಧಾನ ವಿಷಯವಾದ ಅರ್ಥಶಾಸ್ತ್ರದಲ್ಲಿ ಉತ್ತಮಳಾಗಿ ಉತ್ತೀರ್ಣಳಾದ ಕುರಿತು ಶ್ರೀಮತಿ ಆಲೀಸ್ ಆಕೆಯನ್ನು ಉಪಾಧ್ಯಾಯಿನಿಯರ ಗೆಳತಿಯರ ಎಲ್ಲರ ಎದುರಲ್ಲಿಯೂ ಬಹಳವಾಗಿ ಕೊಂಡಾಡಿಬಿಟ್ಟರು. ಶಾಂತಿಯೂ ಒಮ್ಮೆ ಉಬ್ಬಿಹೋದಳು.

ಡಾ| ರಮಾನಾಥರು ಶಾಂತಿಗೆ ತನ್ನ ಅಪಾರವಾದ ಸಂಪತ್ತನ್ನು 'ವಿಲ್' ಮಾಡಿಟ್ಟುಹೋಗಿದ್ದರು. ಆದರೆ ಆಕೆಗೆ ತನ್ನ ಭವಿಷ್ಯತ್ತಿನ ವಿಷಯು ಚಿಂತಿಸಿದಷ್ಟು ನೆಲೆಸಿಗಲಾರದು. ಮುಂದಿನ ವಿದ್ಯಾಭ್ಯಾಸಕ್ಕೆ ಯುರೋಪಿಗೆ ತೆರಳಬೇಕೆಂದೂ, ಮಹಿಳೆಯರೂ ಪಾಶ್ಚಾತ್ಯ ದೇಶಕ್ಕೆ ಹೋಗಿ ಅಲ್ಲಿನ ಸಂಸ್ಕೃತಿಯನ್ನಭ್ಯಾಸಿಸಿ ಬರಬೇಕೆಂದೂ, ಅದರಿಂದ ನಿಜವಾಗಿ ಸ್ವದೇಶಕ್ಕೆ ಹಿತವಾಗುವುದೆಂದೂ ಶ್ರೀಮತಿ ಆಲೀಸ್ ಶಾಂತಿಯನ್ನು ಬಹಳ ಒತ್ತಾಯಪಡಿಸಿದರು. ಎಲ್ಲವೂ ನಿಶ್ಚಯವಾದ ಮೇಲೆ ಇಂಗ್ಲೆಂಡಿನಲ್ಲಿ ತನ್ನ ಪರಿಚಯದವಳೂ ಸಚ್ಚರಿತಳೂ ಆದ ಶ್ರೀಮತಿ ಮಾರ್ಗರೆಟರಲ್ಲಿ ಉಳಕೊಳ್ಳುವ ಬಗ್ಗೆ ಅವರೇ ಏರ್ಪಾಡುಮಾಡಿದರು.

ಯೂರೋಪಿನ ವಿದ್ಯಾಭ್ಯಾಸವು ಶಾಂತಿಯ ಜೀವನದಲ್ಲಿ ಅದ್ಭುತ ಪರಿಣಾಮವನ್ನುಂಟು ಮಾಡಿತು. ಅವರ ಸಾಹಸ ಜೀವನ-ವೈಜ್ಞಾನಿಕ ಮುನ್ನಡೆ-- ರಾಜಕೀಯ ಸ್ವಾತಂತ್ರ್ಯ, ಸಾಮಾಜಿಕ ಸಮಾನತೆ, ಶೋಧನಾ ಶಕ್ತಿ ಇವುಗಳನ್ನು ಆಕೆ ಬಹಳ ಮೆಚ್ಚಿದಳು. ಯೂರೋಪಿನ ರಾಷ್ಟ್ರಗಳ ಕ್ರಾಂತಿಯ ಇತಿಹಾಸವನ್ನು ಅಭ್ಯಾಸ ಮಾಡಿದಳು. ಆ ಸಮಯದಲ್ಲಿ ತನ್ನ ನಾಡಿನ ದುರ್ಗತಿ ಆಕೆಯ ಹೃದಯವನ್ನು ನೋಯಿಸ ಹತ್ತಿತು. ಯುನಿವರ್ಸಿಟಿಯ ಚರ್ಚಾ ಸಭೆಗಳಲ್ಲಿ ಆಕೆ ತನ್ನ ಕೋಮಲ ಅಸ್ಖಲಿತ ಕಂಠಧ್ವನಿಯಿಂದ--ಭಾರತದ ಭಾಗ್ಯೇತಿಹಾಸ, ಸ್ವಾತಂತ್ರ್ಯ ಸಂಗ್ರಾಮ, ಗಾಂಧಿಜೀ ಧುರೀಣತೆ ಇವುಗಳ ಕುರಿತು ಅಮೋಘ ಭಾಷಣ ಮಾಡುತ್ತಿದ್ದಳು. ಯುರೋಪು ಏಷ್ಯಾಗಳ ಮಧುರ ಬಾಂಧವ್ಯಕ್ಕಾಗಿ ಆಕೆ ವಾದಿಸುವಳು. ಯುರೋಪಿನ ವಿಲಾಸಮಯ

ಜೀವನದಲ್ಲಿ ಮರುಳಾಗಿರುವ ಹಲವು ಮಂದಿ ಭಾರತೀಯ ವಿದ್ಯಾರ್ಥಿಗಳಿಗೆ ಅವಳ ಮಾತುಗಳು ಜಡನಿದ್ರೆಯಿಂದ ಹೊಡೆದೆಬ್ಬಿಸುವಂತಿದ್ದವು ಪ್ರೊಫೆಸರರು ವಿದ್ಯಾರ್ಥಿಗಳು ಎಲ್ಲರೂ ಆಕೆಯ ಮಾತುಗಾರಿಕೆ, ಸ್ವದೇಶಾಭಿಮಾನಗಳಿಗಾಗಿ ಬೆರಗಾಗುವರು.

ಶಾಂತಿಯು ಗೆಳೆತನಕ್ಕಾಗಿ ಹಾರೈಸಿ ಬಂದ ಹಲವು ಮಂದಿ ವಿದ್ಯಾರ್ಥಿಗಳನ್ನು-ಅವರಲ್ಲಿ ಅಂತಹ ಯೋಗ್ಯತೆಯಿಲ್ಲದ್ದರಿಂದ ತಿರಸ್ಕರಿಸುವಳು. ಚಂದ್ರಶೇಖರನು ಆಕೆಯ ಭಾರತೀಯ ಸಹಪಾಠಿಗಳಲ್ಲಿ ಒಬ್ಬ. ಹಲವು ವಿಚಾರಗಳಲ್ಲಿ ಇಬ್ಬರೂ ಏಕಾಭಿಪ್ರಾಯದವರಾಗಿದ್ದರು. ತಮ್ಮ ಜೀವನದಲ್ಲಿ ಒಂದು ನಿಶ್ಚಿತವಾದ ಉದ್ದೇಶವಿರಿಸಿಕೊಂಡು ಅದಕ್ಕಾಗಿ ಇಬ್ಬರೂ ಚಡಪಡಿಸುತ್ತಿದ್ದರು. ರಾಜಕೀಯ ವಿಚಾರ---ಅದರಲ್ಲೂ ಭಾರತದ ಸ್ವತಂತ್ರ ಸಂಗ್ರಾಮ, ಇದರ ಕುರಿತು ಮಾತು ಬೆಳೆಸಿದಲ್ಲಿ ಅವರಿಗೆ ಹೊತ್ತು ಹೋಗುವುದೇ ಗೊತ್ತಾಗುತ್ತಿರಲಿಲ್ಲ.

ಒಂದು ವಸಂತ ಹುಣ್ಣಿಮೆಯ ರಾತ್ರಿ ಪ್ರಕೃತಿಯು ಸಂತಸಗೊಂಡು ಉನ್ಮತ್ತವಾಗಿ ನಲಿಯುವಂತಿದೆ. ಶಾಂತಿ ಮತ್ತು ಚಂದ್ರಶೇಖರ್ ಇಬ್ಬರೂ ಮಾತನಾಡುತ್ತಾ ಪಾರ್ಕಿನ ಬಳಿ ಬಂದರು. ಶಾಂತಿ ಮಾತನಾಡುತ್ತಾ ಬಂದು ಒಂದು ಆಸನದಲ್ಲಿ ಕುಳಿತುಕೊಂಡಳು. ಹತ್ತಿರದ ಬಳ್ಳಿಯೊಂದನ್ನು ಬಗ್ಗಿಸಿ ಅದರ ಚಿಗುರನ್ನು ಮೃದುವಾಗಿ ಮುಟ್ಟುತ್ತಿದ್ದಳು. ಮೇಲೆ ನೋಡಿದಾಗ ಆಕಾಶದಲ್ಲಿ ಚಂದ್ರಮನು ಪೂರ್ಣ ಕಳೆ ತುಂಬಿ ಮನೋಹರನಾಗಿ ನಗುತ್ತಿದ್ದನು.

ಚಂದ್ರಶೇಖರನು ಆಕೆ ಕುಳಿತಿದ್ದ ಆಸನಕ್ಕೆ ತಾಗಿ ಬಂದು ಕುಳಿತನು. ಮಂದವಾಗಿ ಬೀಸುವ ಗಾಳಿಯು ಶಾಂತಿಯ ಮುಂಗುರುಳನ್ನು ಆಕೆಯ ಮುಖಮಂಡಲದ ಮೇಲೆ ಕುಣಿದಾಡಿಸುತಿತ್ತು. ಅವಳ ಸಹಜವಾದ ಸ್ಫುರದ್ರೂಪ, ಗಂಭೀರವೂ ತೇಜಃಪುಂಜವೂ ಆದ ಮುಖಮಂಡಲ, ಉಜ್ವಲ ಕಾಂತಿಯುತ್ತಾದ ದೃಷ್ಟಿ, ವಿದ್ವತ್ಪೂರ್ಣವಾದ ಜೀವನ, ತುಂಬಿದ ವಯೋಧರ್ಮ, ಸನ್ನಿಹಿತವಾದ ಸುಂದರ ಪ್ರಕೃತಿಯ ಸನ್ನಿವೇಶ, ಇವುಗಳಿಂದ ಚಂದ್ರಶೇಖರನು ಸೌಂದರ್ಯದ ಸೆರೆಯಾಳಾದನು.

ತೆರೆದ ಕಣ್ಣುಗಳಿಂದ ಆಕೆಯನ್ನೇ ಬಹಳ ಹೊತ್ತು ದಿಟ್ಟಿಸಿ ನೋಡಿದನು. ಆಕಾಶದ ಚಂದ್ರನ ಸೌಂದರ್ಯ ದರ್ಶನದಲ್ಲಿ ಶಾಂತಿ ಬಾಹ್ಯ ಜಗತ್ತಿನ ಅರಿವಿಲ್ಲದವಳಾಗಿದ್ದಳು. ಚಂದ್ರಶೇಖರನ ಹೃದಯವು ಪ್ರಫುಲ್ಲವಾಗಿ ಧೈರ್ಯವು ಕುಗ್ಗಿ ಹೋಯಿತು.

'ಶಾಂತೀ—ನೀನಿತ್ತ ಸಲಿಗೆಯಿಂದ— ನಿನ್ನೊಡನೆ-ಮನಬಿಚ್ಚಿ ...ಮಾತನಾಡುತ್ತೇನೆ. ನೀನು....ನನ್ನ ಜೀವನದ ಸಂಗಾತಿಯಾಗಿರಲು ಒಪ್ಪಿದರೆ...ಎ....ಏ...".

"ಸರಿ ಶೇಖರ್, ಹಾಗೆ ಮನಬಿಚ್ಚಿ ಮಾತನಾಡು. ನಿನ್ನೊಡನೆ ನಾನು ಅನೇಕ ಸಲ ಶ್ರೀಮತಿ ಅಲೀಸನ್ನರ ಕುರಿತು ಹೇಳಿದ್ದೆ. 'ಸೇವೆಗಾಗಿ ಜೀವ' ಇದು ಆಕೆಯ ಮುಖದಿಂದ ಭರತಮಾತೆ ನನಗಿತ್ತ ಸಂದೇಶ. ಪ್ರಪಂಚದ ಎಷ್ಟೋ ಇತಿಹಾಸಗಳನ್ನು, ಎಷ್ಟೋ ಮಹಾತ್ಮರ ಜೀವನ ಚರಿತ್ರೆಗಳನ್ನು ಎಷ್ಟೋ ಕ್ರಾಂತಿಯ ಚರಿತ್ರೆಗಳನ್ನು ನಾನು ಓದಿದೆ. 'ಸೇವೆಗಾಗಿ ಜೀವ' ಈ ಮಾತಿನಲ್ಲಿ ಅಡಕವಾದ ತತ್ವಕ್ಕಿಂತ. ಮಿಗಿಲಾದ ತತ್ವವನ್ನು ಯಾವ ಧರ್ಮದಲ್ಲಿಯೂ, ಯಾವ ರಾಜಕೀಯದಲ್ಲಿಯೂ ನಾನು ಕಾಣಲಿಲ್ಲ. ನೀನು ಒಳ್ಳೆಯ ರಾಜಕಾರಣ ವಿಶಾರದನಿರುವಿ. ನಿನ್ನೀ ಬುದ್ಧಿವಂತಿಕೆಯನ್ನು—ಮುಂದೆ ಭಾರತ ಭೂಮಿಗೆ ತೆರಳಿ ಅಲ್ಲಿ ಉಚ್ಚಾಧಿಕಾರವನ್ನು ಪಡೆದು ಬಡವರನ್ನು ಸುಲಿಯುವ ಸಲುವಾಗಿ ಉಪಯೋಗಿಸಬೇಡ. ತಪ್ಪೇನು? ತಾಯ್ನಾಡಿನ ಸೇವೆಗಾಗಿ ನಾವಿಬ್ಬರೂ ಸಂಗಾತಿಗಳಾಗಿರುವ. ಆದರೆ ಶೇಖರ್, ನಾನು ನಿನ್ನ ಬೆನ್ನು ಹಿಡಿದ ಸೋದರಿಯೆಂದು ಮಾತ್ರ ನೀನು ವಿಚಾರಿಸಿಕೋ"

ಆಕಾಶದಲ್ಲಿ ಚಂದ್ರನನ್ನು ಕವಿದು ಬಂದಿದ್ದ ಮೋಡವು ಮರೆಯಾಯಿತು. ಪುನಃ ಪೂರ್ಣಚಂದ್ರನು ತುಂಬಿದ ಕಳೆಯಿಂದ ನಗುತಿದ್ದನು.

ಶಾಂತಿಯೂ ಚಂದ್ರಶೇಖರನೂ ಒಮ್ಮೆ ಆಳವಾಗಿ ನಿಟ್ಟುಸಿರು ಬಿಟ್ಟರು!

ಎರಡು ಚಿತ್ರಗಳು

ರಂಗಣ್ಣ ಹುಟ್ಟು ಚಿತ್ರಕಾರ. ಮನುಷ್ಯಾಕೃತಿಗಳನ್ನು ಚಿತ್ರಿಸುವುದರಲ್ಲಿ ಅವನದು ನುರಿತ ಕೈ. ತನ್ನ ಇಡೀ ಜೀವಮಾನದಲ್ಲಿ ಆತನು ಯಶಸ್ವಿಯಾಗಿ ಎರಡು ಚಿತ್ರಗಳನ್ನು ಬರೆದ. ಮೊದಲನೆಯದು ಒಂದು ಮುಗ್ಧ ಬಾಲಿಕೆಯ ಚಿತ್ರ; ಎರಡನೆಯದು ಕೇವಲ ಮುದುಕಿ ಹಣ್ಣು ಮಾರುವಾಕೆಯೊಬ್ಬಳದು. ಆ ಮುಗ್ಧ ಬಾಲಿಕೆಯ ಚಿತ್ರವನ್ನು ರಂಗಣ್ಣ ತನ್ನ ಏರುಯುವ್ವನದ ಕಾಲದಲ್ಲಿ ಬರೆದ; ಆದರಿಂದ ಆತನಿಗೆ ಕೈ ತುಂಬಾ ಹಣವೂ ದೊರಕಿತು ಹಣ್ಣು ಮಾರುವ ಮುದುಕಿಯನ್ನು ಆತನು ತನ್ನ ಇಳಿವಯಸ್ಸಿನಲ್ಲಿ ಚಿತ್ರಿಸಿದ್ದು; ಕೊನೆಯ ಕಾಲದ ಕೈ ಚಳಕ. ಅದೇ ಆತನ ಮರಣಕ್ಕೂ ಕಾರಣವಾಯಿತು.

ರಂಗಣ್ಣನಿಗೆ ಅರುವತ್ತು ವರ್ಷ ಪ್ರಾಯ; ಜೀವನದ ಹುಮ್ಮಸು ಇಳಿಯುತ್ತಾ ಬಂದಿದೆ. ರಸಿಕ ಚಿತ್ರಕಾರನ ಜೀವನವು ನಿರಾಶಾಮಯವಾಗಿದೆ. ಆದರೆ ಕೊನೆಗೊಮ್ಮೆ ಆ ಮುದುಕಿ, ಹಣ್ಣು ಮಾರುವಾಕೆ, ಆತನ ಹಿಂದಿನ ಕಲಾಶಕ್ತಿಯನ್ನು ಸುಪ್ತಚೇತನವನ್ನು ಪುನರುಜ್ಜೀವನಗೊಳಿಸಿದಳು. ಆತ ಮೊದಲು ಆ ಮುದುಕಿಯನ್ನು ಕಂಡಾಗ, ನಾವಿಬ್ಬರೂ 'ಮಾರ್ಕೆಟ್ ರೋಡಿ'ನ ಜನಸಂದಣಿಯಲ್ಲಿ ಬೆರೆತು ಸಂಜೆ ಹೊತ್ತಿನ ಸಂಚಾರಕ್ಕೆ ಹೊರಟಿದ್ದೆವು. ಹಲವಾರು ಪ್ರಶ್ನೆಗಳನ್ನು ಕೇಳಿದರೆ ರಂಗಣ್ಣ ಒಮ್ಮೆ ಬಾಯಿ ಬಿಡುತ್ತಿದ್ದ. ಆತನ ಜೀವನದ ಸಮೀಪ ಪರಿಚಯವುಳ್ಳ ನನಗೆ ಇದೇನೋ ಆಶ್ಚರ್ಯದ ಸಂಗತಿಯಾಗಲಿಲ್ಲ.

'ನೋಡು!' ಬೆನ್ನು ಹಿಡಿದು ನನ್ನನ್ನು ಹಿಂದಕ್ಕೆ ಜಗ್ಗಿ ರಂಗಣ್ಣ ಹೇಳಿದ; 'ಆ ಹೆಂಗುಸಿನ ಮುಖವನ್ನೊಮ್ಮೆ ನೋಡು!' ಆತನು ಗುರುತಿಸಿದ ಕಡೆಗೆ ನಾನು ದೃಷ್ಟಿ ಹರಿಸಿದೆ. ಮುದುಕಿ ಹಣ್ಣು ಮಾರುವಾಕೆಯೊಬ್ಬಳು, ಕಾಲ ಬುಡದಲ್ಲಿ ಬುಟ್ಟಿಯನ್ನಿಟ್ಟುಕೊಂಡು, ಗಿರಾಕಿಗಳ ಕಡೆಗೆ ಹಣ್ಣುಗಳನ್ನೆತ್ತಿ ಹಿಡಿದು ಕೈ ಚಾಚಿ ನಿಂತಿದ್ದಳು. ಹಣ್ಣು

ಗಳನ್ನು ಕೊಂಡುಕೊಳ್ಳಿರೆಂದು ಅವಳು ಕೂಗುತ್ತಿರಲಿಲ್ಲ. ಆಕೆಯ ಮರುಕ ದಯಾರ್ದ್ರ ದೃಷ್ಟಿಗಳೇ ಗಿರಾಕಿಗಳೊಡನೆ ಬಿನ್ನಹ ಮಾಡು ವಂತಿದ್ದವು ಬಹಳ ಸಮಯದಿಂದಲೂ ಆಕೆ ಅದೇ ಕೆಲಸಮಾಡು ತ್ತಿದ್ದು, ಬೇಸತ್ತು, ಜೀವನದಲ್ಲಿ ನಿರಾಶಳಾಗಿರಬೇಕೆಂದು ಅವಳ ಮುಖ ಭಾವವೇ ಸೂಚಿಸುವಂತಿತ್ತು.

"ಏನು ರಂಗಣ್ಣ?" ನನ್ನ ಮಾತು ಆತನ ಕಿವಿಗೆ ಬಿದ್ದಂತೆ ತೋರ ಲಿಲ್ಲ. ತನ್ನ ಧ್ಯಾನದಲ್ಲಿಯೇ ಆತ ಮಗ್ನನಾಗಿದ್ದ. ಸ್ವಲ್ಪ ಹೊತ್ತಿನ ಬಳಿಕ—'ಆ ಹೆಂಗುಸಿನ ಆಕೃತಿ ಎಷ್ಟು ಪರಿಪೂರ್ಣವಾಗಿದೆ. ಆ ಮೇಲೆ ....ಇದು ವರೆಗೆ ಇಷ್ಟು ಪೂರ್ಣ ಸೌಂದರ್ಯದ ಆಕೃತಿಯನ್ನು ನಾನು ಕಂಡಿಲ್ಲ. ಚಿತ್ರ ಬರೆಯಲು ಆಕೆ ಸಮ್ಮತಿಯಿತ್ತರೆ....ಜಗತ್ತಿಗೆ ಇನ್ನೊಮ್ಮೆ ನನ್ನ ಕಲಾಶಕ್ತಿಯನ್ನು ತೋರಿಸಲು ಸಂದರ್ಭ ಒದಗುತಿತ್ತು" ಹೀಗೆಂದು ನಿಟ್ಟುಸಿರೆಳೆದು ಹೇಳಿದ.

ತಿರುಗಿ ಒಮ್ಮೆ ನಾನು ಆ ಹೆಂಗುಸಿನ ಕಡೆಗೆ ನೋಡಿದೆ. ನಿಜವಾ ಗಿಯೂ ಕಲಾವಿದನನ್ನು ಉದ್ರೇಕಗೊಳಿಸುವ ಭವ್ಯ ಮನೋಹರ ಆಕೃ ತಿಯೇ ಆಗಿತ್ತು ಆಕೆಯದು. ಅವಳೊಡನೆ ಮಾತುಕತೆಯೂ ನಡೆ ಯಿತು. ಏನು ಮಾಡಿದರೂ, ತನ್ನ ಚಿತ್ರ ಬರೆಯಲು ಆಕೆ ಸಮ್ಮತಿ ಕೊಡುವಂತೆ ಕಂಡುಬರಲಿಲ್ಲ. ರಂಗಣ್ಣನನ್ನು ಆಕೆ ಏನೋ ಒಂದು ಶಂಕೆ—ಭಯಗಳಿಂದ ಎವೆಯಿಕ್ಕದೆ ನೋಡುತ್ತಿದ್ದಳು. ರಂಗಣ್ಣನು ಆಗ್ರಹ ಮಾಡಿದಂತೆ ಆಕೆ ಮತ್ತಷ್ಟು ಕಳವಳಗೊಂಡಳು. ಇಷ್ಟರಲ್ಲಿ ನಾನೇ ಮಧ್ಯಸ್ಥನಾಗಿ ರಂಗಣ್ಣನ ಪರವಾಗಿ ವಾದಿಸಿದೆ.

"ಇಲ್ಲಿ ಕೇಳು, ಇದರಿಂದ ನೀನು ಏನೂ ನಷ್ಟ ಹೊಂದಬೇಕಾಗಿಲ್ಲ. ನಿನಗೂ ತುಂಬಾ ಇನಾಮು ಸಿಗುತ್ತದೆ...."

"ದುಡ್ಡಿಗಾಗಿ ನಾನು ಆಶೆ ಪಡುವುದೇ ಇಲ್ಲ" ಆಕೆ ನಿರ್ಧಾರ ಪೂರ್ವಕ ಹೇಳಿಬಿಟ್ಟಳು.

"ಇರಲಿ; ಇದರಿಂದ ನೀನು ನನ್ನ ಗೆಳೆಯನಿಗೆ ಬಹಳ ದೊಡ್ಡ ಒಂದು ಉಪಕಾರ ಮಾಡಿದ ಹಾಗಾಗುತ್ತದೆ. ಇತ್ತೀಚೆಗೆ ಆತನು ತನ್ನ

ಹಿಂದಿನ ಕೀರ್ತಿಯನ್ನು ಕಳೆದು ಕೊಂಡಿದ್ದಾನೆ. ನಿನ್ನನ್ನು ಚಲುವಾಗಿ ಆತ ಚಿತ್ರಿಸಬಲ್ಲನಾದರೆ, ಅದರಿಂದ ಆತನಿಗೆ ಕಳೆದುಹೋದ ಪ್ರಸಿದ್ಧಿ ಪುನಃ ಬರಬಹುದು. ನೀನು ಆತನ ಮೇಲೆ ದಯೆಯಿಟ್ಟು ಈ ಉಪಕಾರ ಮಾಡಬೇಕು. ಇದರಿಂದ ನಿನಗೂ ಹಣ ಸಿಗುವುದಾದರೆ......"

ಕ್ಷಣಕಾಲ ಆಕೆ ಮಾತನಾಡಲೇ ಇಲ್ಲ ಕೊನೆಗೆ ಸಮ್ಮತಿಯಿತ್ತಳು. ರಂಗಣ್ಣನ ಮನೆಯ ಪರಿಚಯವನ್ನು ಅವಳಿಗೆ ತಿಳಿಸಿ ನಾನು ಗೆಳೆಯನನ್ನು ಅಲ್ಲಿಂದ ಹೊರಡಿಸಿದೆ.

"ಆಕೆ ಬರುವುದಿಲ್ಲ" ರಂಗಣ್ಣ ದಾರಿಯಲ್ಲಿ ಬರುತ್ತಾ ಹೇಳಿದ.

"ಖಂಡಿತವಾಗಿಯೂ ಆಕೆ ಬರದೆ ಇರಲಾರಳು" ನಾನು ಗೆಳೆಯನನ್ನು ಸಮಾಧಾನ ಪಡಿಸಿದೆ.

ನನ್ನ ಮನಸ್ಸಿನಲ್ಲಿಯೂ ಹಲವಾರು ವಿಚಾರಗಳು ಹೊಳೆದವು. ಹುಟ್ಟಿನಿಂದಲೇ ಅವಳಿಗೆ ಈ ವೃತ್ತಿ ಬಂದಿರಲಿಕ್ಕಿಲ್ಲವೆಂದೂ, ಜೀವನದ ಯಾತನೆಯಲ್ಲಿ ಆಕೆ ಕೊರಗುತ್ತಿರುವಳೆಂದೂ, ಯಾರೋ ಉತ್ತಮ ಕುಲೀನಳಿರಬೇಕೆಂದೂ, ಹಾಗಿದ್ದರೆ ಆಕೆ ತನ್ನ ಚಿತ್ರ ಬರೆಸಲು ಸಮ್ಮತಿಸಲಾರಳೆಂದೂ ನನ್ನ ಹೃದಯದಲ್ಲಿಯೂ ಕಲ್ಪನೆಗಳು ಮೂಡಿ ಮುಳುಗುತ್ತಿದ್ದವು.

ಹೇಳಿದ ಹೊತ್ತಿಗೆ ಸರಿಯಾಗಿ ಮರುದಿನ ಆಕೆ ರಂಗಣ್ಣನ ಮನೆಗೆ ಬಂದಳು. ಆತನ ಗೊಂದಲವೂ ಕಡಿಮೆಯಾಯಿತು. ಚಿತ್ರಕಾರ ತನ್ನ ಕೆಲಸವನ್ನು ಅವಿಶ್ರಾಂತನಾಗಿ ಮಾಡತೊಡಗಿದ. ಅದೇ ಗಾಂಭೀರ್ಯ, ಅದೇ ಅಧೈರ್ಯ, ಅದೇ ಚಿಂತೆ, ಈ ಮುಖಮುದ್ರೆಯುಳ್ಳ ಆಕೆ ಪ್ರತಿ ದಿನವೂ ರಂಗಣ್ಣನ ಮನೆಗೆ ಬಂದು ಹೋಗುತಿದ್ದಳು. ಇತ್ತೀಚೆಗೆ ಇನ್ನಷ್ಟು ಉದ್ವಿಗ್ನಳಾಗಿ ಸಂಕಟಗೊಂಡವಳಂತೆ ತೋರುತ್ತಿದ್ದಳು.

ಒಂದು ದಿನ ರಂಗಣ್ಣ ಚಿತ್ರ ಬರೆಯುತ್ತಿದ್ದಂತೆ ನಾನೂ ಅಲ್ಲಿಗೆ ಹೋದೆ. ನನ್ನನ್ನು ಆತ ಒಳಗೆ ಕರೆದ. ಆಕೆಯ ಮುಖದಲ್ಲಿ ಕಂಬನಿ ಸುರಿಯುತಿತ್ತು. "ಇನ್ನು ಬಹುಕಾಲ ಹೀಗೆ ಇರಲು ಆಗುವುದಿಲ್ಲ. ಬಹಳ ಸಂಕಟವಾಗುತ್ತದೆ" ಎಂದಳು.

"ನಿನ್ನೀ ಪ್ರಾಯದಲ್ಲಿ ಹೀಗೆ ಚಿತ್ರ ಬರೆಯಲು ಬಹುಕಾಲ ನಿಂತು ಕೊಳ್ಳುವುದು ನಿಜವಾಗಿಯೂ ಬಹಳ ಕಷ್ಟ" ಹೀಗೆಂದು ನಾನು ಆಕೆಯನ್ನು ಸಮಾಧಾನ ಪಡಿಸಿದೆ. ಆಕೆ ತಲೆ ಅಲ್ಲಾಡಿಸಿದಳು.

"ನಮ್ಮ ರಂಗಣ್ಣ ಇಂದು ಹಿಂದಿನ ಚಿತ್ರಕಾರನೇ ಆಗಿದ್ದಾನೆ. ಈಗೊಮ್ಮೆ ಆತನಲ್ಲಿ ತನ್ನ ಯೌವನ ಕಾಲದ ಕಲಾಸಾಮರ್ಥ್ಯವೇ ಆವೇಶಗೊಂಡು ಬಂದಂತಿದೆ. ಆತನ ಕೀರ್ತಿಗೆ ಕಾರಣವಾದ ಚಿತ್ರ ಅದು--ಆ ಮುಗ್ಧ ಬಾಲಿಕೆಯದು" ಹೀಗೆಂದು ಗೋಡೆಯಲ್ಲಿ ತೂಗಾಡಿಸಿದ್ದ ಚಿತ್ರದ ಕಡೆಗೆ ನಾನು ಆಕೆಯ ದೃಷ್ಟಿಯೆಳೆದೆ. "ಇಂದಿಗೆ ಸುಮಾರು ಮೂವತ್ತು ವರ್ಷಗಳಾದರೂ, ಇಂದಿಗೂ ರಂಗಣ್ಣ ಆಕೆಯನ್ನು ಮರೆತಿಲ್ಲ" ಎಂದೆ.

"ಹಾಗೆಂದರೆ?'' ಆಶ್ಚರ್ಯ ಕುತೂಹಲಗಳಿಂದ ಆಕೆ ಪ್ರಶ್ನಿಸಿದಳು

''ನನ್ನ ಗೆಳೆಯ ಬಹಳ ಭಾಗ್ಯಹೀನ. ಅದೆಲ್ಲಾ ಆ ಹುಡುಗಿಯಿಂದಾಯಿತು. ನಿಜವಾಗಿಯೂ ಆಕೆ ಸುಂದರಿಯಾಗಿಲ್ಲವೆ?''

"ಎಳೆಯ ಹುಡುಗಿ; ಆ ಪ್ರಾಯದಲ್ಲಿ ಯಾರೂ ಮುದ್ದಾಗಿ ಚಂದವಾಗಿರುತ್ತಾರೆ. ಆದರೆ ಆ ಬೆಡಗು ಬಹುಕಾಲ ನಿಲ್ಲುವುದಿಲ್ಲ" ಆಕೆ ಸ್ಪಷ್ಟವಾಗಿ ನುಡಿದಳು.

'ಆ ಚಿತ್ರ'' ನಾನು ಮಾತನ್ನು ಮುಂದುವರಿಸಿದೆ, 'ರಂಗಣ್ಣನ ಜಯಶಾಲಿಯಾದ ಮೊದಲನೆಯ ಕಲಾಕೃತಿ; ಹತ್ತುಸಾವಿರ ರೂಪಾಯಿಗಳಿಗೆ ಆ ಚಿತ್ರವನ್ನು ಮಾರಾಟಮಾಡಿದ. ಅದನ್ನು ಹಿಂದೆ ಪಡೆಯಬೇಕಾದರೆ ಆತ ಅದಕ್ಕಿಂತ ಇಮ್ಮಡಿ ತೆರಬೇಕಾಯಿತು".

ಹೆಂಗುಸು ಚಿತ್ರದ ಕಡೆಗೆ ಮತ್ತೊಮ್ಮೆ ನಿಶ್ಚಲಳಾಗಿ ದಿಟ್ಟಿಸಿನೋಡಿದಳು. ಇಪ್ಪತ್ತು ವರ್ಷ ಪ್ರಾಯದ, ತುಂಬಿದ ಮೈಯ್ಯ ಸುಂದರ ಯುವತಿ. ರಂಗಣ್ಣನೂ ತನ್ನ ಉದಯೋನ್ಮುಖ ಕಲಾಶಕ್ತಿಯನ್ನು ಆ ಚಿತ್ರದಲ್ಲಿ ತುಂಬಿತುಳುಕುವಂತೆ ಮಾಡಿದ್ದ.

''ಇದನ್ನು ತಿರುಗಿ ಯಾಕೆ ಪಡಕೊಳ್ಳಬೇಕಾಯಿತು?'' ಆಕೆ ಸಾಶಂಕಳಾಗಿ ಕೇಳಿದಳು.

'ಅದೆಲ್ಲಾ ದೊಡ್ಡ ಕತೆ. ಅವರಿಬ್ಬರೂ ಅನ್ಯೋನ್ಯ ಪ್ರಣಯಿಗಳಾಗಿದ್ದರು. ಆಕೆ ಕುಲೀನ ಮನೆತನದವಳು; ಐಶ್ವರ್ಯವಂತರ ಮಗಳು. ಆದರೆ ರಂಗಣ್ಣನಲ್ಲಿ ಆಕೆಯ ಮನಸ್ಸು ನಟ್ಟಿತು. ಆತನಿಗೆ ಆವಶ್ಯಬಿದ್ದರೆ ಆಗಾಗ ಹಣವನ್ನೂ ಕೊಡುತ್ತಿದ್ದಳು. ರಂಗಣ್ಣನಿಗೆ ಸ್ವಸ್ಥವಿಲ್ಲವಾಗ, ಆರೋಗ್ಯವಾಗುವಂತೆ ಉಪಚರಿಸುವಳು. ಎಷ್ಟೇ ಪ್ರಯಾಸವಾದರೂ ತನ್ನ ಚಿತ್ರ ಬರೆಯಲು ಚಿನ್ನಂತೆ ಬಹುಕಾಲ ನಿಂತುಕೊಳ್ಳುವಳು. ಕೊನೆಗೊಮ್ಮೆ, ಅವಳ ಮನೆಯವರು ಅವರಿಬ್ಬರ ಪ್ರೇಮ ಸಂಬಂಧಕ್ಕಾಗಿ ಆಕೆಯನ್ನು ಮನೆಯಿಂದ ಹೊರಹಾಕಿಬಿಟ್ಟರು".

'ಮುಂದೇನಾಯಿತು?' ಆಕೆ ನಿಟ್ಟುಸಿರೆಳೆದು ಕೇಳಿದಳು.

'ಆಕೆಯ ಚಿತ್ರವನ್ನು ರಂಗಣ್ಣ ಬರೆದ; ಜಯಶಾಲಿಯಾಗಿ ಬರೆದ. ತನ್ನ ಸಾಮರ್ಥ್ಯವನ್ನೆಲ್ಲಾ ತುಂಬಿಸಿ ಆಕೆಯನ್ನು ಚಿತ್ರಿಸಿದ. ರಂಗಣ್ಣನ ಹೆಸರು ಬಹಳ ಪ್ರಸಿದ್ಧವಾಯಿತು. ಆ ಚಿತ್ರವನ್ನು ಹತ್ತುಸಾವಿರ ರೂಪಾಯಿ ಬೆಲೆಗೆ ಮಾರಾಟಮಾಡಿ ಬಹು ಭಾಗ್ಯಶಾಲಿಯೂ ಆದ'.

'ಆ ಮೇಲೆ?' ಹರ್ಷಿತಳಾಗಿ ಕೇಳಿದಳು.

'ರಂಗಣ್ಣ ತುಂಬಾ ಹಣವನ್ನು ಸಂಪಾದಿಸಿದ. ಐಶ್ವರ್ಯದೊಡನೆ ಆತನ ಹೃದಯವನ್ನು ಅಹಂಕಾರ ದುರಭಿಮಾನಗಳೂ ಪ್ರವೇಶಿಸಿದವು. ತನ್ನ ಜೀವನದ ಜತೆಗಾರ್ತಿಯಾಗಿರಲು ಆಕೆ ಯೋಗ್ಯಳಲ್ಲವೆಂದು ತಿರಸ್ಕರಿಸಿದ. ಯಾವಾಕೆ ಈತನನ್ನು ಪ್ರೇಮಿಸಿ ತನ್ನ ಬಂಧುಬಳಗ ಸಿರಿಸಂಪತ್ತುಗಳನ್ನೆಲ್ಲಾ ಬಿಟ್ಟು ಇವನ ಬಳಿ ಬಂದಿದ್ದಳೋ, ಯಾವಳ ಚಿತ್ರದಿಂದ ಈತ ಅಪಾರ ಐಶ್ವರ್ಯವನ್ನು ಗಳಿಸಿಕೊಂಡನೋ, ಆ ಪ್ರಣಯ ಮುಗ್ಧ ನಿರ್ಮಲ ಬಾಲಿಕೆಯನ್ನು, ರಂಗಣ್ಣ ತಾನು ಮದುವೆಯಾಗುವುದಿಲ್ಲವೆಂದು ಖಂಡಿತ ಹೇಳಿ ಅಪಮಾನ ಮಾಡಿಬಿಟ್ಟ. ಅವಳು ಇಲ್ಲಿಂದ ಹೊರಟುಹೋದಳು. ಆ ಮೇಲೆ ರಂಗಣ್ಣ ಅವಳನ್ನು ಕಂಡಿಲ್ಲ ಹಾಗಾಗಿಯೆ ಈಗೀಗ ಜೀವನದಲ್ಲಿ ರಸವಿಲ್ಲದವನಂತೆ ಯಾವಾಗಲೂ ನಿಷ್ಠುರನಾಗಿ ಕಾಣುತ್ತಾನೆ. ಆಕೆ ಬಿಟ್ಟುಹೋದ ಮೇಲೆ ಆತನ ಕೀರ್ತಿಯೂ ಕಲಾಶಕ್ತಿಯೂ ದಿನದಿಂದ ದಿನಕ್ಕೆ ಕುಂದುತ್ತಾ ಬಂದಿತು. ಆ ಮೇಲೆ ಒಂದೇ ಒಂದು ಚಿತ್ರವನ್ನಾದರೂ ರಂಗಣ್ಣ ಬಿಡಿಸಲಿಲ್ಲ'.

'ನಿಜವಾಗಿಯೂ ಇದೊಂದು ಕರಣಾಮಯವಾದ ಕಥೆ' ಹಣ್ಣು ಹಣ್ಣಾರುವ ಮುದುಕಿ ತಲೆ ತಗ್ಗಿಸಿ ಹೇಳಿದಳು. 'ಜೀವನವು ಹೀಗೆ ನಿರರ್ಥಕವಾಗಿ ಹಲವು ದುರಭಿಪ್ರಾಯಗಳಿಂದ ತುಂಬಿಹೋಗಿ ಕೆಲವೊಮ್ಮೆ ನಿಷ್ಫಲವಾಗುತ್ತದೆ'.

ಮುಂದೆ ಒಂದೆರಡು ದಿನಗಳಲ್ಲಿ ರಂಗಣ್ಣ ಚಿತ್ರವನ್ನು ಪೂರ್ತಿಗೊಳಿಸಿದ. ಕಳೆದು ಹೋದ ತನ್ನ ಹಿಂದಿನ ಪ್ರಸಿದ್ಧಿಯನ್ನು ಈ ಚಿತ್ರದಿಂದ ತಿರುಗಿ ಪಡೆಯಬೇಕೆಂದು ಆತ ಬಹಳವಾಗಿ ಯತ್ನಿಸಿದ. ಚಿತ್ರವನ್ನು ಸಂಪೂರ್ಣ ಮಾಡಿದ ಮೇಲೆ ನನ್ನನ್ನು ಕರೆದು ಚಿತ್ರವನ್ನು ತೋರಿಸಿದ. ನಾನು ಆಶ್ಚರ್ಯಪುಳಕಿತನಾದೆ.

'ನಿನ್ನ ಅಭಿಪ್ರಾಯವೇನು?' ರಂಗಣ್ಣ ಕೇಳಿದ.

'ಅದ್ಭುತವಾಗಿದೆ. ಹಿಂದೆ ಎಂದೂ ನೀನು ನಿನ್ನ ಪೂರ್ಣ ಕಲಾ ಶಕ್ತಿಯನ್ನು ಚಿತ್ರದಲ್ಲಿ ತೋರಿಸಿಲ್ಲ'.

ರಂಗಣ್ಣನು ಮತ್ತೆ ಮಾತನಾಡಲಿಲ್ಲ. ಆದರೆ ಆತನ ಹೃದಯವು ಸಂತೋಷಗೊಂಡಿತ್ತೆಂದು ನಾನು ಆತನ ಮುಖಭಾವದಿಂದ ತಿಳಕೊಂಡೆ.

'ನೀನು ಆಕೆಯ ದುಃಖ. ಆಸೆ, ಭರವಸೆಗಳ ಭಾವಗಳನ್ನು ಅದ್ಭುತವಾಗಿ ಚಿತ್ರಿಸಿರುವಿ. ಅವಳ ಹೃದಯವನ್ನು ಹೊಕ್ಕು ಪರೀಕ್ಷಿಸಿದವನಂತೆ ಅವಳ ಸಹಜ ಮುಖಭಾವಗಳಿಗೆ ನೀನು ಮತ್ತಷ್ಟು ಗಂಭೀರ ಭಾವನೆಗಳನ್ನು ತುಂಬಿಸಿದ್ದಿ'.

ಚಿತ್ರದಿಂದ ನನ್ನ ದೃಷ್ಟಿಯನ್ನು ಆ ಹೆಂಗುಸಿನ ಕಡೆಗೆ ಹೊರಳಿಸಿದೆ. ಆಕೆ ಬಹಳವಾಗಿ ದಣಿದಿದ್ದು ಕುಳಿತಿದ್ದ ಕುರ್ಚಿಯಲ್ಲಿ ಇಳಿದೇ ಹೋಗಿದ್ದಳು.

ರಂಗಣ್ಣ ಮಾತನಾಡಲೇ ಇಲ್ಲ. ಈ ಎಲ್ಲಾ ಮಾತುಗಳ ಕಡೆಗೆ ಆತನ ಗಮನವಿತ್ತೋ ಇಲ್ಲವೊ? ವಿಚಾರಮಗ್ನನಾಗಿದ್ದ.

'ನಿನ್ನ ಜೀವಮಾನದಲ್ಲಿ ಎರಡು ಉತ್ತಮ ಚಿತ್ರಗಳನ್ನು–ಅಸಾಧಾರಣ ಕಲಾಕೃತಿಗಳನ್ನು–ಇಬ್ಬರು ಸ್ತ್ರೀಯರ ಸಹಾಯದಿಂದ ನೀನು

ಚಿತ್ರಿಸಿದ್ದು ನಿಜವಾಗಿಯೂ ಕುತೂಹಲಜನಕವಾದುದು' ಎಂದು ನಾನೇ ರಂಗಣ್ಣನ ಧ್ಯಾನವನ್ನು ಮುರಿದೆ

ರಂಗಣ್ಣನ ಕಣ್ಣು ಒಂದು ಚಿತ್ರದಿಂದ ಇನ್ನೊಂದು ಚಿತ್ರದ ಕಡೆಗೆ ಅತ್ತಿತ್ತ ಚಲಿಸುತಿತ್ತು. ಒಂದು ಚಿತ್ರ ತನ್ನ ಜೀವನದ ಉಲ್ಲಾಸವನ್ನು ತೋರಿಸಿ ರೋಮಾಂಚನ ಹುಟ್ಟಿಸುತ್ತದೆ. ಇನ್ನೊಂದು ಹೃದಯದ ನಿಷ್ಠುರತೆಯನ್ನು ಕೆದಕಿ ಗಾಢದುಃಖದ ಬೇನೆಯನ್ನು ಉದ್ರೇಕಿಸುತ್ತಿದೆ.

ಏನೋ ಮಿಂಚಿನಂತೆ ನನ್ನ ಕಣ್ಮುಂದೆ ಒಂದು ನೆನಹು ಹಾದು ಹೋಯಿತು. ಸರಿ, ಈಗ ತಿಳಿದುಹೋಯಿತು. ಆ ಮುಗ್ಧ ಬಾಲಿಕೆ-ಈ ಹಣ್ಣು ಮುದುಕಿ-ಇಬ್ಬರೂ ಒಂದೇ! ಮುಖದ ಭಾವ ಮಾತ್ರ ಬೇರೆ; ಮಂದಸ್ಮಿತವು ಇಂದು ಮಾಯವಾಗಿದೆ. ಆದರೆ ಅದೇ ರೂಪ; ಅದೇ ನೋಟ; ಆಕೆಯೇ ಇವಳು!

ಈ ಆನಂದದಿಂದ ಪರವಶನಾಗಿ, ಗೆಳೆಯನನ್ನು ಕರೆದು ಏನೋ ಹೇಳಬೇಕೆಂದು ಭಾವಿಸುವಷ್ಟರಲ್ಲಿಯೇ ಆ ಹೆಂಗುಸು ನನ್ನ ಬಳಿಬಂದು ನಿಂತಿದ್ದಳು. ಆಕೆಯ ಚಕಿತ ಮುಖಭಾವ ನನ್ನನ್ನು ಎಚ್ಚರಿಸುವಂತಿತ್ತು. ಅವಳ ಕಣ್ಣುಗಳೇ ನನ್ನೊಡನೆ ಸುಮ್ಮಗಿರಲು ಬೇಡುವಂತಿದ್ದವು.

'ಅವರಿಗೆ ಇನ್ನೂ ನನ್ನ ಪರಿಚಯ ಆಗಿಲ್ಲ; ನೀವು..........' ಆಕೆ ಮಾತು ಮುಗಿಸುವ ಮುನ್ನ ರಂಗಣ್ಣ ಬಂದು ಅವಳ ಕಾಲಬುಡದಲ್ಲಿ ಬಿದ್ದುಬಿಟ್ಟಿದ್ದ! ಒಂದು ಮಾತು ಹೇಳಲೂ ಅವನಿಗೆ ಶಕ್ತಿಯಿರಲಿಲ್ಲ; ಆ ಹಣ್ಣು ಮಾರುವ ಹೆಂಗುಸು ಕಂಬನಿ ಸುರಿಸುತ್ತಾ ಕೆಲಕ್ಕೆ ಕುಸಿದು ಆತನ ತಲೆಯ ಮೇಲೆ ಕೈಯ್ಯಾಡಿಸಿದಳು. ರಂಗಣ್ಣ ವಿಕಾರವಾಗಿ ಕಣ್ಣರಳಿಸಿ ನೋಡುತಿದ್ದ. 'ಪ್ರಿಯಾ, ಪ್ರಿಯಾ' ಆಕೆ ಕೂಗಿದಳು. ಉತ್ತರವಿಲ್ಲ. ರಂಗಣ್ಣನ ಕೊನೆಯುಸಿರು ಹಾರಿಹೋಗಿತ್ತು.

ಆಕೆ ಆತನ ಶವದ ಮೇಲೆ ಬಿದ್ದುಬಿಟ್ಟಳು. ನಾನು ಮೇಲೆತ್ತಲು ಯತ್ನಿಸಿದೆ. ಎರಡು ದುಃಖಿತ ವಿರಹೀ ಆತ್ಮಗಳು ಕೊನೆಗೊಮ್ಮೆ ಹೀಗೆ ಮಿಲನಗೊಂಡಿದ್ದವು!

ಯಾರು ತಿಳಿಸಿದರು?

ಸೂರ್ಯ ರಕ್ತವರ್ಣವನ್ನು ಕಾರಿ ಪಶ್ಚಿಮದಿಗಂತದಲ್ಲಿ ಮುಖ ಮರೆ ಸಿಕೊಳ್ಳುತ್ತಿದ್ದ. ಅವರು ಕಲ್ಲನ್ನು ಪುಡಿಮಾಡುವ ಕೆಲಸವನ್ನು ಮುಗಿಸಿ, ಸಾಮಾನುಗಳನ್ನು ಹಾಗೆ ಅಲ್ಲಿಯೇ ಬಿಟ್ಟು, ಆಯಾಸಗೊಂಡ ತಮ್ಮ ಶರೀರಗಳನ್ನೆಳೆಯುತ್ತಾ ಇಬ್ಬರೋ ನಾಲ್ವರೊ ಜತೆ ಜತೆಯಾಗಿ ಹೊರ ಬಂದರು. ಅಲ್ಲಿಂದ ಎರಡು ಮೈಲು ದೂರದಲ್ಲಿರುವ 'ಕ್ರಿಮಿನಲ್ ಕೈದಿ ಗಳ ನಿವಾಸ'ಕ್ಕೆ ಅವರು ಹೋಗಬೇಕಾಗಿತ್ತು. ಅವರ ಮುಖ ಮಾತು ಎಲ್ಲಾ ಚಲನವಲನಗಳೂ ಇತರ ಸಾಮಾನ್ಯ ಮನುಷ್ಯರಂತೆಯೇ ಇದ್ದವು. ಕ್ರಿಮಿನಲ್ ಅಪರಾಧಿಗಳಂತೆ ಅವರನ್ನು ಕಂಡರೆ ತಿಳಿವಂತಿ ರಲಿಲ್ಲ. ಅವರ ಕ್ಷೀಣವಾದ ಶರೀರವನ್ನು ನೋಡಿದರೆ ಕೈಯಲ್ಲಿ ಕತ್ತಿ ಕೊಟ್ಟರೂ ಕಡಿವ ತ್ರಾಣ ಅವರಿಗೆ ಇರಲಾರದು ಎಂದು ಖಂಡಿತ ಹೇಳ ಬಹುದು. ಯಂತ್ರಗಳಂತೆ, ಮುಂಜಾನೆಯಿಂದ ಸಂಜೆಯ ವರೆಗೆ ಕಲ್ಲನ್ನು ಪುಡಿ ಮಾಡುವ ಆ ಕೆಲಸದಲ್ಲಿ ಅವರ ವೈಯ್ಯ ತ್ರಾಣವೆಲ್ಲಾ ಕರಗಿ ಹೋಗಿತ್ತು. ಅವರ ವಿಚಾರಶಕ್ತಿಯು, ದಿನದಿನದ ಚಿತ್ರಹಿಂಸೆಯಿಂದ, ಎಷ್ಟು ದುಡಿದರೂ ಅರೆಹೊಟ್ಟೆಯ ಸಂಪಾದನೆಯಿಂದ ಜಡವಾಗಿ ಹೋಗಿತ್ತು. ಮೂಕ ಪಶುಗಳಂತೆ ಅವರು ಅಲ್ಲಿಂದ ಹೋಗಬೇಕಾಗುತ್ತಿ ದ್ದರು. ಮುಖ ನಿಸ್ತೇಜವಾಗಿದೆ; ಸ್ವರ ಕ್ಷೀಣವಾಗಿದೆ. ನಿರ್ದಯ ನಾದ ಕಟುಕನ ಕೈಗೆ ಸಿಲುಕಿ ಸಂಕಟಪಡುತ್ತಿರುವ ಮೂಕ ಪಶುಗಳು ಅವರು!

ಸರಕಾರದ ಶಾಸನವು (ಇದೂ ಮನುಷ್ಯ ನಿರ್ಮಿತವಾದುದೇ) ಬಹು ಕಾಲದಿಂದಲೂ, ಕ್ರಿಮಿನಲ್ ಕೈದಿಗಳ ತಲೆಯಲ್ಲಿ ಹೀಗೆಯೇ ದುಡಿದು ಸಾಯಿರೆಂದು ಬರೆದಿತ್ತು. ಅಧಿಕಾರಿಗಳು ಅವರ ಸುತ್ತು ಕಣ್ಣಿ ಟ್ಟಿದ್ದರು. ಬೇಲಿಯೊಳಗೆ ಬಂಧಿಸಿ ಅವರನ್ನು ಕಾಯುತ್ತಿದ್ದರು. ಬೇರೆಲ್ಲಿಗಾದರೂ ಕೂಲಿ ಮಾಡಲಾದರೂ ಹೋಗಿ ಆತ್ಮ ಗೌರವದ ಜೀವನ ನಡೆಸಲು ಅವರಿಗೆ ಸಮ್ಮತಿಯಿಲ್ಲ. ಅಧಿಕಾರಿಗಳಿಂದ ನಿಶ್ಚಿತವಾದ ಅಪೇ

ಕೆಲಸ; ಅದೇ, ಬೆಳಗಿಂದ ಸಂಜೆಯ ವರೆಗೆ ಕಲ್ಲನ್ನು ಕರಗಿಸುವ ಕೆಲಸ! ಅದಕ್ಕಾಗಿ ಅಧಿಕಾರಿಗಳು ತೆರುವ ಅರೆ ಹೊಟ್ಟೆಗೂ ಸಾಕಾಗದ ಸಂಬಳ–ಇವುಗಳಿಂದ ದಿನಹರಣ ಮಾಡಬೇಕು. ಈ ಯಮ ನಿಯಮಕ್ಕೆ ಯಾರಾದರೂ ಎದುರಾಡಿದರೆ ಅವರನ್ನು ಹೆಂಡತಿ ಮಕ್ಕಳಿಂದಲೂ ಬೇರ್ಪಡಿಸಿ ಇನ್ನಷ್ಟು ಕಠಿಣ ದಂಡನೆ ವಿಧಿಸಲ್ಪಡುವುದು!

ಇಂಥಾ ನೂರಾರು ಮಂದಿ ಮನೆ ಕಡೆಗೆ ಹೊರಟಿದ್ದರು, ಮನೆಗೆ! ಹೌದು, ನರಕ ಕೂಪದಂತಿದ್ದ ಅವರ ಮನೆಗೆ! ಕಾಲೇಜು, ಬೇಂಕು, ಕೋರ್ಟು, ಆಫೀಸುಗಳಿಂದ ಹೊರಟುಬರುತ್ತಿದ್ದ 'ಶ್ರೀದೇವಿಯ ಪುತ್ರ'ರು ಯಾವ ಸಂಭ್ರಮದಿಂದ ತಮ್ಮ ಮನೆಗಳ ಕಡೆಗೆ ಹೊರಟು ಬರುತ್ತಿದ್ದರೋ, ಅದೇ ಸಂಭ್ರಮಗಳು ಇವರ ಮುಖದಲ್ಲಿಯೂ ಇದ್ದವು. ತಮಗೂ ಒಂದು ಮನೆಯಿದೆ; ತಮಗೂ ಹೆಂಡತಿ ಮಕ್ಕಳಿದ್ದಾರೆ; ಹಾಗಾಗಿ ಎಲ್ಲರೂ ತಮ್ಮ ಶಕ್ತಿ ಕುಂದಿದ ಶರೀರಗಳನ್ನೆಳೆಯುತ್ತಾ ಮನೆ ಕಡೆಗೆ ಹೊರಟಿದ್ದರು.

೨

ದಟ್ಟ ಜನಸಂದಣಿಯ ಹಿಂದೆ ಆ ಹೆಂಗುಸು ಹೋಗುತ್ತಿದ್ದಾಳೆ. ಯೌವನದ ಬೆಡಗು ವಿಲಾಸಗಳಿಲ್ಲದಿದ್ದರೂ ಆಕೆಗೆ ಕೇವಲ ಇಪ್ಪತ್ತೈದು ವರ್ಷ ಪ್ರಾಯ. ತನ್ನ ಗಂಡು ಮಗು ಕೆಲ ತಿಂಗಳ ಹಿಂದೆ ತೀರಿ ಹೋಗಿತ್ತು. ಈಗ ಐದು ವರ್ಷದ ಹೆಣ್ಣು ಕೂಸು—ಕಾಳೀ, ಮಾತ್ರ ಇದ್ದಾಳೆ. ಕೇವಲ ಹದಿನೈದು ದಿನಗಳ ಹಿಂದೆ, ನಿಯಮವನ್ನು ಉಲ್ಲಂಘಿಸಿದನೆಂಬ ಆಪಾದನೆಯಿಂದ—ಯಾವ ನಿಯಮವನ್ನು ಹೇಗೆ ಉಲ್ಲಂಘಿಸಿದನೆಂಬ ಯಾವ ವಿಚಾರಣೆಯೂ ಇಲ್ಲದೆ, ಆಕೆಯ ಗಂಡನನ್ನು ಅವಳಿಂದ ಬೇರ್ಪಡಿಸಿ ದೂರಕ್ಕಟ್ಟಿದ್ದರು ಇಂತಹ ಘಟನೆಗಳು ಆ ಬಡ ಜೀವಿಗಳಿಗೆ ದಿನ ನಿತ್ಯದ ಘಟನೆಗಳು. ತನ್ನ ಮಗುವನ್ನು ಕಳಕೊಂಡಾಗ ಆದಂತಹ ಹೊಟ್ಟೆಯ ಉರಿಯೇ ತನ್ನಿಂದ ಗಂಡ ಅಗಲಿ ಹೋಗಬೇಕಾಗಿ ಬಂದಾಗಲೂ ಆಕೆಗೆ ಆಯಿತು. ಆದರೆ ಎಲ್ಲವನ್ನೂ ನುಂಗಿಕೊಳ್ಳದೆ ಬೇರೆ ಗತಿಯಿರಲಿಲ್ಲ.

ಜೀವನದಲ್ಲಿ ಎಷ್ಟೋ ಹೊಡೆತಗಳನ್ನು ತಿಂದಿದ್ದರೂ ಆಕೆ ಒಮ್ಮೆಗೆ ಈಗ ಅವುಗಳನ್ನೆಲ್ಲಾ ಮರೆತಿದ್ದಾಳೆ. ಮನೆಯ ಕಡೆಗೆ ತೆರಳುವಾಗ, ತನ್ನ ಮಗು ಕಾಳಿಯು ಇತರ ಮಕ್ಕಳೊಡನೆ ಗುಡಿಸಲ ಮುಂದೆ ಧೂಳಿನಲ್ಲಿ ಆಟವಾಡುತ್ತಾ ಇದ್ದು ತನ್ನನ್ನು ಕಂಡಕೂಡಲೇ ಓಡಿಓಡಿ ಬಂದು ತನ್ನ ತೆಕ್ಕೆಯಲ್ಲಿ ಬಿದ್ದುಕೊಳ್ಳುವಳೆಂದು, ಇದರಿಂದಲೆ ಆಕೆ ಸಂಭ್ರಮಗೊಂಡು, ಮುದ್ದು ಮಗುವಿನ ಸಂದರ್ಶನಕ್ಕಾಗಿ ಆತುರದಿಂದ ಮುಂದಡಿಯಿಡುತಿದ್ದಾಳೆ. ಕೂಡಲೇ ನೆನಪಾಯಿತು, ಈದಿನ ಸಂಜೆ ಮನೆಗೆಬರುವಾಗ ಕಾಳಿಗೆ 'ಎಳ್ಳುಂಡೆ'ಯನ್ನು ತರುವುದಾಗಿ ಹೇಳಿಬಂದಿದ್ದಳು; ಮಗು ಇದಕ್ಕಾಗಿ ಕಾಯುತ್ತಿರಬಹುದು.

ಸೆರಗಿನ ತುದಿ ಬಿಚ್ಚಿನೋಡಿದಳು. ಗುಡಿಸಲಿಂದ ಹೊರಡುವಾಗ ಒಂದಾಣೆ ನಾಣ್ಯವನ್ನು ಸೆರಗಿಗೆ ಕಟ್ಟಿತಂದಿದ್ದಳು. ಆದರೆ ಈಗ ಆ ನಾಣ್ಯ ಇಲ್ಲ!

ನಾಣ್ಯ ಏನಾಯಿತು? ಆಕೆಗೊಂದೂ ಹೊಳೆಯಲಾರದು. ದಿನವಿಡೀ ಕಲ್ಲುಕಡಿಯುತ್ತಿದ್ದ ಸ್ಥಳದಲ್ಲಿಯೇ ಬಿದ್ದಿರಬಹುದೆ? ನಿಧಿಯನ್ನು ಎತ್ತಿ ತರುವಂತಹ ಆತುರದಿಂದ ಆಕೆ ಆ ಕಡೆಗೆ ಮಿಂಚಿನಂತೆ ಓಡಿಹೋದಳು!

ಎವೆತೆರೆದು ಎಲ್ಲಾ ಕಡೆ ಹುಡುಕಿದಳು. ಮಣ್ಣನ್ನು ಉಗುರುಗಳಿಂದ ಕೆದಕಿ ಅರಸಿದಳು. ನಾಣ್ಯವು ಕಂಡುಬರಲಿಲ್ಲ.

ಮನೆಗೆ ಹೋಗುವ ಉತ್ಸಾಹ ಅಡಗಿತು. ಮಾರ್ಗದ ಬದಿಯ ಒಂದು ಶಿಲೆಯ ಮೇಲೆ ಕುಸಿದು ಕುಳಿತುಕೊಂಡಳು.

ಹೊತ್ತು ಇಳಿದು ಕತ್ತಲು ಕವಿದು ಬರುತಿತ್ತು. ಇಡೀ ಪಟ್ಟಣವೇ ವಿಶ್ರಾಂತಿಯನ್ನು ಹೊಂದುವ ಸಮಯ. ಆದರೆ ಆಕೆಯ ಹೃದಯದಲ್ಲಿ ವಿಶ್ರಾಂತಿಯಿಲ್ಲ. ಮನೆಗೆ ಹೋಗುವ ವಿಚಾರವೊಮ್ಮೆ ಬಂತು. ಕೂಡಲೇ ತನಗಾಗಿ, ಈ ದಿನ ತಾನು ತರುವುದಾಗಿ ಹೇಳಿದ ಎಳ್ಳುಂಡೆಗಾಗಿ ಕಾದುನಿಂತಿರುವ ಕಾಳಿಯ ನೆನಪಾಯಿತು. ಪ್ರತಿದಿನವೂ ಗುಡಿಸಲಿಂದ ಹೊರಡುವಾಗ ಕಾಳಿ ತಿಂಡಿತರಲು ಹೇಳುತ್ತಿದ್ದಳು. ಆದರೆ ಆಕೆ 'ಇಂದು

ಇಲ್ಲಮಗೂ, ನಾಳೆ ಖಂಡಿತ ತರುತ್ತೇನೆ' ಎಂದು ಸಮಾಧಾನ ಪಡಿಸುತ್ತಾ ಬಂದಿದ್ದಳು. ಆಕೆಯಬಳಿ, ತಿಂಡಿಗಾಗಿ ಏನೂ ಹಣಉಳಿಯುತ್ತಿರಲಿಲ್ಲ. ಆದರೆ ತಾಯಕರುಳು. ಈ ದಿನ ಬೆಳಗ್ಗೆ, ಬೀರಣ್ಣನಿಂದ ಒಂದಾಣೆ ಕಡತಂದಿದ್ದಳು. ಹಾಗಾಗಿ, ಈ ದಿನ ಕೊರಳಾಣೆ ಹೇಳಿ, ಖಂಡಿತವಾಗಿಯೂ ತಾನು ಸಂಜೆಬರುವಾಗ ತಿಂಡಿತರುವುದಾಗಿ ಹೇಳಿ ಮಗಳನ್ನು ಸಂತೈಸಿದ್ದಳು.

ಈಗ ಆ ನಾಣ್ಯವೂ ಕಳೆದುಹೋಯಿತು. ಮಗುವನ್ನು ಹೇಗೆ ಸಮಾಧಾನ ಪಡಿಸಲಿ? ತಲೆತಿರುಗುತ್ತಿದ್ದರೂ ಆಕೆ ಗುಡಿಸಲ ಕಡೆಗೆ ನಡೆದು ಹೋಗುತಿದ್ದಳು.

ಹಿಂದಿನಿಂದ ಶಬ್ದವೊಂದು ಕೇಳಿಸಿತು. ಕಾರು ಬರುತಿತ್ತು. ಕಾರಿನಲ್ಲಿ ಮಹಿಳೆಯರು ಮಾತನಾಡುವುದು ನಗಾಡುವುದು ಕೇಳಿಸಿತು. ಯಾರೋ ಧನಿಕಮನೆತನದವರಿರಬೇಕು; ಅವರು ತನ್ನನ್ನು ಕರೆದಿರಬಹುದೆಂಬ ವಿಚಾರವು, ಏನೋ ತನ್ನ ಹುಚ್ಚು ಗ್ರಹಿಕೆಯೆಂದು ಬಗೆದು ಆಕೆ ಮುಂದೆ ಹೋದಳು.

'ಇಲ್ಲಿಬಾ, ನಾವೇನೂ ನಿನ್ನನ್ನು ತಿನ್ನುವುದಿಲ್ಲ–' ಈಗ ತನ್ನನ್ನೇ ಅವರು ಕರೆಯುತ್ತಿದ್ದಾರೆಂದು ಅವಳಿಗೆ ಖಚಿತವಾಯಿತು. ಕರೆದಾಗ ಯಾಕೆ ಹೋಗಬಾರದು ಎನ್ನಿಸಿತು. ಹತ್ತಿರಹೋಗಲು ಅವರು ತಿಂಡಿಯ ಕಟ್ಟೊಂದನ್ನು ಅವಳ ಕೈಯ್ಯಲ್ಲಿಟ್ಟರು.

'ಸಂಶಯವೇನು- ಶುದ್ಧ ಆಹಾರ ಅದು, ನಾವು ತಿನ್ನಲು ತಂದಿದ್ದೆವು. ಆದರೆ ಬಹಳ ಇದ್ದುದರಿಂದ ಬಿಸಾಡುವುದು ಬೇಡವೆಂದು ನಿನಗೆ ಕೊಟ್ಟಿದ್ದೇವೆ. ಹಾಳಲ್ಲ, ತೆಗೊ' ಕಾರು ಮುಂದುವರಿಯಿತು.

ಗಂಗಮ್ಮ-(ಆಕೆಯ ಹೆಸರು) ಅದನ್ನು ತೆಗೆದುಕೊಂಡು ನಡೆದಳು. ದೇವರು ತನ್ನ ಮೇಲೆ ದಯತೋರಿಸಿದನೆಂದು ಆತನನ್ನು ಮನಸ್ಸಿನಲ್ಲಿಯೇ ಕೊಂಡಾಡಿದಳು. ಆ ಹೆಂಗುಸರಿಗೆ ದೇವರು ಒಳ್ಳೆಯದು ಮಾಡಲಿ ಎಂದುಕೊಂಡಳು. ಈ ದಿನ ತನ್ನ ಮಗುವಿಗೆ ಬೇಕಾದಷ್ಟು ತಿಂಡಿಕೊಡಬಹುದು ಎಂದು ಸಂತೋಷದಿಂದ ಮುಂದಡಿಯಿಟ್ಟಳು.

ಒಮ್ಮೆಲೇ ಒಂದು ವಿಚಾರ ಹೊಳೆದು ಅವಳ ಸಂತೋಷವನ್ನೆಲ್ಲ ನುಂಗಿಬಿಟ್ಟಿತು.

ಗೇಟಿನಲ್ಲಿ ಕಾವಲುಗಾರನಿದ್ದಾನೆ. ಬೇಡುವುದೂ ಕದ್ದುಕೊಳ್ಳು ವುದೂ ಅಲ್ಲಿ ನಿಷಿದ್ಧ. ಇಷ್ಟೊಂದು ತಿಂಡಿಯನ್ನು ಆಕೆ ಕ್ರಯಕೊಟ್ಟು ಕೊಂಡುಕೊಳ್ಳುವುದು ಕನಸಿನಲ್ಲಿಯೂ ಸಾಧ್ಯವಿಲ್ಲ. ಹಾಗಾಗಿ ಕಾವಲುಗಾರನು ತನ್ನನ್ನು ಸಂಶಯದ ಮೇಲೆ ಹಿಡಿದು ಶಿಕ್ಷೆಗೆ ಗುರಿಪಡಿ ಸುತ್ತಾನೆ ಎಂದು ಆಕೆ ಹಿಂದಿನ ಅನುಭವಗಳಿಂದ ತಿಳಿದು ಕಳವಳ ಗೊಂಡಳು. ಬಹಳ ಹೊತ್ತು ವಿಚಾರಿಸಿದಳು. ಈ ತಿಂಡಿಯನ್ನು ಹೇಗಾ ದರೂ ಮಗುವಿಗೆ ಕೊಡಲು ಸಾಧ್ಯವುಂಟೇ ಎಂದು ಯೋಚಿಸಿದಳು. ಕೊನೆಗೆ ಒಂದು ವಿಚಾರ ಹೊಳೆಯಿತು. ಸೀರೆಯಲ್ಲಿ ಮುಚ್ಚಿ ಅದನ್ನು ಹೊಟ್ಟೆಗೆ ತಗಲಿಸಿ ಇಟ್ಟುಕೊಂಡಳು. ಸುತ್ತು ನೋಡಿದಳು, ಯಾರೂ ಇಲ್ಲ. ಜೀವಬಂದವಳಂತೆ ಸಂತೋಷದಿಂದ ತೀವ್ರವಾಗಿ ಹೆಜ್ಜೆಯಿಟ್ಟಳು.

ಮುಖ್ಯ ಮಾರ್ಗವನ್ನು ಬಿಟ್ಟು ಗುಡಿಸಲ ಕಡೆ ತಿರುಗುವ ದಾರಿಗೆ ಇನ್ನೂ ಕಾಲಿಡಬೇಕಷ್ಟೆ. ಸ್ವಲ್ಪ ದೂರದಲ್ಲಿಯೇ ಜನರ ಗುಂಪೊಂದು ಸೇರಿತ್ತು. ಅವರೆಲ್ಲರೂ ಅಪರಾಧೀ ಜನರು. ಅವರು ಏಕೆ ಅಲ್ಲಿ ಸೇರಿದ್ದಾರೆ?

ಒಬ್ಬ ತೆಳ್ಳಗಿನ ಮನುಷ್ಯ ಒಂದು ಕೆಂಪು ಪತಾಕೆಯನ್ನು ಹಿಡಿ ದೆತ್ತಿ ಮಾತನಾಡುತ್ತಿದ್ದ. ಎಲ್ಲರೂ ಅವನ ಕಡೆಗೆ ಎವೆಯಿಕ್ಕದೆ ನೋಡು ತಿದ್ದರು. ತೀಕ್ಷ್ಣ ಸ್ವರದಲ್ಲ ಅತ ಉದ್ರೇಕಗೊಂಡು ಮಾತನಾಡುತಿದ್ದ. ಒಮ್ಮೆ ಎಲ್ಲರೂ ಒಂದೇ ಸ್ವರದಲ್ಲಿ ಹೇಳಿದರು 'ಹೌದು, ಭಂಡವಾಳಶಾಹಿ ನಾಶವಾಗಬೇಕು, ಮಜೂರರು ವಿಜಯಿಗಳಾಗಬೇಕು'.

ಬೇರೆ ಯಾವ ಸಂದರ್ಭವಾಗಿದ್ದರೂ ಗಂಗಮ್ಮ ಅಲ್ಲಿಗೆ ಹೋಗದೆ ಇರುತ್ತಿರಲಿಲ್ಲ. ಆದರೆ ಇಂದು ತನ್ನ ಗುಡಿಸಲಲ್ಲಿ ಮಗಳು ತಿಂಡಿಗಾಗಿ ಕಾಯುತ್ತಿದ್ದಾಳೆ.

ಯಾರೋ ಹಿಂದಿನಿಂದ ಓಡಿಬರುವ ಕಾಲಸಪ್ಪಳ ಕೇಳಿಸಿತು.

"ಗಂಗಮ್ಮಾ, ಸ್ವಲ್ಪ ತಡಿ, ಅವಸರವೇನು?" ಹೀಗೆಂದು ಬೀರಣ್ಣನೇ ಆಕೆಯ ಮುಂದೆ ಬಂದು ನಿಂತನು.

ಬೀರಣ್ಣ ಕಟ್ಟಾಳು. ಎಂತಹ ಕಠಿಣ ಕೆಲಸವೂ ಆತನ ದೃಢ ಕಾಯವನ್ನು ಕುಗ್ಗಿಸಿರಲಿಲ್ಲ. ಅಗಲವಾದ ಹಣೆ, ವಿಶಾಲವಾದ ಎದೆ, ಕಪ್ಪಗಿನ ಶರೀರ. ಬೀರಣ್ಣ ಸುಂದರನೂ ಭೀಕರನೂ ಆಗಿದ್ದ. ಆತ ಸಿಪಾಯಿಗಳ ಕುಲದಲ್ಲಿ ಹುಟ್ಟಿದವನಂತೆ. ಸರಕಾರಕ್ಕೆ ವಿರೋಧ ದಂಗೆಯೆಬ್ಬಿಸಿದನೆಂದು ಅವನ ಹಿರಿಯರನ್ನು ಕ್ರಿಮಿನಲ್ ಶಿಕ್ಷೆಗೆ ಗುರಿಪಡಿಸಿದ್ದರು. ಯಾವಾಗಲೂ ಆತನ ಮಾತುಕೃತಿಗಳಲ್ಲಿ ಕ್ರಾಂತಿಯ ಕಿಡಿಕಾರುತ್ತಿತ್ತು. ಗಂಗಮ್ಮನೇ ಒಮ್ಮೆ 'ಬೀರಣ್ಣಾ, ಹೀಗೆಲ್ಲಾ ಗಲಾಟೆ ಮಾಡಬೇಡ, ಅಧಿಕಾರಿಗಳ ಕಣ್ಣಿಗೆ ಬಿದ್ದರೆ ಇದಕ್ಕಿಂತಲೂ ಕಷ್ಟ ಅನುಭವಿಸಬೇಕಾಗುವುದು' ಎಂದು ಎಚ್ಚರಿಸಿದ್ದಳು. 'ಅವರನ್ನು ಸುಡಲಿ' ಎಂದು ಆತ ಅದಕ್ಕೆ ತಿರಸ್ಕರಿಸಿ ಉತ್ತರ ಕೊಟ್ಟಿದ್ದ. ಬೀರಣ್ಣನ ಮೇಲೆ ಇತರರಿಗೆ ಇದ್ದಂತೆ ಅವಳಿಗೂ ಒಂದು ತರದ ಗೌರವವೇ ಇತ್ತು.

ಬೀರಣ್ಣ ಬಂದವನೇ ಎಲ್ಲ ಸಮಾಚಾರವನ್ನು ಹೇಳಿದ. ಅಲ್ಲಿ ಸಭೆ ಕರೆದ ವಿಷಯವನ್ನೂ, ತಾವು ಎಲ್ಲರೂ ಒಗ್ಗಟ್ಟಿನಲ್ಲಿದ್ದರೆ ತಮ್ಮ ಇಂದಿನ ಸಂಕಷ್ಟ ಪರಿಹಾರವಾಗುವುದೆಂಬ ವಿಚಾರವನ್ನೂ, ಭಾಷಣಕೊಡುತ್ತಿರುವ ಪುಣ್ಯಾತ್ಮನು ಒಳ್ಳೆಯ ಉಪದೇಶಗಳನ್ನು ಹೇಳುತ್ತಿರುವನೆಂದೂ, ಇಂದಿನ ಸಂಕಷ್ಟ ಪರಿಹರಿಸುವ ಸಲುವಾಗಿ ನಾವೆಲ್ಲರೂ ಒಗ್ಗಟ್ಟಾಗಿರುವುದು ಅವಶ್ಯವೆಂದೂ, ಆತನ ಭಾಷಣವನ್ನು ಕೇಳಿ ಅರ್ಧ ಗಂಟೆ ತಡೆದು ಮನೆಗೆ ಹೋಗಬಹುದೆಂದೂ ಬೀರಣ್ಣ ಗಂಗಮ್ಮನೊಡನೆ ಬಿನ್ನವಿಸಿಕೊಂಡ.

ಗಂಗಮ್ಮನಿಗೆ ಸದ್ಯ ಅದು ಯಾವುದೂ ಬೇಡವಾಗಿತ್ತು. ತನ್ನ ಮಗಳು, ಕೈಯ್ಯ ತಿಂಡಿ, ಅದನ್ನು ತಿಂದಾಗ ಕಾಳಿಗೆ ಆಗುವ ಆನಂದ, ಇಷ್ಟು ಮಾತ್ರ ಆಕೆಗೆ ಬೇಕಾಗಿತ್ತು. 'ಬೀರಣ್ಣಾ, ನಾನು ಈ ದಿನ ಬರುವುದಿಲ್ಲ. ಕಾಳಿ ಬಹಳ ಬೇಸರ ಪಡುತ್ತಾಳೆ; ಕ್ಷಮಿಸು' ಗಂಗಮ್ಮ ಹೇಳಿದಳು. ಬೀರಣ್ಣನಿಗೆ ಸಿಟ್ಟುಬಂತು. ಮರುಮಾತಾಡದೆ ಗಂಗಮ್ಮ ಮುನ್ನಡೆದಳು.

ಕ್ರೂರ ಅಧಿಕಾರಿಗಳು ಗಂಡನನ್ನೂ ತನ್ನನ್ನೂ ಬೇರೆ ಮಾಡಿದ್ದರು. ಇದ್ದ ಒಬ್ಬ ಮಗ ತೀರಿ ಹೋಗಿದ್ದ. ಬಾಳುವೆಯಲ್ಲಿ ದುಡಿದು ದುಡಿದು ಕಂಗಾಲಾಗಿದ್ದಾಳೆ. ದುಡಿತದ ಸಂಕಷ್ಟ ಅವಳಿಗೆ ಚನ್ನಾಗಿ ಗೊತ್ತು. ತಮ್ಮಂತಹವರ ಸಂಕಷ್ಟ ಪರಿಹಾರವಾಗಬೇಕೆಂದು ಆಕೆ ದೇವರಲ್ಲಿ ನಿತ್ಯ ಮೊರೆಯಿಡುತ್ತಾಳೆ. ಆದರೆ ಮುಂದಿನ ಒಂದು ಕ್ಷಣದ ಆನಂದ, ಆ ದಿವ್ಯ ಸ್ವಪ್ನ, ಅದು ಅವಳಿಗೆ ಸ್ವರ್ಗೀಯವಾಗಿತ್ತು. ಮಗುವಿನ ಬಹುಕಾಲದ ಆಸೆಯನ್ನು ಇಂದು ತಾನು ತೀರಿಸುತ್ತೇನೆ. ಕಾಳಿ ತನ್ನನ್ನು ಒಳ್ಳೆಯ ತಾಯಿಯೆಂದು ತಿಳಕೊಳ್ಳುತ್ತಾಳೆ. ಆಕೆಯನ್ನು ಅಪ್ಪಿ ಮುದ್ದಿಡುತ್ತೇನೆ. ತೊಡೆಯಲ್ಲಿ ಕೂತುಕೊಳ್ಳಿಸಿ ತಿಂಡಿಗಳನ್ನು ಕೊಡುತ್ತೇನೆ—ಆಕೆಯ ಮಾತೃ ಹೃದಯ ಪ್ರೇಮವಾತ್ಸಲ್ಯದ ಹಾಲಿನಿಂದ ತುಂಬಿ ಹೋಯಿತು.

ಗೇಟಿನ ಬಳಿಯಲ್ಲಿ ಯಮದೂತನಂತೆ ಕಾವಲುಗಾರ ಪಠಾಣ ನಿಂತಿದ್ದ. ನೋಡಿ ಬೆದರಿದಳು. ಕಾವಲಿನವನಿಗೂ ಸಂಶಯ ಬಂತು. ಕೈಯ ದೊಣ್ಣೆಯನ್ನೆತ್ತಿ ಹಿಡಿದು ಆಕೆಯನ್ನು ಅಲ್ಲಿಯೇ ನಿಲ್ಲುವಂತೆ ಆಜ್ಞಾಪಿಸಿದ. ಹತ್ತಿರ ಬಂದು ರಟ್ಟೆ ಹಿಡಿದ. ಮೈ ನಡುಕದಿಂದ ಮಡಿಲಲ್ಲಿ ಕಟ್ಟಿದ್ದ ತಿಂಡಿಯ ಗಂಟು ನೆಲಕ್ಕೆ ಬಿತ್ತು. ಕ್ರೂರ ಪಠಾಣನು ತಿಂಡಿಯ ಆ ಗಂಟನ್ನು ಕಾಲಿನಿಂದ ತುಳಿದು ಚೆಲ್ಲಿ, ಆಕೆಯನ್ನು ಬಾಯಿಗೆಬಂದಂತೆ ಬೈದು ಕಳುಹಿಸಿದ.

2

ಮರುದಿನ ಗಂಗಮ್ಮ ಕಲ್ಲು ಒಡೆಯುತ್ತಿದ್ದಂತೆ ಅಳಲು ಮತ್ತು ಕೋಪಗಳಿಂದ ಆಕೆಯ ಹೃದಯವೂ ಒಡೆದುಹೋಗುವಂತೆ ನೋವಾಗುತ್ತಿತ್ತು. ಅಧಿಕಾರಿಗಳ ಮಿತಿಯಿಲ್ಲದ ಈ ಅನಾಚಾರದಿಂದ ಆಕೆಯ ಹೃದಯದಲ್ಲಿ ಕ್ರಾಂತಿಯ ಕಿಡಿ ಕೆರಳಿತ್ತು. "ನನ್ನ ಮಗುವನ್ನು ತಿಂದಿ ಕೊಟ್ಟು ಸಾಕುವ ಸ್ವಾತಂತ್ರ್ಯವೂ ನನಗಿಲ್ಲ? ಆ ದುಷ್ಟನು ತಿಂಡಿಯನ್ನು ಧೂಳಿನಲ್ಲಿ ಹಾಕಿ ತುಳಿದುಬಿಟ್ಟ..."

ಸ್ವಲ್ಪ ದೂರದಲ್ಲಿ ಒಂದು ಹೆಣ್ಣು ನಾಯಿಯು ಧೂಳಿನಲ್ಲಿ ಬಿದ್ದುಕೊಂಡು ತನ್ನ ಮರಿಗಳಿಗೆ ಮೊಲೆಯೂಡುತಿತ್ತು. ನಾಯಿ ಕ್ಷೀಣವಾಗಿ

ಕಂಗಾಲಾಗಿದೆ ಆಹಾರವಿಲ್ಲದೆ ಎಷ್ಟು ದಿನವಾಯಿತೊ! ಆದರೂ ವಾರಿ ಗಳು ಮೊಲೆಯನ್ನು ಕಚ್ಚಿ ಎಳೆಯುತ್ತಿವೆ. ನೋವಾಗುತ್ತಿದ್ದರೂ ಹೆಣ್ಣು ನಾಯಿಯ ಮುಖದಲ್ಲಿ ಒಂದು ಆನಂದವಿದೆ. ಜಗತ್ತಿನಲ್ಲಿ ಮಾತೃಪ್ರೇಮವು ಎಷ್ಟು ಅಪೂರ್ವ!

ಗಂಗವ್ವನ ತಲೆ ಸುತ್ತ ಸುತ್ತುತ್ತಿರುವ ಶಾಸನವು ಪ್ರಾಣಿ ಜಾತಿ ಗಿರುವ ಸ್ವಾತಂತ್ರ್ಯವನ್ನೂ ಅವಳಿಂದ ಕಸಿದುಕೊಂಡಿದೆ. ಒಮ್ಮೆ ಆಕೆಗೆ ಅಮಾನುಷವಾದ ಆವೇಶ ಬಂದಂತಾಗಿ, ಅಧಿಕಾರಿಗಳನ್ನೂ ಶಾಸನವನ್ನೂ ಸರಕಾರವನ್ನೂ ಕಲ್ಲನ್ನು ಪುಡಿಮಾಡುವಂತೆ ಪುಡಿಪುಡಿ ಮಾಡಿಬಿಡ ಬೇಕೆಂದು ಹೊಟ್ಟೆಯುರಿ ಮಸಗಿತು. ಇಂಥಾ ವಿಚಾರಗಳು ತೆರೆಯಂತೆ ಬಂದು ತಡೆಯಲಾರದೆ ಹೋದಾಗ ಬಹಳವಾಗಿ ಕಂಬನಿ ಸುರಿಸಿಬಿಟ್ಟಳು. ಸೆರಗಿನ ತುದಿಯಿಂದ ಒರಸುತ್ತಾ ಕಲ್ಲನ್ನು ಪುಡಿ ಮಾಡುತ್ತಾ ಇದ್ದಳು.

ಮಧ್ಯಾಹ್ನ ಕೂಲಿಗಾರರಿಗೆ ಐದು ನಿಮಿಷದ ವಿಶ್ರಾಂತಿ. ಬೀರಣ್ಣ ನಲ್ಲಿಗೆ ಬಂದು 'ಬೀರಣ್ಣಾ' ಎಂದಳು. ಆತ ಕೇಳಿಸಿದರೂ ಉತ್ತರಿಸಲಿಲ್ಲ.

'ನೀನು ನನ್ನ ಮೇಲೆ ಸಿಟ್ಟಾಗಿದ್ದೀಯೆ? ಸರಿ, ಆದರೆ ನಾನಿಂದು ನಿನ್ನನ್ನು ಸಮಾಧಾನಪಡಿಸಬಲ್ಲೆ. ಮುಂದಿನ ಸಭೆಗಳಿಗೆಲ್ಲಾ ನಾನು ತಪ್ಪದೆ ಬರುತ್ತೇನೆ. ಈ ದಿನ ಸಭೆಯುಂಟೊ?'

ಬೀರಣ್ಣ ತಲೆ ಅಲ್ಲಾಡಿಸಿದ. ಸಭೆಗೆ ಬರುತ್ತಾಳೆಂಬ ಸಂತೋಷ ದಿಂದ ಮಾತ್ರವಲ್ಲ, ನಿನ್ನೆ ಹಾಗೆ ನಿರ್ಲಕ್ಷಿಸಿ ಹೋದವಳು ಈ ದಿನ ಇಷ್ಟು ವ್ಯತ್ಯಾಸವಾಗಬೇಕಾದರೆ? ಏನೋ ನಡೆದಿರಬೇಕೆಂದು ಅವ ಊಹಿಸಿದ.

'ಸಭೆಗಳಿಗೆ ಹೋಗುವುದು ಒಳ್ಳೆಯದೆಂದು ನಿನಗೆ ಯಾರು ತಿಳಿ ಸಿದರು?'

'ನನಗೆ ಬೇರಾರೂ ತಿಳಿಸಲಿಲ್ಲ. ನಿರ್ದಯ ಹೃದಯರಾದ ಅಧಿಕಾ ರಿಗಳೇ ಅವರ ಕೆಲಸದಿಂದ ನನಗೆ ಈ ಪಾಠ ಕಲಿಸಿದರು........'

ಬೀರಣ್ಣನಿಗೆ ಸಂತೋಷವಾಯಿತು; ಸಂಜೆ ಕೆಲಸ ಮುಗಿಸಿಬಂದ ವನೇ ಬೀರಣ್ಣ 'ಗಂಗವ್ವ' ಎಂದು ಕರೆದ. 'ಹೊರಟೆ' ಗಂಗವ್ವ ಉತ್ತರವಿತ್ತಳು.

ಗಂಗವ್ವ ಕೂಲಿಗಾರರ ಚಳವಳದಲ್ಲಿ ಮುಂದಾಳು ಆದಳು.

ಸ್ಫೂರ್ತಿಗಾಗಿ ಪೇಚಾಟ

ಮಹಾಶಯರೇ,

ನಾವು 'ಗೋಳಾಟ' ಎಂಬೀ ಹೊಸ ಪತ್ರಿಕೆಯನ್ನು ಹೊರಡಿಸುವುದಾಗಿ ನಿಶ್ಚಯಿಸಿದ್ದೇವೆ. ಕಾಗದದ ಅಭಾವದೀ ಕಾಲದಲ್ಲಿಯೇ ನಾವೀ ಸಾಹಸ ಕೈಕೊಂಡಿರುವೆವು; ನಮ್ಮ 'ಗೋಳಾಟ'ವು ಈ ಕಾಲದಲ್ಲಿಯೇ ದಶದಿಕ್ಕುಗಳಲ್ಲಿ ಕೇಳಿಸಿದರೆ, ಮುಂದೆ ಭವ್ಯ ಭವಿಷತ್ತು ಉಂಟೆಂಬ ಉನ್ನತ ಆಶೆಯಿಂದ. ನಿಮ್ಮಂಥಾ ಹೆಸರಾಂತ ಸಾಹಿತಿಗಳು ಲೇಖನಗಳಿಂದ ನಮ್ಮಲ್ಲಿ ನವಚೈತನ್ಯ ತುಂಬಿಸಬೇಕು. ಸದ್ಯ ನಮ್ಮ ಪತ್ರಿಕೆಯ ಪ್ರಥಮ ಸಂಚಿಕೆಗೇ ನಿಮ್ಮಿಂದ ಒಂದು ಸ್ಫೂರ್ತಿಯ ಲೇಖನವನ್ನು ನಾವು ನಿರೀಕ್ಷಿಸುತ್ತೇವೆ. ನಮ್ಮ ವಿನಂತಿಯನ್ನು ಮಾನ್ಯ ಮಾಡುವಿರಾಗಿ ನಂಬಿದ್ದೇವೆ. ಮುಂದಿನ ವಾರದಲ್ಲಿಯೇ ನಮ್ಮ ಸಂಚಿಕೆ ಹೊರಡುವ ನಿರ್ಧಾರವಾಗಿದೆ.

ಇತಿ ಸಂಪಾದಕ 'ಗೋಳಾಟ'

ದಿನದ ಕೆಲಸವನ್ನು ತೀರಿಸಿ ಸಂಜೆ ಆಫೀಸಿನಿಂದ ಹೊರಡುವಷ್ಟರಲ್ಲಿ ಟಪಾಲು ಪೇದೆ ಈ ಪತ್ರವನ್ನು ಕೊಟ್ಟು ಹೋದ. 'ಗೋಳಾಟ' ಒಳ್ಳೆಯ ಹೆಸರು. ಈ ಕಾಲದಲ್ಲಿಯೂ ಒಂದು ಹೊಸ ಪತ್ರಿಕೆ; ಎಂಥಾ ಸಾಹಸವಿದು! ಮುಂದಿನ ವಾರವೇ ಪ್ರಕಟಣೆ, ಅದ್ಭುತ! ಆದರೆ ಸ್ಫೂರ್ತಿಮಯ ಲೇಖನಕ್ಕೆ ನಾನೇನು ಮಾಡಲಿ? ದಿನವಿಡೀ ಯುದ್ಧದ ವಾರ್ತೆ ಓದಿಓದಿ, ಬರೆದು ತಲೆಯ ನರಗಳೆಲ್ಲಾ ಸಡಿಲು ಸಡಿಲಾದರೆ, ಅಬ್ಬಾ! ಸೆಕೆಯೇ, ದಿನವಿಡೀ ಈ ಸೆಕೆಯಿಂದ ಮೈಯಲ್ಲಿದ್ದ ನೀರೆಲ್ಲಾ ಬೆವರಿ ಬೆವರ ಹರಿದು ಹರಿದು ಹೋದರೆ, ಹಾಲು ಹಾಕಿದ ಹುಣಸೇ ಹುಡಿಯ ಕಾಫಿ ಆಗಾಗ ಕುಡಿಯುತ್ತಾ ಇದ್ದರೆ 'ಸ್ಫೂರ್ತಿ' ಹೇಗೆತಾನೇ ಹುಟ್ಟಬೇಕು? ಪಾಪ! ಹೊಸ ಸಂಪಾದಕರಿಗೇನು ಗೊತ್ತು, ಹಳೆಯ ಪತ್ರಿಕೋದ್ಯಮಿಗಳ ಸಂಕಷ್ಟ? ಹೊಸ ಪತ್ರಿಕೆ ಹೊರಡಿಸುವ ಹುಮ್ಮಸು ಅವರಿಗೆ; ಇದ್ದ ಪತ್ರಿಕೆಗಳನ್ನೇ ಜೀವಂತವಿರಿಸುವುದು ಸಮಸ್ಯೆಯಾಗಿದ್ದಾಗ. ಹಾಳಾದ

ಯಾವುದೋ ಪ್ರೆಸ್ಸಿನವರು ಇವಂಗೆ ಧರ್ಮಕ್ಕೆ ಪ್ರಿಂಟು ಮಾಡಿಕೊಡಲು ಒಪ್ಪಿದ್ದಾರೇನೊ? ಅಲ್ಲ, ಕಾಗದ ಇವಂಗೆ ಎಲ್ಲಿಂದ ಸಿಗಬೇಕು? ಸತ್ತೇ ಹೋಗಲಿ, ಹಾಗೇನೋ ಆಗುವುದಂತೂ ಖಂಡಿತ. ಆದರೆ ನನ್ನಿಂದಾಗಿ ಹಾಗಾಗುವುದು ಬೇಡ. ಒಂದು ಲೇಖನ ತಾನೆ? ಏನಾದರೂ ಗೀಚಿ ಬಿಡುವುದು. ಆದರೆ ಆ 'ಸ್ಫೂರ್ತಿ'ಗೆ ನಾನೇನು ಮಾಡಲಿ?

ಆಫೀಸಿನಿಂದ ಹೊರಬಿದ್ದವನೇ ಹತ್ತಿರದ ಸೀಯಾಳದ ಅಂಗಡಿಗೆ ಹೋದೆ. ಅಲ್ಲಿ ನನ್ನ ಸಹಪಾಠಿ ಭಟ್ಟರು, ಅವರೀಗ ವಕೀಲರಾಗಿದ್ದಾರೆ —ನಿಂತಿದ್ದರು. ಅವರಿಗೂ ನನ್ನಂತೆ ಬಹಳ ಸೆಕೆ ಆಗಿರಬೇಕು; ಸೀಯಾಳ ಕುಡಿಯುವರೆ ಬಂದಿರಬಹುದು. 'ನಮಸ್ಕಾರ ವಕೀಲರೇ' ಎಂದೆ. ನನ್ನನ್ನು ದುರದುರು ನೋಡಿ ಕೈ ಮೇಲೆ ಕೆಳಗೆ ಮಾಡಿದರೇ ಹೊರತು, ಬಾಯಿಯಿಂದ ಮಾತೇ ಹೊರಡಲಿಲ್ಲ. ಬಹುಶಃ ಬಾಯಾರಿಕೆಯಿಂದ ಅವರ ಗಂಟಲಿನ 'ಪಸೆ' ಆರಿದ್ದರೂ ಇರಬಹುದು. ಪಾಪ! ಅವರ ತಂದೆ ಯೇನೋ ಅಡಿಕೆ ಖಂಡಿಗೆ 200 ರೂಪಾಯಿ ಇದ್ದಾಗ ಮಗನಿಗೆ 'ಇಂಗ್ಲೀಸ್' ಕಲಿಸಿದರು. ಮುಂದೆ ಮಗ ವಕೀಲನಾಗಬೇಕೆಂದು–ಬೇರೆ ವಕೀಲರಿಗೆ ಹಣ ಕೊಟ್ಟು ಕೊಟ್ಟು ಅವರಿಗೂ ಸಾಕಾಗಿ ಹೋಗಿತ್ತು– ವಕಾಲತು ಕಲಿಸಿದರು. ಇಷ್ಟರಲ್ಲಿ ಅವರ ಆಸ್ತಿಯೂ ಮಾರಾಟವಾಗಿ ಹೋಯಿತು. ಭಟ್ಟರೇನೋ ವಕಾಲತು ಕಲಿತಿದ್ದಾರೆ ನಿಜ. ಆದರೆ ಮಂಗಳೂರಲ್ಲಿ ಅವರಂಥಾ ಹೊಸ ವಕೀಲರನ್ನು ಯಾರು ಕೇಳಬೇಕು? ಆ ಚಿಂತೆಯಿದ್ದರೂ ಇರಬಹುದು ಅವರಿಗೆ.

ಅಂಗಡಿಯ ನಾಗಪ್ಪನೊಡನೆ 'ಒಂದು ಸೀಯಾಳ ಕೆತ್ತಿಕೊಡು' ಎಂದೆ. ಪ್ರಾಣಿಗೆ ಅದು ಕೇಳಿದಂತೆಯೇ ತೋರಲಿಲ್ಲ. ಕೈಯಲ್ಲಿ ನೋಟು ಗಳನ್ನು ಎಣಿಸುತ್ತಾ ಇದ್ದಾನೆ ನಾಗಪ್ಪ! ಒಂದು, ಎರಡು, ಮೂರು, ನಾಲ್ಕು....ಹತ್ತು, ಹದಿನೈದು! ನೋಟುಗಳಿಷ್ಟೂ ವಕೀಲರ ಕಿಸೆಯೊಳಗೆ ಸೇರಿದವು. ಬಹುಶಃ ವಕೀಲರಿಗೆ ನಾಗಪ್ಪನ 'ಕೇಸಾ'ದರೂ ಸಿಕ್ಕಿತೋ ಏನೊ? ಹೌದು, ದೊಡ್ಡ ದೊಡ್ಡ 'ಕೇಸು'ಗಳು ಇಂಥಾ ವಕೀಲರಿಗೆ ಯಾರು ಕೊಡಬೇಕು? ಚಿಂತೆಯಿಲ್ಲ, ಹೇಗಾದರೂ ಜೀವನ ಮಾಡು ತ್ತಾರಲ್ಲ, ಅದೇ ದೊಡ್ಡದು. ವಕೀಲರು ನೋಟುಗಳನ್ನು ಕಿಸೆಗೆ ಹಾಕಿ

ಕೊಂಡೇ ಹೋದರು. ನಾಗಪ್ಪ ಇನ್ನೂ ಅವರ ಕಡೆಗೇ ನೋಡುತ್ತಾ ಇದ್ದಾನೆ. ನಾನು ಗಿರಾಕಿ ಬಂದಿದ್ದೇನೆಂಬುದೂ ಅವನಿಗೆ ನೆನಪೇ ಇಲ್ಲ.

"ಎಲ್ಲಾ ಬೋ-ಮಗಾ ಭಟ್ಟಾ, ಈ ಹೊತ್ತು ಹೊಡೆದುಬಿಟ್ಟೆಯಲ್ಲಾ ಒಂದು ಪೆಟ್ಟು!" ವಕೀಲರಿಗೆ ಇದು ಕೇಳಿದರೂ ಕೇಳದಂತೆ ಮಾಡಿ ಹೊರಟು ಹೋದರು.

ನಾಗಪ್ಪ ನನ್ನ ಕಡೆಗೆ ಕಣ್ಣು ಹೊರಳಿಸಿ ನೋಡುತ್ತಾ, ಕಡೆಗೆ ಒಂದು ದೀರ್ಘ ಶ್ವಾಸ ಬಿಟ್ಟ. ಅಯ್ಯೋ! ಇದೇನು ಬಂತು?

'ಹೌದೋ, ನಾಗಪ್ಪ, ಅವರು ವಕೀಲರಲ್ವೇನೊ, ಏನು ಹಾಗೆ ಬಾಯಿಗೆ ಬಂದ ಹಾಗೆ ಒದರುತ್ತಿ?'

'ವಕೀಲನೋ, ಜಡ್ಜನೋ, ಈ ಹೊತ್ತು ಹೊಡೆದುಬಿಟ್ಟಲ್ಲಾ ಈ ಬೋ-ಮಗಾ ಭಟ್ಟ! ಅಲ್ಲ, ಈ ಹಳ್ಳಿಯ ಮಾಣಿಗೆ ಈ 'ನಂಬ್ರ' ಹೇಗೆ ಗೊತ್ತಾಯಿತು ಸ್ವಾಮಿ?'

'ವಕೀಲರೋ ಅವರು,'ನಂಬ್ರ'ಅವರಿಗೆ ಗೊತ್ತಾಗದೆ ಇರುತ್ತದೋ? ಕೋರ್ಟಿನಲ್ಲಿ ಗೊತ್ತಾಗುವುದಿಲ್ಲವೆ? ಅದನ್ನು ಅವರು ಡೈರಿಯಲ್ಲಿ ಬರಕೊಳ್ಳುತ್ತಾರೆ'.

'ಇದು ಕೋರ್ಟಿನ ನಂಬ್ರ ಅಲ್ಲ ಸ್ವಾಮಿ, ಬಿಡ್ಡಿನ 'ನಂಬ್ರ'; ನಿಮಗೆ ಗೊತ್ತೇ ಇಲ್ಲವೆ? ಇಲ್ಲಿ ಕೇಳಿ, ಒಂದು ಕೊಟ್ಟರೆ ಎಂಟು, ಒಂದು ಮುಕ್ಕಾಲಿಗೆ ಎಂಟು ಮುಕ್ಕಾಲು; ಒಂದು ರುಪಾಯಿಗೆ ಎಂಟು ರುಪಾಯಿ; ಅದರಲ್ಲಿ ಕುಳೋಸಿಂಗ್, ಓಪಣಿಂಗ್, ಡಬ್ಲಿಂಗ್, ಟಿಬ್ಲಿಂಗ್..."

'ಸತ್ತೇ ಹೋಗಲಿ ನಿನ್ನ ಟಿಬ್ಲಿಂಗ್, ಈಗ ಒಂದು ಸೀಯಾಳ ಕೆತ್ತಿ ಕೊಡುತ್ತಿಯಾ?'

'ಓಹೋ ನೀವು ಸೀಯಾಳಕ್ಕೆ ಬಂದವರೊ? ಆಗಲೇ ಹೇಳಲಿಲ್ಲವಲ್ಲಾ....'

oo oo oo

ಹಾಳು ಹೋಟೆಲಲ್ಲಿ ಹನ್ನೆರಡು ಗಂಟೆ ವರೆಗೂ ಬೊಬ್ಬೆಯೋ ಬೊಬ್ಬೆ. 'ಗೋಳಾಟ'ದ ಸಂಪಾದಕರಿಗೆ ಲೇಖನ ಬರೆಯಬೇಕೆಂದರೆ ಈ ಬೊಬ್ಬೆಯಲ್ಲಿ ಸಾಧ್ಯವೆ? ಮುಂಜಾನೆ ಸ್ವಲ್ಪ ಬೇಗ ಎದ್ದು ಬರೆದುಬಿಡುವುದು. ಆ ಸ್ಫೂರ್ತಿ ಬಂದರೂ ಬರಬಹುದು. ಹೇಗಿದ್ದರೂ ನಾಳೆ ಖಂಡಿತ ಬರೆದು ಕಳುಹಿಸಲೇಬೇಕು.

ನಾಲ್ಕೂವರೆ ಗಂಟೆಗೆ 'ಎಲಾರಂ' ಎಚ್ಚರಿಸಿತು. ಎದ್ದವನೇ ದೀಪ ಹಚ್ಚಿ ಮುಖ ತೊಳೆದುಕೊಂಡು ಬಂದು ಮೇಜಿನ ಮುಂದೆ ಕುಳಿತೆ. ಇನ್ನು ಬರೆದೇ ಬಿಡುವುದು.

ಅಲ್ಲ, ಲೇಖನ ಬರೆಯಬೇಕೆಂದರೆ ಬರೆಯುವುದೇನೆಂದು ಸ್ವಲ್ಪ ವಿಚಾರವಾದರೂ ಮಾಡಬೇಡವೆ? ಯಾವ ವಿಚಾರವೂ ಹೊಳೆಯುವುದಿಲ್ಲವಲ್ಲ. ಅದರಲ್ಲೂ ಲೇಖನದಲ್ಲಿ 'ಸ್ಫೂರ್ತಿ' ಇರಬೇಕು. ಕವಿತೆ ಬರೆಯಲೆ? ಸತ್ಯಾಗ್ರಹದ ಕುರಿತು ಬರೆಯಲೆ? ಸತ್ಯಾಗ್ರಹದ ಕುರಿತು ಬರೆದರೆ 'ಸ್ಫೂರ್ತಿಮಯ' ಆದರೂ ಆಗಬಹುದು- ಆದರೆ ಡಿಫೆನ್ಸ್ ಕಾನೂನು, ಅದು ಬೇಡ; ಜರ್ಮನಿ ಜಪಾನಿಗಳ ಫೇಸಿಸಮ್ಮನ್ನು ಖಂಡಿಸಿ--ನಮ್ಮ ಕಮ್ಯುನಿಸ್ಟ ಮಿತ್ರರಂತೆ—ಪ್ರಚಂಡವಾಗಿ ಖಂಡಿಸಿ ಕವಿತೆ ಬರೆದು ಬಿಡುತ್ತೇನೆ. ಸದ್ಯ ಯಾರಿಗೂ ತೊಂದರೆಯಿಲ್ಲ. ಸರಿ, ಇದೇ ಒಳ್ಳೆಯ ಯೋಚನೆ.

ಯಾವ ಛಂದಸ್ಸಿನಲ್ಲಿ ಬರೆಯಲಿ? 'ಗೋಳಾಟ'ದ ಸಂಪಾದಕರು ಹಳೆಯ ಸಂಪ್ರದಾಯವಾದಿಗಳೋ, ಹೊಸ ಸಂಪ್ರದಾಯದವರೊ? ಒಂದು ರಗಳೆಯಲ್ಲಿ ಬರೆದುಬಿಡುವುದು. ಹೊಸಬರಿಗೂ ಹಳಬರಿಗೂ ಎಲ್ಲರಿಗೂ ಒಪ್ಪುತ್ತದೆ. ಅಲ್ಲ, ಕವಿತೆಯೇ 'ರಗಳೆ'ಯಾಗಿಬಿಟ್ಟರೆ?

ಕವಿತೆ ಬೇಡ, ಕತೆ ಬರೆಯುವುದು. ಒಳ್ಳೆಯ 'ಪ್ಲಾಟ್' ಯಾವುದು? ಒಬ್ಬ ಯುವಕ—ಕಾಲೇಜ ವಿದ್ಯಾರ್ಥಿ; ಆತ ಬೇರೆ ಜಾತಿಯವನಾಗಿರಬೇಕು; ಮುಸಲ್ಮಾನನಾದರೂ ಆಗಬಹುದು. ಒಬ್ಬ ತರುಣಿ—ಆಕೆಯೂ ಕಲಿತ ಹುಡುಗಿ; ಬ್ರಾಹ್ಮಣರ ಹುಡುಗಿ ಯಾಕೆ ಆಗಬಾರದು? ಕಾಮುಕ್ಕೆ ಕಣ್ಣುಂಟೆ? ಇಬ್ಬರೂ ಪ್ರೇಮಿಸುತ್ತಾರೆ; ಆದರೆ

ಸಮಾಜ—ಎಂದರೆ ಹುಡುಗಿಯ ತಂದೆ ತಾಯಿಗಳು--ಒಪ್ಪಲಾರರು. ಪ್ರೇಮಿಗಳೂ ಕೇಳಲಾರರು; ವಿಘ್ನಗಳು ಒದಗುವವು; ಕೊನೆಗೆ ಒಂದು ದಿನ ಬೆಳಿಗ್ಗೆ ನೋಡುವಾಗ ಊರ ಕೆರೆಯಲ್ಲಿ ಎರಡು ಶವಗಳು ತೇಲುತಿದ್ದವು! ಸತ್ತಮೇಲೂ ಆ ಪ್ರೇಮಿಗಳು ಅನ್ಯೋನ್ಯ ಆಲಿಂಗಿಸಿಕೊಂಡೇ ಇದ್ದರು! ಇಬ್ಬರನ್ನೂ ಅಂಥಾ ಪ್ರೇಮ ಪಾಶ ಬಿಗಿದಿತ್ತು............ ಒಳ್ಳೆಯ 'ಪ್ಲೋಟು'. ಕಾಲೇಜ್ ತರುಣ ತರುಣಿಯರು ಖಂಡಿತ ನನ್ನ ಈ ಕತೆಯನ್ನು ಮೆಚ್ಚುತ್ತಾರೆ. ಇನ್ನ ಬರೆದೇಬಿಡುವುದು. ಪ್ರಣಯಿಗಳಿಗೆ ಯಾವ ಹೆಸರಿಡಲಿ? ಜಿನ್ನಾ, ಅಜಾದ್, ಹಕ್....ಸರೋಜಿನಿ ದೇವಿ, ಕಮಲಾದೇವಿ, ಸಬಿತಾದೇವಿ....

ರೂಮಿನ ಹೊರಗೆ ಹೋಟೆಲ್ ಹುಡುಗ ರಾಮು ಮಲಗಿದ್ದವನೇ ತಟ್ಟನೇ ಎದ್ದು ಕುಳಿತ. ಕೆದರಿದ ಕ್ರಾಪನ್ನು ಎರಡು ಕೈಗಳಿಂದಲೂ ಬಲವಾಗಿ ಮುಷ್ಠಿಯಲ್ಲಿ ಹಿಡಿದುಕೊಂಡ; ಹಿಡಿದು ಒಮ್ಮೆ ಗಟ್ಟಿಯಾಗಿ ಎಳೆದ; ಎಳೆದ ಮುಷ್ಠಿಯನ್ನು ಇನ್ನೂ ಬಿಡಲೇ ಇಲ್ಲ. ನನ್ನ ಎದೆಗೆ ನೇರಾಗಿ ಎರಡೂ ಮುಷ್ಠಿಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ರೂಮಿನೊಳಗೂ ಬಂದೇ ಬಿಟ್ಟ! ಎಲಾ, ಇವನಿಗೇನು ಹುಚ್ಚು ಹಿಡಿದಿದೆಯೊ? ಗಾಬರಿಯಿಂದ ಅವನನ್ನೇ ನೋಡುತ್ತಾ ನಿಂತೆ.

ಬಂದವನೇ ರಾಮು ದೀಪದ ಮುಂದೆ ತನ್ನೆರಡು ಭದ್ರವಾದ ಮುಷ್ಠಿಗಳನ್ನೂ ಬಿಚ್ಚಿ ಅದರೊಳಗಿನ ಒಂದೊಂದೇ ಕೂದಲುಗಳನ್ನು ಎಣಿಸುತ್ತಾ, ಒಂದು, ಎರಡು, ಮೂರು, ನಾಲ್ಕು, ಐದು, ಆರು,...... ಎಂಟು, 'ನಂಬ್ರ ಎಂಟು' ಎಂದು ಒಮ್ಮೆ ಕೋತಿಯಂತೆ ನೆಲದಿಂದ ಮೇಲಕ್ಕೆ ಹಾರಿಬಿಟ್ಟ.

'ಎಲಾ, ಏನು ಮಾಡುತ್ತೀಯಾ?'

'ಅಲ್ಲ ಸಾರ್, ಈ ಹೊತ್ತು ನಂಬ್ರ ಎಂಟು'

ನಾಗಪ್ಪ ಸಂಜೆ ಹೇಳಿದ್ದ, 'ನಂಬ್ರ' ಎಂದರೆ ಕೋರ್ಟಿನ ನಂಬ್ರ ಅಲ್ಲ, ಬಿಡ್ಡಿನ ನಂಬ್ರ ಎಂದು.

'ಘಟಿಂಗ, ಹೊರಗೆ ಹೋಗುತ್ತೀಯೋ ಇಲ್ಲವೊ?'

ರಾಮು: ಹಲ್ಲು ಕಿರಿಚುತ್ತಾ ಹೊರಗೆ ಹೋದ. ಈ ಮಾರಿಗಳ ಕಾಟದಲ್ಲಿ ಹೇಗೆ ಕತೆ ಬರೆಯಲಿ? ಬಂದ ಸ್ಫೂರ್ತಿಯು ಹೇಗೆ ಉಳಿಯ ಬೇಕು?

೦೦ ೦೦ ೦೦

ನಾನು ನಿಜವಾಗಿ ಹೇಳುತ್ತೇನೆ, ಹೆಂಗುಸರ ತಲೆಯಲ್ಲಿ ಮಿದುಳೇ ಇಲ್ಲ. ಅಲ್ಲದಿದ್ದರೆ ಪವನಿಗೆ ೭೫ ರೂಪಾಯಿ ಆದ ಈ ಕಾಲದಲ್ಲಿಯೂ ಯಾರಾದರೂ ಆಭರಣದ ಹಠ ಹಿಡಿದಾರೊ? ಆಭರಣ ಮಾಡಿಸಿಕೊಡ ದಿದ್ದರಂತೂ ಸಾಧ್ಯವೇ ಇಲ್ಲ. ಹೆಂಗುಸರೊಡನೆ ಸತ್ಯವೇ ಹೇಳಬೇ ಕೆಂದೇನು? ಹೇಗಾದರೂ ಮಾರಾಣಿಗೆ ಬಳೆಗಳಾದರೆ ಸರಿ; ಬೆಳ್ಳಿಯ ಬಳೆ ಮಾಡಿಸಿ ಬಂಗಾರದ ಗಿಲೀಟು ಕೊಡಿಸುತ್ತೇನೆ. ಅನಂತಾಚಾರಿ ಮಾಡಿ ಕೊಡಲೂ ಒಪ್ಪಿದ್ದಾನೆ. ನಾಳೆ ಆದಿತ್ಯವಾರ ಬರುವಾಗಲೇ ಬಳೆ ತರಬೇ ಕೆಂದು ಅವಳ ಅಪ್ಪಣೆ ಮಾಡಿದ್ದಾಳೆ ಬೇರೆ. ಈ ಆಚಾರಿ ಜಾತಿಯನ್ನು ನಂಬುವುದಕ್ಕೂ ಸಾಧ್ಯವಿಲ್ಲ. ಇದುವರೆಗೆ ಕೆಲಸ ಸುರು ಮಾಡಿದ್ದಾನೋ ಇಲ್ಲವೋ ಭೂಪತಿ. ಈಗಾದರೂ ಹೋಗಿ ಅವನೊಡನೆ ಹೇಳಿ ಬರು ತ್ತೇನೆ. ಆ ಮಾರಾಯ ನಾಳೆ ಮನೆಗೆ ಹೋಗುವಾಗಲಾದರೂ ಕೊಟ್ಟ ದ್ದರೆ?...

'ಚಲ್ ಚಲ್ರೇ' ಪದ ಹೇಳುತ್ತಾ ಅನಂತಾಚಾರಿ ತಟ್ಟುತ್ತಾ ಇದ್ದಾನೆ. ''ಬನ್ನಿ ಸ್ವಾಮಿ, ನಿಮ್ಮ ಒಳೆ ನಾಳೆಗೆ 'ರೆಡಿ.' ಅದನ್ನೇ ಈಗ ತಟ್ಟುತ್ತಿದ್ದೇನೆ' ಆಚಾರಿ ತಟ್ಟುವುದನ್ನು ನಿಲ್ಲಿಸದೇ ಹೇಳಿದ.

ಆಚೆಮನೆ ಎಮ್ಮೆಗೆ ಕೋಣನ ನೆನಪಾಯಿತೋ ಏನೋ? 'ಹಾರ್‍ರ್ರೋಂ' ಎಂದಿತು. ಆಚಾರಿ ತಟ್ಟುವುದೂ ನಿಂತಿತು.

ಎಮ್ಮೆ ಕೂಗುತ್ತಲೇ ಇತ್ತು, ಆಚಾರಿ ಎಣಿಸುತ್ತಲೇ ಇದ್ದ!

ಕೂಗು ನಿಲ್ಲಲು ಒಂದು ಕಾಗದದಲ್ಲಿ 7 ಎಂದು ಬರೆದಿಟ್ಟುಕೊಂಡ!

ನನಗಿದೊಂದೂ ಅರ್ಥವಾಗಲೇ ಇಲ್ಲ. ಆಚಾರಿ ಪುನಃ ತಟ್ಟಲು ತೊಡಗಿದ.

ನಾಲ್ಕು ಸೆಕುಂದ ಆಗಿರಲಿಲ್ಲ; ಎಮ್ಮೆ ಪುನಃ ಕೂಗತೊಡಗಿತು; ಆಚಾರಿ ಪುನಃ ಎಣಿಸಿದ.

ಈ ಸಲ 7 ಎಂಬುದನ್ನು ಹೊಡೆದು 5 ಎಂದು ಬರೆದಿಟ್ಟುಕೊಂಡ. ನನ್ನ ಕುತೂಹಲ ಮತ್ತಷ್ಟು ಹೆಚ್ಚಿತು. ಆಚಾರಿಯನ್ನೇ ಇದೇನೆಂದು ಕೇಳಿದೆ,

'ಅಲ್ಲ ಸ್ವಾಮಿ, ಈ ಎಮ್ಮೆ ಕೂಗಿದ 'ನಂಬ್ರ'ಕ್ಕೆ ಕಟ್ಟಿದರೆ ಸರಿಯಾಗಿ ಬರುತ್ತದೆ. ಬೆಳಗ್ಗೆ ಮೊದಲನೆಯ ಸಲ ಕೂಗಿದ ನಂಬ್ರ ಓಪಣಿಂಗ್, ಸಂಜೆ ಹೋಗುವಾಗ ಕೊನೆಯದಾಗಿ ಕೂಗಿದ ನಂಬ್ರ ಕುಳೋಸಿಂಗ್!'

'ಅಲ್ಲ ಆಚಾರಿ, ಸಂಜೆ ವರೆಗೆ ಎಮ್ಮೆ ಕೂಗುವುದೂ, ನೀನು ಎಣಿಸುವುದೂ ನಡೆದರೆ ಬಳೆ ನಾಳೆಗೆ ಆದೀತೇನಯ್ಯಾ'

'ಅದಕ್ಕೇನು ಸ್ವಾಮಿ, ರಾತ್ರಿಯಾದರೂ ನಿಮ್ಮ ಕೆಲಸ ಮುಗಿಸದೆ ಇರುತ್ತೇನೆಯೆ?'

'ಆಯಿತು, ಹೇಗಾದರೂ ನಾಳೆಗೆ ತಯಾರು ಮಾಡಿಕೊಡು ಮಾರಾಯಾ, ನಾಳೆ ಬೆಳಗ್ಗೆ ಕೊಡುತ್ತೀಯಲ್ಲಾ? ನಾಳೆ ಮನೆಗೆ ಹೋಗಬೇಕು ನೋಡು'.

'ಮತ್ತೆ ಹಾಗೆಲ್ಲಾ ಉಂಟೇ? ಆದರೆ ಈಗ ಒಂದು ರುಪಾಯಿ ಇದ್ದರೆ?...'

oo oo oo

ಈ ದಿನವೂ ಸೆಕೆ ತಡೆಯಲಾಗುವುದಿಲ್ಲ ಸೀಯಾಳ ಕುಡಿಯಬೇಕು ಕಿಸೆಯಲ್ಲಿ ಕೇವಲ ಒಂದೂವರೆ ಆಣೆಯಿವೆ. ಎಳನೀರಿಗೆ ಈಗ ಎರಡಾಣೆ ಹೇಳುತ್ತಾನೆ ನಾಗಪ್ಪ. ಅಲ್ಲ, ಸಾಮಾನಿಗೆ ಎಲ್ಲಾ ಬೆಲೆ ದಿನದಿಂದ ದಿನಕ್ಕೆ ಮಲೇರಿಯಾ ಜ್ವರದಂತೆ ಹೆಚ್ಚಾಗುತ್ತಲೇ ಇವೆಯಲ್ಲಾ ಮನುಷ್ಯನಿಗೆ ಮಾತ್ರ ಬೆಲೆ ಏರುವುದಿಲ್ಲವೊ? ಒಣ ಅಡಿಕೆಗೂ ಖಂಡಿಗೆ ಎಪ್ಪತ್ತು ರುಪಾಯಿ ಆಗಿವೆ. ನೆಲಗಡಲೆ ವ್ಯಾಪಾರಿಯೂ ಮಾಳಿಗೆ ಮನೆ ಕಟ್ಟಿಸಿದ್ದಾನೆ. ನನಗೂ ಒಂದು ಖಂಡಿ ಅಡಿಕೆ ಇರಬಾರದಿತ್ತೆ? ಅಲ್ಲ,

ನೆಲಗಡಲೆ ವ್ಯಾಪಾರವಾದರೂ ಮಾಡಲು ದೇವರು ಬುದ್ಧಿ ಕೊಡಬಾರ ದಿತ್ತೊ? ಎಲ್ಲದಕ್ಕೂ ಅದೃಷ್ಟ ಬೇಕು. ವಿದ್ಯೆವಿದ್ಯೆ ಎಂದರೆ ಯಾರು ಬೆಲೆ ಕೊಡುತ್ತಾರೆ? ಸರಸ್ವತಿಗೂ ಲಕ್ಷ್ಮಿಗೂ ಯಾವಾಗಲೂ ಕಾಳಗವೆ. ಹೌದು, ಅವರು ಅತ್ತೆ ಸೊಸೆಯರು ತಾನೆ. ಮೇಲಿನ ಲೋಕದ ಮಾ ದೇವಿಯರಲ್ಲೂ ಈ ಅತ್ತೆ ಸೊಸೆ ಕಾಳಗ ಇದ್ದರೆ, ನಮ್ಮ ಈ ಲೋಕದ ದೇ ವಿಯರನ್ನು ದೂರಿ ಏನು ಪ್ರಯೋಜನ? ಅಂತೂ ಬಾಯಾರಿಕೆಯೇನೋ ಬಹಳ ಆಗಿದೆ. ಒಂದು ತಣ್ಣಗಿನ ಸೋಡಾ ಆದರೂ ಈಗ ಕುಡಿದು ಬಿಡುವುದು.

'ಒಂದು ಸೋಡ ಕೊಡಯ್ಯ' ಸೋಡಾ ಅಂಗಡಿ ಆನಂದ ರಾಯ ನೊಡನೆ ಕೇಳಿದೆ. ಆನಂದರಾಯ ಒಂದು ಸೋಡಾ ಬಾಟ್ಲಿಯನ್ನು ಅಡ್ಡ ನೀಟಾ ಹಿಡಿದು ನೋಡುತ್ತಾ ಇದ್ದಾನೆ.

ಪುನಃ ಕೇಳಿದೆ 'ಒಂದು ಸೋಡಾ' ಅದೂ ಆತನಿಗೆ ಕೇಳಿಸಲೇ ಇಲ್ಲ. ಸೋಡಾ ಬಾಟ್ಲಿಯನ್ನು ಆನಂದರಾಯ ಎತ್ತಿ ಹಿಡಿದಿದ್ದಾನೆ. ಎಲ್ಲಿ ಇನ್ನು ನನ್ನ ತಲೆಗೆ ಒಡೆದು ಬಿಡುತ್ತಾನೋ ಎಂದು ಹೆದರಿ ಸ್ವಲ್ಪ ದೂರ ಸರಿದೆ.

ಬಾಟ್ಲಿಯನ್ನು ಎತ್ತಿಹಿಡಿದವನೇ ಎದ್ದು ನಿಂತು ಹೆಮ್ಮೆಯಿಂದ ನನ್ನ ಕಡೆ ನೋಡುತ್ತಾ 'ಮೂರು' ಎಂದ.

'ಮೂರು ಬೇಡ ಮಾರಾಯಾ, ಒಂದು ಸೋಡಾ ಕೊಡು' ಎಂದೆ. 'ನೋಡಿ ಸ್ವಾಮಿ, ಈ ಬಾಟ್ಲಿ ನೋಡಿ, ಇದನ್ನು ಅಡ್ಡ ಹಿಡಿದರೂ ನೀಟ ಹಿಡಿದರೂ ಮೂರು ನಂಬ್ರ ಕಾಣುವುದಿಲ್ಲವೆ? ಈ ದಿನ ನಂಬ್ರ ಮೂರು'.

'ಹಾಳಾಗಿ ಹೋಗಲಿ ನಿನ್ನ ನಂಬ್ರ; ಬಾಯಾರಿಕೆ ಆಗಿದೆ. ಒಂದು ಸೋಡಾ ಕೊಡಯ್ಯ'.

'ಓಹೋ, ನಿಮಗೆ ಸೋಡಾ ಬೇಕಾಗಿತ್ತೊ? ನೀವು ಆಗಲೇ ಕೇಳ ಬಾರದಿತ್ತೆ?'

oo oo oo

ಈ ತಲೆಕೆಟ್ಟ ಜನರ ನಡುವೆ ಹೆಚ್ಚು ಕಾಲ ಇದ್ದರೆ ಖಂಡಿತ

ವಾಗಿ ಹುಚ್ಚರ ಆಸ್ಪತ್ರೆಗೇ ಹೋಗಬೇಕು. ಇಂಥಾ ವಾತಾವರಣದಲ್ಲಿ 'ಗೋಳಾಟ'ದ ಸಂಪಾದಕರಿಗೆ ಸ್ಫೂರ್ತಿಯ ಲೇಖನವನ್ನಾದರೂ ಹೇಗೆ ಬರೆಯಲಿ? ಸ್ಫೂರ್ತಿಯನ್ನು ಅಂಗಡಿಯಿಂದ ಕೊಂಡುಕೊಳ್ಳಬಹುದೊ? ಅಥವಾ ಅದಕ್ಕಾಗಿ ಇನ್ನು ಅಂಗಡಿಗೆ ಹೋದರೆ, ಅಲ್ಲಿಯೂ ಇದೇ 'ನಂಬ್ರ'ದ ಸಂಭ್ರಮವೇ ನಡೆದರೆ?

ಅಂತೂ ನನ್ನಿಂದ ಈ ಸಲ ಲೇಖನ ಬರೆಯುವುದು ಖಂಡಿತ ಆಗುವುದಿಲ್ಲ.

'ಸ್ವಾಮೀ ಸಂಪಾದಕರೇ,

ನಿಮ್ಮ ಪತ್ರ ತಲಪಿತು. 'ಸದ್ಯದ ಪರಿಸ್ಥಿತಿ'ಯಲ್ಲಿ ನಿಮಗೆ ನನ್ನಿಂದ ಲೇಖನ ಬರೆದು ಕಳುಹಿಸಲಾಗುವುದಿಲ್ಲವೆಂಬ ಬಗ್ಗೆ ಕ್ಷಮಿಸಬೇಕು. ಮುಂದೆ ಒಳ್ಳೆಯ ಕಾಲ ಬಂದಾಗ ಖಂಡಿತ ಬರೆದು ಕಳುಹಿಸುತ್ತೇನೆ. ಆದರೆ ದಯಮಾಡಿ, ಮುಂದೆ ನೀವು ಲೇಖನ ಅಪೇಕ್ಷಿಸುವುದಾದರೆ, ಎರಡು ವಾರದ ಸಮಯವಾದರೂ ಕೊಡಬೇಕು; ಅದರೊಡನೆ ಲೇಖನ ಬರೆಯಲು ಸ್ವಲ್ಪ ಕಾಗದ, ಒಂದು ಬಾಟ್ಲಿ ಶಾಯಿ, ಒಂದು ಲೇಖನಿ, ಪತ್ರ ವ್ಯವಹಾರಕ್ಕಾಗಿ ಅಂಚೇ ಚೀಟು ಇಷ್ಟನ್ನು ಕಳುಹಿಸಲು ದಯಮಾಡಿ ಮರೆಯಬೇಡಿ.

ಇತಿ ನಿಮ್ಮ

ಕ್ಷೆ.'

'ಗೋಳಾಟ'ದ ಸಂಪಾದಕರಿಂದ ಮರು ಟಪ್ಪಾಲಿಗೇ ಪತ್ರ ಬಂತು.

'ಮಹಾಶಯರೇ,

ಸದ್ಯ ನಮಗೆ ನಾವು ಹಾರೈಸಿದಂತೆ ನಿಮ್ಮಂಥಾ ಹೆಸರಾಂತ ಸಾಹಿತಿಗಳಿಂದ ಲೇಖನ ಬರಲಿಲ್ಲ ಮಾತ್ರವಲ್ಲ, ಮುಖ್ಯವಾಗಿ ಪ್ರಿಂಟು ಮಾಡುವರೆ ಕಾಗದವೇ ಸಿಗಲಿಲ್ಲ. ಹಾಗಾಗಿ ಮುಂದೆ 'ಒಳ್ಳೆಯ' ಕಾಲಬಂದಾಗ ನಿಮ್ಮ ಉದಾರ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಅಮೂಲ್ಯ ಸ್ಫೂರ್ತಿಮಯ ಲೇಖನವನ್ನು ಕೇಳುತ್ತೇವೆ.

ಇತಿ ಸಂಪಾದ್,

'ಗೋಳಾಟ'.'

ಪುನರ್ಮಿಲನ

'ನಿನಗೆ ಊಟಹಾಕುವುದಿಲ್ಲ. ಸೋಮಾರಿಯಾಗಿ ನೀನು ಉಣ್ಣಲು ಸಾಧ್ಯವಿಲ್ಲ' ಆತನ ಚಿಕ್ಕಪ್ಪ ಹೀಗೆಂದು ಹೇಳಿ ಆತನನ್ನು ಬೈದು ಹೊಡೆದು ಹೊರಹಾಕಿದ.

'ಸೋಮಾರಿಯಾಗಿ ನೀನು ಉಣ್ಣಲು ಸಾಧ್ಯವಿಲ್ಲ' ದಾರಿಹಿಡಿದು ಹೋಗುತ್ತಿದ್ದಂತೆ ಈ ಮಾತು ಆತನ ಕಿವಿಯಲ್ಲಿ ನಿರಂತರ ಧ್ವನಿಸುತಿತ್ತು.

'ಬೀಡಿ ಬೀಡಾ ಸಿಗರೇಟ್ ಚಾಕಲೆಟ್'; ಗಟ್ಟಿಯಾಗಿ ಕೂಗಲು ಅವನಿಗೆ ಆಗಲಿಲ್ಲ. ಕಂಠವು ಬಿಗಿದು ಬರುತಿತ್ತು.

ಹುಡುಗರ ಗುಂಪೊಂದು ಆಕಡೆ ಬಂದಿತು. ಹರಕು ಕೊಳಕು ಅಂಗಿಹಾಕಿಕೊಂಡು, ಕೈಯ್ಯಲ್ಲಿ ಬೀಡಿ ಬೀಡಾ ಹಿಡಕೊಂಡು ತಿರುಗಾಡುತ್ತಿದ್ದ ಇವನನ್ನು ನೋಡಿ ಅವರು ಚೇಷ್ಟೆಮಾಡಿದರು

'ಬೀಡಿ ಬೀಡಾ, ಯಾರಿಗೆ ನಿನ್ನ ಬೀಡಿ ಬೀಡಾ ಬೇಕೊ?' ಅವರು ಒಬ್ಬರನ್ನೊಬ್ಬರು ನೋಡಿ ಗಟ್ಟಿಯಾಗಿ ನಕ್ಕರು

'ಹೋ, ನೀನು ಈಗ ಬೀಡಿಬೀಡಾ ಮಾರುತ್ತೀಯೊ? ನನಗೆ ಮೊದಲೇ ಗೊತ್ತಿತ್ತು, ನೀನು ಹೆಣಹೊರಲಿಕ್ಕೂ ಆಗದವ ಎಂದು' ಪುನಃ ಹುಡುಗರು ಗಟ್ಟಿಯಾಗಿ ನಕ್ಕರು.

ಅವರ ಗುಂಪು ಹೀಗೆ ಮುಂದೆ ಸಾಗಿತು.

ತಂದೆ ಬದುಕಿದ್ದಾಗ ಆತನೂ ಅವರೊಡನೆ ಶಾಲೆಗೆ ಹೋಗುತಿದ್ದ. ತರಗತಿಯಲ್ಲಿ ಎಲ್ಲರನ್ನೂ ಮೀರಿಸಿ ಉಪಾಧ್ಯಾಯರ ಮೆಚ್ಚಿಗೆ ಪಡೆದಿದ್ದ. ಅದೆಲ್ಲಾ ತಂದೆ ಜೀವಿಸಿದ್ದಾಗ. ಇಂದು ಆತನ ಈ ಪರಿಸ್ಥಿತಿಯನ್ನು ಕಂಡು ಅವನ ಸಹಪಾಠಿಗಳು ಚೇಷ್ಟೆಮಾಡಿದರು. ಈ ನಿಷ್ಠುರ ಲೋಕದಲ್ಲಿ ತಂದೆ ತನ್ನನ್ನು ಹೀಗೆ ಏಕಾಂಗಿಯಾಗಿ ಬಿಟ್ಟುಹೋಗಬೇಕೆ? ಆತನ ಬಾಡಿದ್ದ ಕೆನ್ನೆಯ ಮೇಲೆ ಅವನಿಗೆ ತಿಳಿಯದಂತೆಯೇ ನೀರಹನಿಗಳು ಉದುರಿದವು. ಕೂಡಲೇ ಅದನ್ನು ಕೈಯಿಂದ ಒರಸಿಕೊಂಡ.

ಒಬ್ಬ ನಡುಹರೆಯದ ಶ್ರೀಮಂತನು ತನ್ನ ಚಿಕ್ಕ ಮಗಳೊಡನೆ ಆ ದಾರಿಯಾಗಿ ಬರುತ್ತಿದ್ದ.

'ಬೀಡಾ, ಬೀಡೀ, ಚಾಕಲೇಟ್' ಹುಡುಗ ಕೂಗಲು ತೊಡಗಿದ. ಹುಡುಗಿ ಅಲ್ಲಿಯೇ ನಿಂತಳು. 'ಅಪ್ಪಾ, ನನಗೆ ಚಾಕಲೇಟ್' ಹುಡುಗನ ಕಡೆ ಕೈತೋರಿಸಿ ಆಕೆ ಕೇಳಿದಳು. ಚೊಕಲೆಟ್, ನೆಲಗಡಲೆ, ಹುರಿಗಡಲೆ ಎಲ್ಲವನ್ನೂ ಸ್ವಲ್ಪಸ್ವಲ್ಪ ತೆಗೆದುಕೊಂಡು ಹುಡುಗಿ ತನ್ನ ಕೈತುಂಬಿಸಿಕೊಂಡಳು. ಅವಳ ತಂದೆ ಅದರ ಕ್ರಯವನ್ನು ಕೊಟ್ಟ.

'ಅಪ್ಪಾ, ಅದು ಎಷ್ಟು ಚನ್ನಾಗಿ ಹೊಳೆಯುತ್ತದೆ. ನನಗೆ ಅದು ಬೇಕು' ಹುಡುಗನು ಬೆರಳಲ್ಲಿ ಇಟ್ಟಿದ್ದ ಗಾಜಿನ ಕಲ್ಲಿನಿಂದ ಹೊಳೆಯುವ ಹಿತ್ತಾಳಿ ಉಂಗುರದ ಕಡೆಗೆ ಹುಡುಗಿ ಕೈತೋರಿಸಿ ಹೇಳಿದಳು.

'ಏನು ಆ ಹಿತ್ತಾಳಿ ಉಂಗುರವೊ, ಕೆಟ್ಟ ಹುಡುಗಿ, ನಿನಗೆ ಅದು ಬೇಡ' ತಂದೆ ಗದರಿಸಿದ. ಆದರೆ ಆಕೆ ಸುಮ್ಮಗಾಗಲಿಲ್ಲ. ಹುಡುಗಿಯ ವಿಶಾಲವಾದ ಕಣ್ಣುಗಳಿಂದ ಕಂಬನಿಗಳುದುರಿದವು. ಇದನ್ನು ನೋಡಿ ಹುಡುಗನಿಗೆ ಮರುಕವಾಯಿತು. 'ಇದು ಅವಳ ಹತ್ತಿರ ಇರಲಿ. ಮೊನ್ನೆ ಜಾತ್ರೆಯಲ್ಲಿ ತೆಗೆದುಕೊಂಡೆ. ಬರೀ ಒಂದಾಣೆ ಕ್ರಯ. ಆಕೆ ಅಳುತ್ತಾಳೆ' ಹುಡುಗ ಹೇಳಿದ. ತಾಯಿಯಿಲ್ಲದ ಹುಡುಗಿಯನ್ನು ಕೂಗಿಸುವುದು ಬೇಡವೆಂದು ಎರಡಾಣೆ ಕೊಟ್ಟು ಪಡಕೊಂಡು ತಂದೆ ಮಗಳನ್ನು ಸಮಾಧಾನಪಡಿಸಿದ.

ಉಂಗುರವನ್ನು ಹುಡುಗಿ ಕೈಗೆ ಸಿಕ್ಕಿಸಿದಳು. ಅದು ಅವಳ ಬೆರಳಿಗೆ ದೊಡ್ಡದಾಗುತಿತ್ತು. ಆದರೂ ಹುಡುಗಿ ಸಂತೋಷದಿಂದ ನೆಗೆನೆಗೆದು ತಂದೆಯೊಡನೆ ಹೊರಟುಹೋದಳು. ಕಣ್ಮರೆಯಾಗುವ ವರೆಗೂ ಹುಡುಗನು ಅವರನ್ನೇ ನೋಡುತ್ತಿದ್ದ. ಸುಖಿಯಾಗಿರುವ ಆ ಹುಡುಗಿಯ ಸಲುವಾಗಿ ಅವನು ಮತ್ಸರಪಡಲಿಲ್ಲ. ಆದರೆ ಆತನಿಗೆ ತನ್ನ ತಂದೆಯೂ ಈಗ ಬದುಕಿರಬೇಕಾಗಿತ್ತು ಎಂದು ಅನಿಸಿತು.

ಹಲವು ಬಾರಿ ಹೀಗೆ ಆ ಹುಡುಗಿಯನ್ನು ಆತ ನೋಡುತ್ತಿದ್ದ; ನೋಡಿದಾಗ ಇಬ್ಬರೂ ನಗುಮುಖರಾಗುತ್ತಿದ್ದರು. ಕೊನೆಗೆ ಒಂದು

ವಾರ ಆತನು ಆಕೆಯನ್ನು ಕಾಣಲಿಲ್ಲ. ತನ್ನನ್ನು ಆಕೆ ಮರೆತಿರಬಹುದೆಂದು ಆತ ವಿಚಾರಿಸಿದ. ದಿನಗಳು, ವಾರಗಳು ಕ್ರಮದಂತೆ ಉರುಳಿದವು.

oo oo oo

ಸಂತೋಷ ಸಂಕಷ್ಟ ನಗು ಕಂಬನಿಗಳಿಂದ ತುಂಬಿಕೊಂಡೇ ಹನ್ನೆರಡು ವರ್ಷಗಳು ದಾಟಿದವು.

ಒಂದು ಭಾನುವಾರ. ಸೂರ್ಯನು ಉದಿಸಿಬಂದಿದ್ದನು. ಮಾಳಿಗೆಯ ಕಿಟಿಕಿಯನ್ನು ತೆರೆದು ಓರ್ವ ಸುಂದರ ತರುಣಿಯು ಒಂದು ಮನೆಯಿಂದ ಹೊರಗೆ ಇಣಕಿ ನೋಡುತ್ತಿದ್ದಳು. ರಾತ್ರಿ ಚನ್ನಾಗಿ ಮಳೆ ಬಂದದ್ದರಿಂದ ಮಾರ್ಗವೂ ಸ್ವಚ್ಛವಾಗಿತ್ತು. ಜನರು ಅತ್ತಿತ್ತ ಚಲಿಸುತ್ತಿದ್ದರು.

ಒಮ್ಮೆ ಆಕೆ ನಿಡಿದಾಗಿ ಒಂದು ಉಸಿರೆಳೆದಳು.

ಎರಡು ವರ್ಷಗಳ ಹಿಂದೆ ಆಕೆಯ ತಂದೆ ತೀರಿಹೋಗಿದ್ದ. ಕಾಲೇಜ್ ವಿದ್ಯಾಭ್ಯಾಸ ಮಾಡುತ್ತಿದ್ದ ಆಕೆ ತನ್ನ ಓದನ್ನು ಅಲ್ಲಿಯೇ ನಿಲ್ಲಿಸಬೇಕಾಯಿತು. ಹಿತಚಿಂತಕರೊಬ್ಬರ ಸಹಾಯದಿಂದ ಒಂದು ಹುಡುಗಿಯರ ಶಾಲೆಯಲ್ಲಿ ಅಧ್ಯಾಪಕಿಯಾಗಿ ಸೇರಿದಳು.

ಆಕೆ ಸುಖವಾಗಿರುವಳೆಂದು ಜನರು ಹೇಳಬಹುದಿತ್ತು. ಆದರೆ ಆಕೆಯ ಸಂಕಷ್ಟ ಅವಳಿಗೇ ಗೊತ್ತು. ಚಿಕ್ಕಂದಿನಲ್ಲೇ ತಾಯಿ ತೀರಿಹೋಗಿದ್ದಳು. ತಂದೆಯೂ ಆಗ ಮಡಿದುಹೋದ. ತನ್ನವರೆಂಬವರು ಈಗ ಆಕೆಗೆ ಯಾರೂ ಇಲ್ಲ. ಅವಳ ಹೃದಯವು ಈಗ ಪ್ರೇಮದ ಒಡನಾಟವನ್ನು ಹಾತೊರೆಯುತಿತ್ತು.

ಏನೋ ದೂರದ ದಿಗಂತದಲ್ಲಿ ಮಸಕುಮಸಕಾದ ಕಲ್ಪನೆಗಳ ಛಾಯೆಯನ್ನು ಅವಳು ಕಾಣುವಳು. ಏನೇನೋ ವಿಚಾರಗಳು ಬಂದವು. ಕಡೆಗೆ ಹೊರಗಡೆಯಿಂದ ತನ್ನ ದೃಷ್ಟಿಯನ್ನು ಹಿಂತೆಗೆದಳು. ಹಾಸಿಗೆಯ ಬಳಿಯಿಟ್ಟಿದ್ದ ಕೊಡೆಯ ಕಡೆಗೆ ಅವಳ ದೃಷ್ಟಿಹರಿಯಿತು.

'ಅವನು ಒಳ್ಳೆಯ ದಯಾಳು ಗೃಹಸ್ಥ. ಅಕಸ್ಮತ್ತಾಗಿ ಮಳೆ ಬೀಳಲು, ತನ್ನ ಕೊಡೆಯನ್ನೇ ನನಗೆ ಕೊಟ್ಟು ಉಪಕಾರಮಾಡಿದ. ಆತನ ಹೆಸರೇನೋ ನಾನು ಕೇಳಲೇ ಇಲ್ಲ. ನಾನು ನನ್ನ ವಿಳಾಸ ತಿಳಿಸಿದ್ದೇನೆ. ಬಹುಶಃ ಕೊಡೆಯ ಸಲುವಾಗಿ ಬಂದರೂ ಬರಬಹುದು' ತನ್ನಲ್ಲಿಯೇ ಹೀಗೆ ಯೋಚಿಸಿಕೊಂಡಳು.

ಭಾನುವಾರವಾದರೂ ಆಕೆಗೆ ವಿಶ್ರಾಂತಿಯಿರಲಿಲ್ಲ. ರಾಶಿರಾಶಿ ಬಿದ್ದಿದ್ದ 'ಅಭ್ಯಾಸ ಪುಸ್ತಕ'ಗಳನ್ನು ತಿದ್ದಬೇಕು ಒಂದೆರಡು ಪುಸ್ತಕಗಳನ್ನು ತಿದ್ದುವಲ್ಲಿಯೇ ತಲೆನೋವು ಹಿಡಿಯಿತು.

'ಅಮ್ಮಾ' ಹೊರಗಿನಿಂದ ಆಳು ಕರೆದ. ಬಾಗಿಲು ತೆರೆಯಲು ಒಂದು ಚೀಟಿಯನ್ನು ಆತನು ಆಕೆಯ ಕೈಗಿತ್ತನು.

ಒಂದು ಬಿಳಿಯ ಕಾರ್ಡು. ಅದರಲ್ಲಿ ಡಾ। ಪ್ರಭಾಕರ ರಾವ್' ಎಂ. ಬಿ. ಬಿ. ಎಸ್. ಎಂದು ಬರೆದಿತ್ತು.

'ಕರಿಯಾ, ನನ್ನನ್ನೇ ನೋಡಬೇಕೆಂದು ಅವರು ಹೇಳಿದರೇ, ಅಥವಾ ಮನೆ ತಪ್ಪಿರಲಿಕ್ಕಿಲ್ಲವಲ್ಲಾ! ನನಗೆ ಅವರ ಪರಿಚಯವೇ ಇಲ್ಲವಲ್ಲಾ' ಉದ್ವೇಗದಿಂದ ಆಳಿನೊಡನೆ ಹೇಳಿದಳು.

'ಹೌದಮ್ಮ, ರತ್ನ ದೇವಿಯವರನ್ನು ಕಾಣಬೇಕೆಂದು ನಿಮ್ಮ ಹೆಸರೆತ್ತಿಯೇ ಹೇಳಿದರು' ಆಳು ಉತ್ತರವಿತ್ತ.

'ಹಾಗಾದರೆ ಚಾವಡಿಗೆ ಬರಹೇಳು, ಒಂದೇ ನಿಮಿಷದಲ್ಲಿ ನಾನು ಅಲ್ಲಿಗೆ ಬರುತ್ತೇನೆ'

ಒಮ್ಮೆ ಆಕೆ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡಳು. ಮೆಲ್ಲನಿಯಿಂದ ನಯವಾದ ಸ್ವರದಲ್ಲಿ ಆಲಾಪನೆಮಾಡುತ್ತಾ ಮೆಟ್ಟಲಿಳಿದು ಬಂದಳು. ಹೊಸಬನನ್ನು ಕಂಡು ಮಾತನಾಡಬೇಕೆಂಬ ವಿಷಯ ತುಸು ನಾಚಿಕೊಂಡಿದ್ದಳು. ಸೀರೆಯ ಸೆರಗನ್ನು ಸರಿಮಾಡಿಕೊಳ್ಳುತ್ತಾ ಚಾವಡಿಗೆ ಬಂದಳು. ಆತ ಮಂಚದ ಬಳಿ ನೆಲದಲ್ಲೇ ಬಂದು ನಿಂತುಕೊಂಡಿದ್ದ.

'ನಮಸ್ತೆ' ಆತನೇ ಮೊದಲು ಹೇಳಿದ. 'ನಮಸ್ತೆ, ಕುಳಿತುಕೊಳ್ಳಿ' ರತ್ನ ಉತ್ತರವಿತ್ತಳು. ಇಬ್ಬರೂ ಕುಳಿತರು. ರತ್ನ ತನ್ನ ಮರೆನೋಟದಿಂದ ಆತನನ್ನು ಒಮ್ಮೆ ಚೆನ್ನಾಗಿ ನೋಡಿದಳು. ಒಳ್ಳೆಯ ಅಲಂಕಾರವಾಗಿ ಉಡಿಗೆ ತೊಟ್ಟುಕೊಂಡಿದ್ದ. ಸುಂದರನಾಗಿ ಲಕ್ಷಣವುಳ್ಳ ಯುವಕ. ಮೇಜಿನ ಮೇಲಿದ್ದ ಪತ್ರಿಕೆಯೊಂದರ ಪುಟವನ್ನು ನೋಡುತ್ತಾ ಇದ್ದ.

'ನಿಮಗೆ ನಾನು ಬಂದದ್ದು ಸ್ವಲ್ಪ ವಿಚಿತ್ರವಾಗಿ ಕಂಡಿರಬಹುದು. ಆದರೆ ನಾನು ಇದೇ ದಾರಿ ಹಿಡಿದು ಹೋಗುವವನು, ಕೊಡೆಯನ್ನು ತೆಗೆದುಕೊಂಡು ಹೋಗುವ ಎಂದು ಮನಸ್ಸಾಯಿತು, ಹಾಗೆ ಬಂದುಬಿಟ್ಟೆ....'

'ಹೋ, ನಿಮ್ಮ ಗುರುತು ಸಿಗಲೇ ಇಲ್ಲವಲ್ಲಾ, ಕ್ಷಮಿಸಿರಿ, ಆಗ ಕತ್ತಲೆಯಿದ್ದುದರಿಂದ ಗುರುತು ಆಗಲಿಲ್ಲ. ತಡಿಯಿರಿ. ಕೊಡೆಯನ್ನು ತಂದುಕೊಡುತ್ತೇನೆ' ಅವಸರವಾಗಿ ಮಾಳಿಗೆಗೆ ಆಕೆ ಓಡಿಹೋದಳು.

ಪ್ರಭಾಕರನು ಒಮ್ಮೆ ಸುತ್ತ ನೋಡಿದ. ಒಂದೆಡೆ ವರ್ಣಮಯವಾದ ಗ್ರೆಟಾಗಾರ್ಬೋಳ ಚಿತ್ರ. ಇನ್ನೊಂದೆಡೆ ದಂಡಿಯಾತ್ರೆಗೆ ಹೊರಟ ಮಹಾತ್ಮಾ ಗಾಂಧಿಯವರ ಚಿತ್ರ. 'ಒಳ್ಳೆಯ ರಸಿಕಳು' ಎಂದುಕೊಂಡು ಒಮ್ಮೆ ಮುಗುಳುನಕ್ಕ.

'ನಿಮ್ಮನ್ನು ಗುರುತು ಹಿಡಿಯದ್ದಕ್ಕೆ ಕ್ಷಮಿಸಬೇಕು. ಬಹಳ ಉಪಕಾರವಾಯಿತು' ರತ್ನ ಕೊಡೆಯನ್ನು ಆತನ ಕೈಗೆಕೊಟ್ಟು ಹೇಳಿದಳು.

'ಹಾಗೇನೂ ಇಲ್ಲ, ನಿಮ್ಮ ಪರಿಚಯವಾದುದಕ್ಕೆ ಸಂತೋಷವಾಯಿತು. ಬರುತ್ತೇನೆ, ನಮಸ್ತೆ' ಅವಸರವಸರವಾಗಿ ಅವನು ಅಲ್ಲಿಂದ ಹೊರಟುಹೋದ.

ಆ ದಿನ ರಾತ್ರಿ ಅವನಿಗೆ ನಿದ್ದೆ ಬರಲೇ ಇಲ್ಲ. ರತ್ನಳ ಸ್ವರ ಪರಿಚಯವಿದ್ದಂತೆ ತೋರಿತು. ಒಂದೊಂದೇ ಹಳೆಯ ನೆನಹುಗಳು ಬಂದವು. ತೀರಿಹೋದ ತಂದೆತಾಯಿಗಳ, ಕಾರುಣ್ಯದ ಚಿಕ್ಕಪ್ಪನ, ದಯಾಳು ವೈದ್ಯನ, ಆತನ ಕೃಪೆಯಿಂದ ವಿದ್ಯಾಭ್ಯಾಸ ಪಡೆದದ್ದು, ಆತನು ತೀರಿ

ಹೋಗಲು ಪೊತ್ತಿಲ್ಲವನ್ನೂ ತನ್ನ ಹೆಸರಿಗೇ ಮರಣಶಾಸನವಾದದ್ದು-ಲೋಕ ವೈಚಿತ್ರ್ಯವನ್ನೆಲ್ಲಾ ಎಣಿಸಿ ಆತ ಆಶ್ಚರ್ಯಗೊಂಡ.

ಕಡೆಗೆ ನಿದ್ದೆ ಬೀಳಬೇಕಾದರೆ ಮುಂಜಾವ ಆಯಿತು.

ಬುಧವಾರ ಸಂಜೆ ಶಾಲೆಬಿಟ್ಟು ರತ್ನ ಬಸ್ಸಿಗಾಗಿ ಕಾದು ನಿಂತಿದ್ದಳು. ಶಾಲೆಯ ಪಾಠದಿಂದ ನಿಜವಾಗಿ ಆಕೆಗೆ ಅಂದು ಬಹಳ ಆಯಾಸವಾಗಿತ್ತು. ಮಾರ್ಗದಲ್ಲಿ ಅಡ್ಡಹಾದುಹೋಗುತ್ತಿದ್ದ ಯುವಕನೊಬ್ಬನು ಆಕೆಯ ಮುಂದೆ ನಿಂತು 'ನಮಸ್ತೆ' ಎಂದ. ರತ್ನ ಅಷ್ಟು ಆಯಾಸಗೊಂಡಿದ್ದರೂ ಡಾ। ಪ್ರಭಾಕರರಾಯನನ್ನು ನಗುತ್ತಾ ನೋಡಿ ಪ್ರತಿವಂದನೆಮಾಡಿದಳು.

'ಹೋ, ನೀವು ಬಹಳ ಆಯಾಸಗೊಂಡಂತಿದೆ' ಆತ ನಗುತ್ತಾ ಕೇಳಿದ 'ನನ್ನಿಂದ ನಿಮಗೇನಾದರೂ ಸಹಾಯ ಆದೀತೆ?'

'ಥೇಂಕ್ಸ್, ನೀವು ಬಹಳ ದಯಾಳುಗಳು. ಮನೆಗೆ ಹೋದ ಕೂಡಲೇ ನನ್ನ ಆಯಾಸವೆಲ್ಲಾ ಪರಿಹಾರವಾಗುತ್ತದೆ' ಆಕೆ ಉತ್ತರವಿತ್ತಳು.

'ಇಷ್ಟವಿದ್ದರೆ ನಿಮ್ಮನ್ನು ಮನೆವರೆಗೆ ನಾನು ಬಿಟ್ಟುಬರಬಹುದು; ನಾನು ಒಬ್ಬ ಡಾಕ್ಟರ್ ಎಂದು ನಿಮಗೆ ಗೊತ್ತಿದೆಯಷ್ಟೆ?'

ರತ್ನ ಒಪ್ಪಿದಳು. ಇಬ್ಬರೂ ಮಾತನಾಡುತ್ತಾ ಮುಂತೆರಳಿದರು. ಆಕೆಯನ್ನು ಮನೆವರೆಗೆ ಮುಟ್ಟಿಸಿ ಪ್ರಭಾಕರನು ಹಿಂತೆರಳುವಾಗ, ರತ್ನ ಬಹಳ ಆತ್ಮೀಯತೆಯಿಂದ 'ನೀವು ಬಹಳ ಉಪಕಾರಮಾಡಿದಿರಿ' ಎಂದಳು. ಚಂಚಲದೃಷ್ಟಿಗಳು ಇಬ್ಬರನ್ನೂ ಒಮ್ಮೆ ಎದೆಗೆಡಿಸಿದವು.

ದಿನಗಳು ದಾಟಿದಂತೆ ಪರಿಚಯ ಬೆಳೆಯುತ್ತಾ ಬಂತು. ಪ್ರೇಮವು ಅವರ ಹೃದಯಗಳನ್ನು ಸಮೀಪ ಸಮೀಪ ಸೆಳೆಯುತಿತ್ತು.

ಒಂದು ಭಾನುವಾರ ಸಂಜೆ. ರತ್ನ ಬೇಸರದಿಂದ ಆರಾಮ ಕುರ್ಚಿಗೆ ಒರಗಿ ಕುಳಿತಿದ್ದಳು. ಒಂದು ಕಡೆ ಗೀತಾಂಜಲಿ ಪುಸ್ತಕ; ಇನ್ನೊಂದು ಕಡೆ ತಂದೆಯ ಭಾವಚಿತ್ರ. ಕೈಯಲ್ಲಿ ಒಂದು ಪೆನ್ಸಿಲನ್ನು ಎತ್ತಿಕೊಂಡು ಉದ್ದೇಶವಿಲ್ಲದೆ ತಿರುಗಿಸುತ್ತಾ ಇದ್ದಳು.

ಮೇಜಿನ ಮೂಲೆಯಲ್ಲಿ ಬಿದ್ದಿದ್ದ ಒಂದು ಹಿತ್ತಾಳೆ ಉಂಗುರದ ಕಡೆಗೆ ಅವಳ ದೃಷ್ಟಿ ಹರಿಯಿತು. ತೆಗೆದು ಬೆರಳಿಗೆ ಹಾಕಿನೋಡಿದರೆ ಚೆಲುವಾಗಿ ಒಪ್ಪುತಿತ್ತು. ಬರಿಯ ಹಿತ್ತಾಳೆ ಉಂಗುರ; ಬೆರಳಿಗೆ ಎಷ್ಟು ಸರಿಯಾಗಿ ಒಪ್ಪುತ್ತದೆ. 'ಆದರೆ ಪ್ರಭಾಕರನು ಈ ಹಿತ್ತಾಳೆ ಉಂಗುರ ವನ್ನು ತನ್ನ ಬೆರಳಲ್ಲಿ ಕಂಡರೆ?' ಒಮ್ಮೆ ಬೆರಳಿಂದ ತೆಗೆದಳು; 'ಕಂಡ ರೇನಂತೆ?' ಪುನಃ ಬೆರಳಿಗೆ ಹಾಕಿಕೊಂಡಳು.

ಹೊರಗೆ ಬಾಗಿಲು ತಟ್ಟಿದ ಶಬ್ದವಾಯಿತು. ಥಕ್ಕನೇ ಎದ್ದವಳು ಕನ್ನಡಿಯ ಮುಂದೆ ಹೋಗಿ ಮುಖವನ್ನೂ ಮುಂಗುರುಳನ್ನೂ ಉಟ್ಟ ಸೀರೆ ಯನ್ನೂ ಒಮ್ಮೆ ತಿದ್ದಿ ಸರಿಮಾಡಿಕೊಂಡಳು.

ಬಂದವನು ಪ್ರಭಾಕರನೆಂದು ಅವಳಿಗೆ ಚನ್ನಾಗಿ ಗೊತ್ತು.

'ಒಳಗೆ ಬನ್ನಿ, ಏನು, ಅಪ್ಪಣೆ ಆಗಬೇಕೆ?' ರತ್ನ ಒಯ್ಯಾರದಿಂದ ಕೇಳಿದಳು.

ಪ್ರಭಾಕರನು ಮುಗುಳುನಗುತ್ತಾ ಒಳಬಂದನು. ಇಬ್ಬರೂ ಎದುರೆದುರಾಗಿ ಕುಳಿತುಕೊಂಡರು. ಇಷ್ಟರಲ್ಲಿ ಸೇವಕನು ಚಾ ತಂದಿರಿ ಸಿದ. ಇಬ್ಬರೂ ನಗುತ್ತಾ ಮಾತನಾಡುತ್ತಾ ಚಾ ಕುಡಿದರು.

'ನಿಮಗೆ ಹೀಗೆ ಏಕಾಂಗಿಯಾಗಿಯೇ ಇರುವುದು ಬಹಳ ಬೇಸರ ಎನಿಸಿರಬೇಕು' ಆತ ಕೇಳಿದ.

'ಹೌದು, ನಿಜವಾಗಿಯೂ' ಬೆರಳ ಉಂಗುರವನ್ನೊಮ್ಮೆ ತಿರುಗಿಸಿ ಕೊರಳು ಕೊಂಕಿಸುತ್ತಾ ಆಕೆ ಹೇಳಿದಳು.

'ನಿಮಗೆ ಈ ಉಂಗುರ ಹೇಗೆ ಸಿಕ್ಕಿತು?' ಸಂಭ್ರಮದಿಂದ ಆಕೆಯ ಕೈಹಿಡಿದು ಆತ ಕೇಳಿದ. ಅವಳ ಮೈ ರೋಮಾಂಚನಗೊಂಡಿತು.

'ಚಿಕ್ಕದಿರುವಾಗ ಒಬ್ಬ ಚಾಕಲೇಟ್ ಹುಡುಗನಿಂದ..............' ಆಕೆ ಮೆಲ್ಲಮೆಲ್ಲನೆ ಮಾತನಾಡಿದಳು.

ಪ್ರಭಾಕರನು ಈಗ ಸ್ವಪ್ನಲೋಕದಿಂದ ಎಚ್ಚತ್ತನು. ರತ್ನಳ ಕೈಯನ್ನು ಮೆಲ್ಲನೆ ಬಿಟ್ಟು ತನ್ನ ವಿಷಯವನ್ನು ಒಂದೊಂದೇ ಹೇಳ ತೊಡಗಿದ.

'......ಆ ಸಣ್ಣ ಹುಡುಗಿಯೇ, ಆ ಚಾಕಲೆಟ್ ಹುಡುಗನಿಗೆ ಮುಂದೆ ತಾನೊಬ್ಬ ಯೋಗ್ಯ ಮನುಷ್ಯನಾಗಬೇಕೆಂಬ ವಿಚಾರ ಹುಟ್ಟಿಸಿದಳು. ಆ ಮೇಲೆ ಆ ಹುಡುಗಿಯನ್ನು ಕಾಣಬೇಕೆಂದು ಆತ ಬಹಳ ಹುಡುಕಾಡಿದ. ....' ಪ್ರಭಾಕರ ಹೇಳುತ್ತಾ ಇದ್ದ.

'ಏನು ನೀವೆ?' ರತ್ನ ಆಶ್ಚರ್ಯ ಆನಂದಗಳಿಂದ ಕೇಳಿದಳು.

'ಹೌದು ರತ್ನ' ಆತನ ಸ್ವರದಲ್ಲಿ ಒಂದು ಉದ್ವೇಗ ಮತ್ತು ಮೋಹಕತೆಯಿತ್ತು. ಆಕೆಯ ಹೆಸರೆತ್ತಿ ಇದೇ ಮೊದಲನೆಯಬಾರಿ ಆತ ಕರೆದಿದ್ದ.

ಪ್ರಭಾಕರನು ಮೆಲ್ಲನೆ ಆಕೆಯ ಕೈಹಿಡಿದು ಪುನಃ 'ರತ್ನಾ' ಎಂದ. ರತ್ನ ತಲೆಬಾಗಿಸಿದಳು. ಮುಗುಳುನಗು, ನಾಚಿಕೆಯಿಂದ ಆಕೆಯ ಮುಖ ಕೆಂಪಡರಿತು.

ಕಳವಳದಲ್ಲಿ ಚಳವಳ

ಉದಿಸಿ ಬಂದ ಹೊತ್ತಿನಿಂದ ಎಡೆಬಿಡದೆ ಹನ್ನೆರಡು ತಾಸುಗಳ ತನಕವೂ-ಪೂರ್ವದಿಂದ ಪಶ್ಚಿಮದ ವರೆಗೆ–ಅಲೆದಾಡಿ, ಸುಟ್ಟು ಬೆಂಡಾಗಿದ್ದ ಸೂರ್ಯನು, ಕಡೆಗೊಮ್ಮೆ ಮೈಯ್ಯ ರಕ್ತವೆಲ್ಲವನ್ನೂ ಭೂಮಿಗೆ ಚೆಲ್ಲಿ, ದಿಗಂತದ ಸಂಧಿಯಲ್ಲಿ ತೂಗಾಡುತ್ತಿದ್ದ. ಬೆಳಗು ಮುಂಜಾವಕ್ಕೆದ್ದು ಒಂದಿಷ್ಟು ತಂಗಳನ್ನತಿಂದು ತಣ್ಣೀರ್ಕುಡಿದು ಮನೆಬಿಟ್ಟು ಹೊರಟಿದ್ದ ಆ ಜನರು, ಕಾರ್ಖಾನೆಯಲ್ಲಿ ದಿನವಿಡೀ ವಿಶ್ರಾಂತಿಯಿಲ್ಲದೆ ಬೆವರು ಸುರಿಸಿಯೂ ನೆತ್ತರು ಆರಿಸಿಯೂ ಇದುವರೆಗೆ ದುಡಿದು, ಇಷ್ಟು ಹೊತ್ತಿಗೆ, ತಮ್ಮ ಕಂಗಾಲಾದ ಶರೀರಗಳನ್ನೆಳೆಯುತ್ತಾ, ಮನೆಗಳ ಕಡೆಗೆ-ಮೂರೋ ಆರೋ ಮೈಲು ದೂರಗಳ ಹರಕು ಗುಡಿಸಲುಗಳ ಕಡೆಗೆ-ಸಾಗುತ್ತಿದ್ದರು. ದುಡಿತದ ಆಯಾಸದೊಡನೆ, ಹಸಿವಿನ ಬೆಂಕಿಯೊಡನೆ, ಎಷ್ಟೋ ಜನರ ವಿಚಾರಗಳಲ್ಲಿ ತಮ್ಮ ಮನೆಯ ಮಂದಿಯ ರೋಗ--ಕೂಗು--ಸಂಕಟ--ಸಂತಾಪ ಸಾವಿರಗಳು ತುಂಬಿ ಕಳವಳ ಹೆಚ್ಚಿಸುತ್ತಿದ್ದವು. ಇಂತಹ ಹಲವು ಮಂದಿಯಲ್ಲಿ, ತಮ್ಮ ನಲ್ಲನಲ್ಲೆಯರ, ಮುದ್ದು ಮಕ್ಕಳ, ಪ್ರಿಯ ಸಮಾಗಮದ ಸವಿಗನಸಿನ ಸುಖದಲ್ಲಿ ತೇಲಾಡುತ್ತಾ ಹೊರಟವರೂ ಕೆಲವರು ಇಲ್ಲದೆ ಇರಲಿಲ್ಲ.

ಬೋರ ಹರೆಯದ ಜವ್ವನಿಗ. ಕಪ್ಪಗಿದ್ದರೂ ತೇಜೋಮಯವಾದ ಗಾತ್ರ; ವಿಶಾಲವಾದ ಉಬ್ಬಿದ ಎದೆ; ಅಗಲವಾದ ಹಣೆ; ದಷ್ಟಪುಷ್ಟ ಕೈಕಾಲುಗಳು; ತುಂಬಿದ ಬೊಗಸೆ ಕಣ್ಣುಗಳು; ಒಟ್ಟಿನಿಂದ ಬೋರ ಕಗ್ಗಲ್ಲಿಗೆ ಸಂದುಕೊಡಿಸುವ ಶರೀರದ ಮನುಷ್ಯ. ಕಾರ್ಖಾನೆಯಲ್ಲಿ ಕಟ್ಟಿಗೆ ಕಡಿಯುವ ಕೆಲಸ ಆತನದು ಬೆಳಗಿಂದ ಸಂಜೆಯ ವರೆಗೂ ಅದೇ ಗೈಮೆ. ಅದರಿಂದಾಗಿ ಆತನ ಭುಜ, ಕೈರಟ್ಟೆ, ಎದೆಗಳು ಮತ್ತಷ್ಟು ಉಬ್ಬಿಬಂದಿದ್ದವು. ಅಷ್ಟು ಕಠಿಣವಾದ ಕೆಲಸವನ್ನು ಎಲ್ಲರೂ ಮಾಡಲಾರರು. ಅದಾಗಿ ಆತನಿಗೆ ಸಾಕಷ್ಟು ಉತ್ಪನ್ನವೂ ಇತ್ತು. ದಿನಕ್ಕೆ

ಹನ್ನೆರಡಾಣೆಯ ದುಡಿತದಾಳು ಆತ. ಕಾರ್ಖಾನೆಯ ಕೂಲಿಗಾರರಲ್ಲಿ ಆತನೇ ಹೆಚ್ಚಿನ ಸಂಬಳದವ. ಅವನೊಬ್ಬನು ಮಾತ್ರ ಹೆಚ್ಚಿನ ಸಂಬಳ ಪಡೆಯುತ್ತಾನೆಂದು ಜತೆಯ ಕೂಲಿಗಾರರು ಹೊಟ್ಟೆಕಿಚ್ಚು ಮಾಡುತ್ತಿರ ಲಿಲ್ಲ. ಏಕೆಂದರೆ ದನಿ ಕೊಡುತ್ತಿದ್ದ ಹನ್ನೆರಡಾಣೆಯ ಕೂಲಿಗೆ ತಕ್ಕಷ್ಟು ದುಡಿಯುವ ದುಡಿತದಾಳು ಜೋರನಿದ್ದ.

ಜೋರ ಮದುವೆ ಮಾಡಿಕೊಂಡು ಎರಡು ವರ್ಷ ದಾಟಿತ್ತು. ಸುಬ್ಬಿ--ಜೋರನ ಹೆಂಡತಿ--ಒಂದು ಗಂಡು ಮಗುವನ್ನು ಹೆತ್ತಿದ್ದಳು. ಮಗುವಿಗೆ ಮೂರು ತಿಂಗಳ ಪ್ರಾಯ ತುಂಬಿತ್ತು. ಜೋರನ ಮನೆಯಿರು ವುದು ಕಾರ್ಖಾನೆಯಿಂದ ಮೂರು ಮೈಲು ದೂರದಲ್ಲಿ. ಎಂದಿನಂತೆ ಉತ್ಸಾಹದಿಂದಲೇ ಜೋರ ಕೆಲಸ ಬಿಟ್ಟು ಮನೆಯ ಕಡೆ ಹೊರಟಿದ್ದ. ಆತನಂತೆ ಗೆಲವಿನಿಂದ ಕಾರ್ಖಾನೆ ಬಿಟ್ಟು ಹೊರಡುವ ಕೂಲಿಗಾರರು ಅವರಲ್ಲಿ ಕೇವಲ ವಿರಳ ಮಂದಿ. ಜೋರನ ಹೃದಯದಲ್ಲಿ ನಲ್ಲೆಯ ನಲ್ನುಡಿ, ಮಗುವಿನ ಮುದ್ದು ಮುಖ, ಇವುಗಳ ಆನಂದಲಹರಿಯೇ ತುಂಬಿತ್ತು! ಜೋರ ಅದೇ ಗೆಲವಿನಿಂದ ಮನೆಯ ಕಡೆಗೆ ಹೊರಟಿದ್ದ... ....

ಕಾರ್ಖಾನೆಯ 'ಗೇಟು' ದಾಟಿ ಹತ್ತಡಿ ಮುಂದೆ ಬಂದರೆ ಅಲ್ಲೇ ಮಾರ್ಗದ ಪಕ್ಕದಲ್ಲಿ ಒಂದು ಸಣ್ಣ ಬಯಲಿದೆ. ಅಲ್ಲಿ ಆಗಲೇ ಕೆಲವು ಜನರು ಬಂದು ನೆರೆದಿದ್ದರು. 'ನೆತ್ತರು ಬಣ್ಣ ಪತಾಕೆ'ಯೊಂದು ಗಾಳಿ ಯಲ್ಲಿ ಹುಚ್ಚುಕಟ್ಟಿ ಹಾರಾಡುತಿತ್ತು. ಜನರ ಸಂದಣಿ ಮತ್ತೂ ಆ ಕಡೆ ಗುಂಪು ಸೇರುತಿತ್ತು. ಆ ಗುಂಪಿನ ಮಧ್ಯೆ-ನೆತ್ತರು ಬಣ್ಣದ ಪತಾಕೆಯ ಕೆಳಗಡೆ-ಎತ್ತರ ಪೀಠವೊಂದರ ಮೇಲೆ ನಿಂತುಕೊಂಡು, ಕೆದರಿದ ಕ್ರಾಪಿನ ನೀಟಾದ ದೇಹದ, ತೀವ್ರ ಸ್ವರದ ಯುವಕನೊಬ್ಬನು ಭಾಷಣಕೊಡು ತಿದ್ದ. ಆಕಾಶದೊಡನೆ ಮುಷ್ಟಿಯುದ್ಧಕ್ಕೆ ತೊಡಗಿದವನಂತೆ, ಗಾಳಿ ಯಲ್ಲಿ ಎತ್ತಿಹಿಡಿದ ಕೈಮುಷ್ಟಿಯನ್ನು ಅತ್ತಿತ್ತ ಅಲುಗಾಡಿಸುತ್ತಾ 'ಭೂತ ಹಿಡಿದವ'ನಂತೆ ಮೂದಲಿಸುತ್ತಿದ್ದ...............

"ಹೊಟ್ಟೆಗಿಲ್ಲದ, ಬಟ್ಟೆಗಿಲ್ಲದ ಬಡಜನರೇ, ಬಾಂಧವರೇ ಬನ್ನಿ—

ಸೋದರರೇ, ಮಜೂರರೇ ಒಂದಾಗಿರಿ, ಬನ್ನಿ" ಕೆದರಿದ ಕ್ರಾಪಿನ, ಆಕಾಶ ದೊಡನೆ ಮುಷ್ಟಿಯುದ್ಧಕ್ಕೆ ತೊಡಗಿದ್ದ ಯುವಕ ತೀವ್ರಸ್ವರದಲ್ಲಿ ಕೂಗಿ ಹೇಳುತ್ತಿದ್ದ. ಆತನ ಕೂಗಿಗೆ--ಕರಗಿ--ಉತ್ತರ ಕೊಡುವಂತೆ ಜನರ ಗುಂಪು ಮತ್ತೂ ಆತನ ಸುತ್ತು ಸೇರಿತು. ಭಾಷಣಕಾರನು ಕೂಲಿ ಗಾರರ ಸಂಕಷ್ಟ ಸಾವಿರಗಳನ್ನು ವಿಧವಿಧವಾಗಿ ವರ್ಣಿಸಿವರ್ಣಿಸಿ ಹೇಳು ತ್ತಿದ್ದ. ಆಹಾರ ಸಾಮಗ್ರಿಗಳಿಗೆ, ವಿಶೇಷವಾಗಿ ಅಕ್ಕಿಗೆ ಈಗ ಬೆಲೆಯೇರಿ ರುವುದರಿಂದ, ಬಡ ಕೂಲಿಗಾರರ ಹೊಟ್ಟೆಯ ಹಸಿವಿನ ಬೆಂಕಿ ಹೊತ್ತು ತ್ತಿದೆಯೆಂಬುದನ್ನು ಉಜ್ವಲವಾದ ಶೈಲಿಯಲ್ಲಿ ವರ್ಣಿಸುತ್ತಿದ್ದ. ಯುದ್ಧ ಕಾಲದಲ್ಲಿಯೂ, ವ್ಯಾಪಾರಸ್ಥರು, ಕಾರ್ಖಾನೆಯವರು, ಭಂಡವಾಳ ಶಾಹಿಗಳು ಸಂಪತ್ತನ್ನು ಶೇಖರಿಸುವ ಕೆಲಸದಲ್ಲಿಯೇ ನಿರತರಾಗಿದ್ದು ಹೇಗೆ ಬಡವರೊಡಲ ಬೆಂಕಿ ಹೆಚ್ಚಿಸಿ, ಅವರನ್ನು ಶೋಷಿಸುತ್ತಿರುವರೆಂಬು ದನ್ನು ಮಾತಿನಿಂಪಲೂ, ಅಭಿನಯದಿಂದಲೂ ಆವೇಶದಿಂದಲೂ ವರ್ಣಿಸು ತ್ತಿದ್ದ. ಬಡ ಕೂಲಿಗಾರರೆದೆಯ ರಕ್ತವುಂಡು ಭಂಡವಾಳಗಾರರು ಹೇಗೆ ದಿನದಿಂದ ದಿನಕ್ಕೆ ಕೊಬ್ಬುತ್ತಿದ್ದಾರೆಂಬುದನ್ನು ಮುಂದಟ್ಟಾಗುವಂತೆ ವಿವ ರಿಸುತ್ತಿದ್ದ. "ನಿಮ್ಮ ದುಡಿತದ ಫಲದಿಂದಲೇ ನಿಮ್ಮ ಮಾಲಿಕರು, ಭಂಡ ವಾಳಶಾಹಿಗಳು ದಿನದಿನವೂ ಕೊಬ್ಬುತ್ತಿದ್ದರೂ ನಿಮ್ಮನ್ನು ಮಾತ್ರ ಈ ರೀತಿ ಶೋಷಿಸುವುದು ಸರಿಯೇ ಹೇಳಿ" ನೆರೆದ ಜನರೊಡನೆ ಆತನು ಇದೊಂದು ಪ್ರಶ್ನೆ ಕೇಳಿದ! "ಅದು ಅನ್ಯಾಯ! ಶುದ್ಧ ಅನ್ಯಾಯ!" ಸಾವಿರಾರು ಕಂಠಗಳು ಒಮ್ಮೆಲೇ ಉತ್ತರಿಸಿದವು! "ಅದು ಅನ್ಯಾಯ ವೆಂದಿರಾ? ಹಾಗಾದರೆ ಅಂತಹ ಅನ್ಯಾಯವು ಹೆಡೆಯೆತ್ತದಂತೆ ಮುರಿ ದಿಕ್ಕಲು, ನಿಮ್ಮ ನ್ಯಾಯುವನ್ನು ಪಡೆಯಲು, ನಿಮ್ಮ ಏಳಿಗೆಯನ್ನು ಸಾಧಿ ಸಲು ನೀವೆಲ್ಲರಿಂದು ದೃಢನಿರ್ಧಾರ ಮಾಡಿರುವಿರೆಂಬುದನ್ನು ಕೈಚಪ್ಪಾಳೆ ಹೊಡೆದು ಒಮ್ಮೆ ತಿಳಿಸಬಲ್ಲಿರಾ?" ಇದು ಆತನದು ಎರಡನೆಯ ಪ್ರಶ್ನೆ. ಕರತಾಡನದ ರಣರಣಕವು ಮುಗಿಲು ಮುಟ್ಟುವಂತೆ ಎದ್ದಿತು. "ಈಗ ಹೇಳಿರಿ-ನಿಮಗೆ ಬೇಕಾದುದು ಇದೊಂದು ಮಾತ್ರ ಅಲ್ಲವೆ? ಅದೊಂದು ದೊರೆಯದೆ ನೀವು ತೃಪ್ತಿಹೊಂದಲಾರಿರಿ--ಅದು ಆಹಾರ. ಆಹಾರ ಮನುಷ್ಯನ ಜನ್ಮಸಿದ್ಧವಾದ ಹಕ್ಕು. ಇಂದು ದೊರೆವ ಆಹಾರ ನಿಮ್ಮ

ಬೆಂದೊಡಲಿಗೆ ಬಿಸಿನೀರೆರೆದಂತೆ ಆಗುತ್ತದೆ ಹೊಟ್ಟೆಯು ಹಸಿವಡಗಿಸು ವಸ್ತು ಆಹಾರ ಪಡೆಯಲು ನಿಮಗೆ ದೊರಕುವ ಸಂಬಳ ಸಾಲದು. ಮಾಲಿಕನು ನಿಮ್ಮ ಸಂಬಳ ಹೆಚ್ಚಿಸದಿದ್ದರೆ ನಿಮ್ಮ ಹಸಿವು ಅಡಗಿಸಲು ಸಾಧ್ಯವಿಲ್ಲ-ಸಾಧ್ಯವುಂಟೆ?" ಭಾಷಣಕಾರ ಮೂರನೆಯ ಸಲ ಪ್ರಶ್ನಿಸಿದ. "ಸಾಧ್ಯವಿಲ್ಲ! ಸಾಧ್ಯವಿಲ್ಲ!" ನೆರೆದ ಗುಂಪು ಆಗಲೂ ಗರ್ಜಿಸಿತು. "ಸಾಧ್ಯವಿಲ್ಲವೆಂದಿರಾ? ಸಂಬಳ ಹೆಚ್ಚಿಸಲೂ ಸಾಧ್ಯವಿಲ್ಲವೆಂದು ನಿಮ್ಮ ಮಾಲಿಕನು ಅಂದುಬಿಟ್ಟರೆ ನೀವಾಗ ಏನುಮಾಡಬಲ್ಲಿರಿ?" ಇದು ನೆರೆದ ಮಂದಿಯನ್ನು ಪರೀಕ್ಷಿಸುವ ಪ್ರಶ್ನೆಯಾಗಿತ್ತು! ಎಲ್ಲರೂ ಒಂದರೆಕ್ಷಣ ಮೂಕಮೌನದಲ್ಲಿ ಮುಳುಗಿಹೋದರು! "ನೀನು ಹೇಳಿದಂತೆ ಮಾಡು ತ್ತೇವೆ" ಅಲ್ಲಲ್ಲಿ ಕೆಲವು ಕ್ಷೀಣಸ್ವರಗಳು ಹೀಗೆಂದು ಗೊಣಗುಟ್ಟಿದವು. "ಓಹೋ-ಅಂತಹ ಸಂದರ್ಭದಲ್ಲಿ ಏನು ಮಾಡಬೇಕೆಂದು ನಿಮಗೆ ಗೊತ್ತಿಲ್ಲ. ಅದು ನಿಮಗೆ ತಿಳಿದಿದ್ದರೆ ಭಂಡವಾಳಶಾಹಿಯು ಹೀಗೆ ದಿನದಿಂದ ದಿನಕ್ಕೆ ಕೊಬ್ಬಿ ಹೆಡೆಯೆತ್ತಿ ನರ್ತಿಸುತ್ತಿರಲಿಲ್ಲ. ಹೀಗೆ ನೀವು ಕರಗುತ್ತಲೂ ಇರಲಿಲ್ಲ. ಈಗ ಹೇಳಿರಿ-ನಿಮ್ಮ ಏಳಿಗೆಗಾಗಿ, ನಿಮ್ಮ ನ್ಯಾಯಕ್ಕಾಗಿ, ನೀವು ಕಡೆತನಕ ಒಗ್ಗಟ್ಟಿನಿಂದ ನಡೆದುಕೊಳ್ಳುವಿರಲ್ಲವೆ?" ಅವರ ಸಮ್ಮತಿಬೇಕಾ ಗಿತ್ತು ಭಾಷಣಕಾರನಿಗೆ. "ಹೌದು, ನಮ್ಮ ಏಳಿಗೆಗಾಗಿ, ನಮ್ಮ ನ್ಯಾಯಕ್ಕಾಗಿ ಕಡೆತನಕ ಒಗ್ಗಟ್ಟು ಬಿಡಲಾರೆವು" ಹೀಗೆ ಎಲ್ಲರ ಸಮ್ಮತಿ ದೊರಕಿತು. "ಸಂಬಳ ಹೆಚ್ಚಿಸಲು ನಿಮ್ಮ ಮಾಲಿಕನು ಒಪ್ಪದಿದ್ದರೆ ನೀವೆಲ್ಲರೂ ಒಗ್ಗಟ್ಟಾಗಿ ಒಮ್ಮೆಲೇ ಕೆಲಸಕ್ಕೆ ಹೋಗಲು ಬಹಿಷ್ಕರಿಸ ಬೇಕು. ನಾನು ಖಂಡಿತವಾಗಿ ಹೇಳುತ್ತೇನೆ--ನೀವು ಮುಷ್ಕರ ಹೂಡ ಬೇಕು. ಹೀಗೆ ಎಲ್ಲರೂ ಒಮ್ಮೆಲೇ ಕೆಲಸಮಾಡಲು ಬಹಿಷ್ಕರಿಸಿದರೆ, ಕೆಲಸಕ್ಕೆ ಜನ ದೊರಕದೆ ಮಾಲಿಕನು ಕೊನೆಗೆ ನಿಮ್ಮ ಕೇಳಿಕೆಗೆ ಬಗ್ಗು ವನು. ಹೀಗೆ ನಿಮಗೆ-ಕೂಲಿಗಾರರಿಗೆ- ಜಯವಾಗುವುದು" ಪ್ರಚಂಡ ಕರತಾಡನದಿಂದ ಈ ಮಾತು ಸಮ್ಮತಿಸಲ್ಪಟ್ಟಿತು. ಅದೇ ಸ್ಥಳದಲ್ಲಿ, ನಾಳೆಗೆ 'ಕಮಿಟಿ'ಯೊಂದು ರಚಿತವಾಗಿ ಮಾಲಿಕನೊಡನೆ ಸಂಬಳ ಹೆಚ್ಚಿ ಸಲು ಕೇಳುವುದೆಂದೂ, ಆತನು ಒಪ್ಪದಿದ್ದರೆ ಎಲ್ಲರೂ ಮುಷ್ಕರ ಹೂಡು ವುದೆಂದೂ ನಿರ್ಧಾರ ಮಾಡಿ, ವಿಶಿಷ್ಟಾರಿದ ಗಲಭೆಯೊಡನೆ ಕೂಡಿದ ಮಂದಿಯೆಲ್ಲರೂ ತಮ್ಮತಮ್ಮ ಮನೆಗಳಿಗೆ ಹೊರಟುಹೋದರು.

ಗುಂಪುಕೂಡಿದ್ದ ಸಾವಿರಮಂದಿಯಲ್ಲಿ ಬೋರನೂ ಒಬ್ಬನಾಗಿದ್ದ. ಎಲ್ಲರೊಡನೆ ಆತನೂ ಕೈಚಪ್ಪಾಳೆ ಹೊಡೆಯುತ್ತಿದ್ದ; ಕೇಕೆ ಹಾಕುತ್ತಿದ್ದ; ನಗುತ್ತಿದ್ದ. ಭಾಷಣಕಾರನು ಹೇಳಿದ್ದೆಲ್ಲವೂ ಆತನಿಗೆ ಅರ್ಥವಾಗದಿದ್ದರೂ, ಅರ್ಥವಾದಷ್ಟನ್ನೂ ಆತನು ಗಂಭೀರವಾಗಿ 'ಗ್ರಹಿಸಿ'ಕೊಳ್ಳದಿದ್ದರೂ, ಕೊನೆಗೆ 'ಸಂಬಳ ಹೆಚ್ಚಿಸದಿದ್ದರೆ ಮುಷ್ಕರ ಹೂಡುವುದು' ಎಂಬ ನಿರ್ಧಾರಕ್ಕೆ ಬಂದಾಗ ಆತನ ಎದೆ ಒಮ್ಮೆ ನಡುಗಿಬಿಟ್ಟಿತು! 'ದನಿಯು ಸಂಬಳವನ್ನೂ ಹೆಚ್ಚಿಸಲಿಲ್ಲ; ನಾವು ಮುಷ್ಕರವನ್ನೂ ಬಿಡಲಿಲ್ಲ. ಹಾಗಾದರೆ ಮತ್ತೆ ನಮ್ಮ ಪಾಡೇನು? ಸುಬ್ಬಿಯ ಗತಿಯೇನು? ಮಗುವಿನ ಅವಸ್ಥೆಯೇನು?' ಈ ವಿಚಾರಗಳು ಆತನ ಮನದ ಶಾಂತಿಯನ್ನು ಕೆಡಿಸದಿರಲಿಲ್ಲ! ಆದರೆ ಇತ್ತೀಚೆಗೆ ಆಹಾರ ವಸ್ತುಗಳಿಗೆ ಕ್ರಯ ನೇರಿದ್ದರಿಂದ ತನಗೂ ತೊಂದರೆಯುಂಟಾಗಿರುವುದು ಆತನ ಅನುಭವಕ್ಕೆ ಚೆನ್ನಾಗಿ ಬಂದಿತ್ತು. ಬೋರ ಹೆಂಡತಿಯನ್ನು ಕೂಲಿಗೆ ಕಳುಹಿಸದೆ ತಾನೊಬ್ಬನೇ ದುಡಿದು ತಂದು ಸಂಸಾರ ಸಾಗಿಸುತ್ತಿದ್ದ. ಹಿಂದೆ ವಾರಕ್ಕೊಮ್ಮೆ—ಶನಿವಾರ ಸಂಜೆಗೆ—ಒಬ್ಬಿಬ್ಬರು ಗೆಳೆಯರನ್ನು ಕರೆದುಕೊಂಡು 'ಗಡಂಗು ಹತ್ತು'ತ್ತಿದ್ದರೆ, ಇತ್ತೀಚೆಗೆ ಗೆಳೆಯರನ್ನು ತಪ್ಪಿಸಿಕೊಂಡು ತಾನೊಬ್ಬನೇ 'ಗಡಂಗು ನುಗ್ಗಿ'ದರೂ ತೃಪ್ತಿ ಹೊಂದಲು ಆತನಿಗೆ ಆಗುತ್ತಿರಲಿಲ್ಲ. ಹಾಗಾಗಿ, ತನ್ನ ಸಂಬಳವೂ ಈಗ ಹೆಚ್ಚಾಗಬೇಕಾದುದು ಅವಶ್ಯವುಂಟೆಂದು ಬೋರ ಮನಗಂಡ. ಮಿಕ್ಕ ವಿಚಾರಗಳಿಗೆ, ಹತ್ತರೊಡನೆ ತಾನು ಹನ್ನೊಂದು ಎಂಬ ಸಮಾಧಾನ ಪಟ್ಟುಕೊಂಡು ರಾತ್ರೆ ಸುಮಾರು ಹನ್ನೊಂದು ಗಂಟೆಗೆ ಬೋರ ಮನೆಗೆ ಸೇರಿದ........

ಸುಬ್ಬಿ ಅಷ್ಟರಲ್ಲಿ ವಿಶೇಷ ಗಾಬರಿಗೊಂಡಿದ್ದಳು. ಬೋರ ಎಂದೂ ಇಷ್ಟು ತಡಮಾಡಿ ಬಂದವನಲ್ಲ. ಕತ್ತಲು ಕವಿಯುವ ಮುನ್ನ ಆತ ಮನೆಗೆ ಮುಟ್ಟುತ್ತಿದ್ದ. ಇಂದೇಕೆ ಇಷ್ಟು ತಡವಾಯಿತೆಂದು ಸುಬ್ಬಿ ಗಾಬರಿಗೊಂಡಳು. ಸಾಲದ್ದಕ್ಕೆ, ಬೆಳಗಿಂದಲೇ ಮಗುವಿಗೆ ಸ್ವಲ್ಪ ಜ್ವರವೂ ಬರುತ್ತಿತ್ತು. ಬೋರನ ವಿಳಂಬ—ಮಗುವಿನ ಜ್ವರ, ಇವೆರಡರಿಂದಾಗಿ ಸುಬ್ಬಿ ವಿಶೇಷ ಗಾಬರಿಗೊಳ್ಳಲು ಕಾರಣವಾಯಿತು. ಬೋರನ

ಮುಖದಲ್ಲೂ ಆಕೆ ಇಂದು ಎಂದಿನ ಉಲ್ಲಾಸವನ್ನು ಕಾಣಲಿಲ್ಲ. ಮತ್ತೆ ಮನೆಗೆ ಬಂದವನಿಗೇ ಬೋರನಿಗೆ ಮಗುವಿನ ಅಸ್ವಸ್ಥದ ಸುದ್ದಿಯೂ ತಿಳಿದು ಚಿಂತೆ ಮತ್ತಷ್ಟು ಹೆಚ್ಚಿತು. ಬೋರ ಮತ್ತು ಸುಬ್ಬಿ ಆ ರಾತ್ರಿಯನ್ನು—ತೆರೆದ ಕಣ್ಣುಮುಚ್ಚದೆ—ಎಂದೂ ಅನುಭವಿಸದ ಅಶಾಂತಿಯಿಂದ ದೂಡಿದರು............

ಮರು ದಿನವೂ ಮುಂಜಾವಕ್ಕೇ ಎದ್ದು ಬೋರ ಹಳಸಿದ ತಂಗಳನ್ನದ ತುತ್ತನ್ನು—ಹಸಿವಿಲ್ಲದಿದ್ದರೂ ಸುಬ್ಬಿ ಗಾಬರಿಪಟ್ಟು ಕೊಂಡಾಳೆಂದು—ಹೊಟ್ಟೆಗೆ ಹಾಕಿಕೊಂಡು, ಮಗುವಿಗೆ ಇನ್ನೂ ಜ್ವರ ಇಳಿಯದೆ ಇದ್ದ ಕಾರಣ, ಭಾರವಾದ ಹೃದಯದಿಂದಲೇ ಮನೆಬಿಟ್ಟು ಹೊರಟು ಹೋದ. ಎಂದಿಗಿಂತ ಇಂದು ಸ್ವಲ್ಪ ತಡವಾದ್ದರಿಂದ ಬೋರ ಜೋರಾಗಿ ದಾರಿ ಹಿಡಿದು ಸಾಗಿದ್ದ. ಹಾದಿಯ ಅಡ್ಡಬಂದ ಮರದ ಬೇರೊಂದು ಆತನ ಕಾಲಿಗೆ ಎಡವಿ ಬಿದ್ದು ಕಾಲಹೆಬ್ಬೆರಳುಗಳಿಗೂ, ಕೈಕಾಲ ಗಂಟುಗಳಿಗೂ ಬಲವಾಗಿ ಪೆಟ್ಟೂ ಆಯಿತು. ಮೇಲೆ ಮರದಲ್ಲಿ ‘ಕಾಗೆ ‘ಕಾ, ಕಾ, ಕಾ,’ ಎಂದು ಕಠೋರವಾಗಿ ಕೂಗುತ್ತಿತ್ತು. ಬಿದ್ದವನೇ ಬೋರ, ತಡಮಾಡದೆ ಎದ್ದು, ಕೈಕಾಲು ಮೈಗಳ ಧೂಳುಗಳನ್ನೊರಸಿಕೊಳ್ಳುತ್ತಾ ಕಾರ್ಖಾನೆಯ ಕೆಲಸಕ್ಕೆ ಹಾದಿ ಹಿಡಿದು ಸಾಗಿದ............

ಕಾರ್ಖಾನೆಯ ‘ಗೇಟ’ನ ಬಳಿ ಸ್ವಯಂಸೇವಕರು ಕೆಲವರು ‘ಪಿಕೆಟಿಂಗ್’ಗೆ ನಿಂತಿದ್ದರು. ಮಾಲಕನು ಕೂಲಿ ಹೆಚ್ಚಿಸಲು ಒಪ್ಪಲಿಲ್ಲವಾಗಿ ಕೂಲಿಗಾರ ಸಭೆಯವರು ಅಂದಿನಿಂದಲೇ ಮುಷ್ಕರ ಸಾರಿದ್ದರು. ಮುಷ್ಕರವನ್ನು ಎಲ್ಲರೂ ಒಮ್ಮತದಿಂದಲೂ, ದೃಢ ನಿರ್ಧಾರದಿಂದಲೂ ನಡೆಸಿ ಯಶಸ್ವಿಗೊಳಿಸಬೇಕೆಂದು, ಬರುತ್ತಿದ್ದ ಕೆಲಸಗಾರರೊಡನೆ ಸ್ವಯಂಸೇವಕರು ಪ್ರಾರ್ಥಿಸುತ್ತಿದ್ದರು. ಕೂಲಿಗಾರರ ಮುಂದಿನ ಹಿತದ ಸಲುವಾಗಿ, ಇಂದಿನ ಅವರ ನ್ಯಾಯದ ಸಲುವಾಗಿ ಈ ಹೋರಾಟವನ್ನು ನಿಶ್ಚಲ ನಿರ್ಧಾರದಿಂದ ಸಾಗಿಸಬೇಕೆಂದೂ ಎಲ್ಲರೊಡನೆಯೂ ಸೆರಗೊಡ್ಡಿ ಬೇಡಿಕೊಳ್ಳುತ್ತಿದ್ದರು...............

ಕೂಲಿಗಾರರಾರೂ ‘ಗೇಟ’ನ್ನು ದಾಟಿ ಕೆಲಸಕ್ಕೆ ಒಳಹೊಗುವ

ಸಾಹಸ ಮಾಡಲಿಲ್ಲ. ಕೆಲವರು ಸ್ವಯಂಸೇವಕರೊಡನೆ ತಾವೂ ಸೇರಿಕೊಂಡು ಪಿಕೆಟಿಂಗ್ ನಡೆಸಲು ಬೆಂಬಲವಿತ್ತರು. ಕೆಲವರು ಚಾ ಚೂ ಅನ್ನದೆ, ತಮ್ಮ ತಮ್ಮ ಮನೆಗಳ ಹಾದಿಹಿಡಿದು ಹೊರಟು ಹೋದರು. ಇನ್ನುಳಿದವರು ಚಿತ್ರದ ಪ್ರತಿಮೆಗಳಂತೆ ಇವೆಲ್ಲವನ್ನೂ ನಿಂತು ನೋಡುತ್ತಿದ್ದರು. ಬೋರ ಕೊನೆಯ ಪಂಗಡದವರಲ್ಲಿ ಒಬ್ಬನಾಗಿದ್ದ

ಅರ್ಧತಾಸು ದಾಟಿರಬಹುದು. ಒಂದು ಕಾರು, ಅದರ ಹಿಂದೆ ಕೂಲಿಯಾಳುಗಳನ್ನು ತುಂಬಿಸಿಕೊಂಡಿರುವ ಒಂದು ಲಾರಿ, ಇವೆರಡು ಕಾರ್ಖಾನೆಯ 'ಗೇಟಿ'ನ ಬಳಿ ಬಂದು ನಿಂತವು! ಎಲ್ಲರ ಎದೆಗಳಲ್ಲಿಯೂ ಉದ್ವೇಗ ಹೆಚ್ಚತೊಡಗಿತು. ಕಾರಿನಿಂದ ಕೆಲವರು ಇಳಿದರು. ಇಳಿದವರೇ 'ಪಿಕೆಟಿಂಗ್' ಮಾಡುತ್ತಿರುವವರೊಡನೆ ದಾರಿ ಬಿಟ್ಟುಕೊಡಬೇಕೆಂದು ಹೇಳಿ, ಕೆಲವರನ್ನು ಕೈರಟ್ಟೆ ಹಿಡಿದು ಅಚೀಚೆಗೆ ಸರಿಸಿದರು. ಆಗಲೇ ಗಾಬರಿಗೊಂಡಿದ್ದವರು ಅಲ್ಲಿಂದ ಚದರಿ ಹೋಗಿದ್ದರು. ಆಗ, ಯಾರಿಗೂ ಪಿಟ್ಟೆನ್ನಲು ಉಸಿರೆತ್ತಲು, ಧೈರ್ಯವಿರಲಿಲ್ಲ!

ಹಿಂದಿನ ದಿನ ಭಾಷಣ ಮಾಡಿದ ಯುವಕ—ಆತನೇ ಅವರ ಮುಂದಾಳು—ಆಗ ಪೋಲಿಸು ಅಧಿಕಾರಿಯ ಮುಂದೆ ಬಂದು ಹೇಳಿದ: "ಸ್ವಾಮಿ, ನೀವು ಹೋಗುವುದಕ್ಕೆ ಯಾರೂ ಆತಂಕ ಮಾಡುವುದಿಲ್ಲ. ನೀವು ಹೋಗಿರಿ; ನಿಮ್ಮ ಕಾರೂ ಸಾಗಲಿ. ಹಿಂದಿನ ಲಾರಿಯಲ್ಲಿ ತುಂಬಿಸಿ ತಂದ ಕೂಲಿಗಾರರನ್ನು ಇಳಿಸಿ. ಅವರಿಗೆ ಇಚ್ಛೆಯಿದ್ದರೆ ಅವರು ನಡೆದುಕೊಂಡು ಹೋಗುವುದಕ್ಕೆ ನಾವು ಆತಂಕ ಮಾಡಲಾರೆವು. ಆದರೆ ಕೂಲಿಗಾರರನ್ನು ಹೀಗೆ ಬಲಾತ್ಕಾರದಿಂದ ಲಾರಿಯಲ್ಲಿ ತುಂಬಿಸಿ ತಂದು ಕಾರ್ಖಾನೆಯೊಳಗೆ ಕೆಲಸ ಮಾಡಿಸಲು ಸಾಗಿಸುವಿರಾದರೆ ನಾವು ಆಕ್ಷೇಪಿಸದಿರಲಾರೆವು. ನೀವು ಕೂಲಿಗಾರರನ್ನು ತುಂಬಿಸಿಕೊಂಡೇ ಲಾರಿಯನ್ನು ಸಾಗಿಸುವಿರಾದರೆ, ನಾವು ಅದರ ಅಡ್ಡವಾಗಿ ಮಲಗಿ ನಮ್ಮ ಪ್ರಾಣಗಳನ್ನು ಬಲಿ ಕೊಡುವೆವು"–ಇಷ್ಟು ಮಾತುಗಳನ್ನು ಆತ ಹೇಳಿ ಮುಗಿಸಬೇಕಾದರೆ ಆತನನ್ನು ಕೆಲವು ಪೋಲೀಸರು ಬಂಧಿಸಿ ಅಲ್ಲಿಂದ ದೂರ ಕೊಂಡೊಯ್ದರು. ಕಾರು ಗೇಟನ್ನು ದಾಟಿತು. ಲಾರಿ ಅದರ ಹಿಂದಿನಿಂದ ಹೊರಟಿತು........

ಲಾರಿ–ಕೂಲಿಗಾರರನ್ನು ತುಂಬಿಸಿಕೊಂಡೇ!--ಕಾರ್ಖಾನೆಯೊಳಗೆ ಹೋಗಲು ಕಾರಿನ ಹಿಂದಿನಿಂದ ಹೊರಟಿತ್ತು! ಆಗ, ಆದರ ಎದುರು ನಿಲ್ಲುವ ಎದೆಗಾರರು ಯಾರೂ ಮುಂದೆ ಬರುವುದು ಕಾಣಲಿಲ್ಲ. ಚಿತ್ರದ ಪ್ರತಿಮೆಯಂತೆ ಇದೆಲ್ಲವನ್ನೂ ನಿಂತು ನೋಡುತ್ತಿದ್ದ ಬೋರನನ್ನು ಯಾವುದೋ ಒಂದು ತಡೆಯಲಾರದ ಆವೇಶವು ಕೆರಳಿಸಿಬಿಟ್ಟಿತು! ಬೋರ–ತನ್ನ ಮುಂದಿರುವ ಜನರನ್ನು ಚದರಿಸಿ--ದೊಪ್ಪನೆ ಲಾರಿಯ ಮುಂದಕ್ಕೆ ನೆಗೆದುಬಿಟ್ಟ!

○○ ○○ ○○ ○○

ಮುಷ್ಕರವು ಯಶಸ್ವಿಯಾಗಿ ಕೊನೆಗೊಂಡಿತು. ಕೂಲಿಗಾರರ ಕೇಳಿಕೆಯು ನ್ಯಾಯವಾದುದೆಂದು ಮನಗಂಡು ಮಾಲಿಕನು ಸಂಬಳ ಹೆಚ್ಚಿಸಲು ಒಪ್ಪಿಕೊಂಡನು. ಲಾರಿಯ ಡ್ರೈವರನ ಜಾಣ್ಮೆಗಾಗಿ ಆತನಿಗೆ ಸರಕಾರದಿಂದಲೂ, ಮಾಲಿಕನಿಂದಲೂ ಬಹುಮಾನಗಳು ದೊರೆತವು. ಬೋರ—ಈಗಲೂ ಅದೇ ಕಾರ್ಖಾನೆಯಲ್ಲಿ ಹಿಂದಿನಷ್ಟೇ ಉತ್ಸಾಹ ದಿಂದಲೂ ಶ್ರದ್ಧೆಯಿಂದಲೂ ದುಡಿಯುತ್ತಿದ್ದಾನೆ. ಬೋರನ ಮಗು ಆತನ ಮನೆಯ ಅಂಗಳದ ತುಂಬಾ ಹರಿದು ನಲಿದಾಡುತ್ತಿದೆ! ಸುಬ್ಬಿ ಆ ಮೇಲೆ ಒಮ್ಮೆಯೂ ಗಾಬರಿಗೊಂಡಿಲ್ಲ.

ಸ್ಥಾಪನೆ: 1930

'ಕಿರಿಯರ ಪ್ರಪಂಚ'ದ

'ತೊದಲ್ನುಡಿ ಗ್ರಂಥಮಾಲೆ'ಯ ಪುಸ್ತಕಗಳು.

೧ ಸ್ವತಂತ್ರ ಜೀವನೋಪಾಯ ಬೆಲೆ ೦-೩-೦

ಬರೆದವರು: ಶ್ರೀ. ಕೆ. ಹೊನ್ನಯ್ಯ ಶೆಟ್ಟಿ.

ಜೀವನದ ಹೋರಾಟವನ್ನು ಕಣ್ಣ ಮುಂದಿರಿಸಿ ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ನಾಟಕ.

'ಸಂವಾದದಲ್ಲೆಲ್ಲ ಪ್ರತಿಯೊಂದು ದೃಶ್ಯದಲ್ಲಿ, ಗಾದೆಗಳೂ ನಾನಾ ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ. ಶೈಲಿಯು ಚಲೋದಿದೆ.'

—ಕಂಠೀರವ.

೨ ಸಂಶಯಪಿಶಾಚಿ ಬೆಲೆ೦—೮—೦

ಬರೆದವರು: ಶ್ರೀ. ಕೆ. ಕೆ. ಶೆಟ್ಟಿ.

ಅಳಿಯ ಸಂತಾನಕಟ್ಟಿನ. ಮುಖ್ಯವಾಗಿ ಬಂಟ ಸಮಾಜದ ಸದ್ಯದ ನಡವಳಿಗೆಯನ್ನೂ ಅದರಿಂದುಂಟಾಗುವ ದುಷ್ಪರಿಣಾಮಗಳನ್ನೂ ಚಿತ್ತವೇದಕವಾಗಿ ಚಿತ್ರಿಸಿ ಸಮಾಜದೇಳಿಗೆಯ ಮಾರ್ಗವನ್ನು ಸೂಚಿಸುವ ನಾಟಕ.

"ಪಾತ್ರಗಳ ಸಂಭಾಷಣೆಯ ಪ್ರತಿ ಶಬ್ದವೂ ಭಾವಭರಿತವಾಗಿರುತ್ತದೆ ಇದು ಆಧುನಿಕ ಶೈಲಿಯಿಂದ ಮನೋರಂಜಕವಾಗಿದೆ."

—ಸ್ವದೇಶಾಭಿಮಾನಿ.

೩ ನಾಡಕತೆಗಳು ಬೆಲೆ ೦-೩-೦

ಬರೆದವರು: ವಿವಿಧ ಕತೆಗಾರರು.

'ಈ ಪುಸ್ತಕದಲ್ಲಿ ಬೇರೆಬೇರೆ ಜನರು ಬರೆದ ಸಮಾಜದ ಸ್ವಾಭಾವಿಕ ಚಿತ್ರಗಳನ್ನೊಳಗೊಂಡ ಕಥೆಗಳಿವೆ. 'ತಿರುಪತಿ ಮುಡುಪಿನ ಕಳವು' ಎಂಬುವದರಲ್ಲಿ ಬರುವ ಶೆಟ್ಟರು ಭಟ್ಟರು ಎಲ್ಲೆಲ್ಲಿಯೂ ನೋಡಲು ಸಿಕ್ಕುವರು..... 'ಶೆಟ್ರ ಮನೆಯ ಮದುವೆ' ಎಂಬ ಕತೆಯಲ್ಲಿ ಎಡೆಯಾಡುತ್ತಿದ್ದ

ಚುಚ್ಚು ನಗೆಯು ವಾಚಕರಿಗೆ ನಗೆಯೊಡನೆ ವೈಜುಮ್ಮನ್ನೂ ಹುಟ್ಟಿಸು ವುದು.... 'ಅಂದು ಇಂದು' ಎಂಬುದು ಸೊಗಸಾದ ಸಣ್ಣ ಕಥೆ. ಹೇಳುವ ಮಾತಿನ ರೀತಿಯೂ ಚೆನ್ನಾಗಿದೆ.... —ಜಯಕರ್ನಾಟಕ.

೪ ಕುಶಲವ ಬೆಲೆ ೦.೫-೦

ಬರೆದವರು: ಶ್ರೀ. ಕೆ. ಕೆ. ಶೆಟ್ಟರು.

ಹಳೆಯ ಕಥೆಯನ್ನು ಹೊಸ ಮಾದರಿಯಲ್ಲಿ ಎರಕ ಹೊಯ್ದ ಪೌರಾಣಿಕ ನಾಟಕವಿದು. ಈಗಿನ ಶಿಕ್ಷಣದಲ್ಲಿರುವ ದೋಷಗಳನ್ನು ಎತ್ತಿ ತೋರಿಸಿ, ಸುಧಾರಣೆಯ ಹಾದಿಯನ್ನು ಸೂಚಿಸುವ ಪುಸ್ತಕ.

೫ ಕಾವ್ಯ ಸಾಮ್ರಾಜ್ಯ (ದ್ವಿತೀಯಾವೃತ್ತಿ) ಬೆಲೆ ೦-೧೨-೦

ಬರೆದವರು: ವಿವಿಧ ಕವಿಗಳು.

(ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ಮುನ್ನುಡಿಯೊಡನೆ.)

'...ಆಧುನಿಕ ಕವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹ ವನ್ನು ಈ ವರೆಗೆ ಯಾರೂ ಒದಗಿಸಿಕೊಟ್ಟಿರುವುದಿಲ್ಲ. ಇದಕ್ಕಾಗಿ ಕನ್ನಡಿ ಗರು 'ಕಿರಿಯರ ಪ್ರಪಂಚ'ಕ್ಕೆ ಆಭಾರ ಮನ್ನಿಸಬೇಕು. . ಆದರೆ ಶಬ್ದ ದಿಂದಲ್ಲ; 'ಕಾವ್ಯ ಸಾಮ್ರಾಜ್ಯ'ವನ್ನು ಕೊಂಡುಕೊಂಡು ಧನರೂಪ ದಿಂದ'. —ಸಂಯುಕ್ತ ಕರ್ನಾಟಕ.

'....ಕರ್ನಾಟಕದ ಎಲ್ಲಾ ಪ್ರಾಂತ್ಯಗಳ ಕವಿಗಳ ಕೃತಿಗಳೂ ಇಲ್ಲಿ ಆಯ್ದು ಸೇರಿಸಲ್ಪಟ್ಟಿವೆ. ಕಥಕ, ವರ್ಣಕ, ಭಾವೋದ್ದ್ಯೋತಕವಾದ ಎಲ್ಲಾ ಬಗೆಯ ಕವಿತೆಗಳೂ ಸೇರಿವೆ....' — ಪ್ರಬುದ್ಧ ಕರ್ನಾಟಕ.

೬ ಮಧುವನ (ಕಥಾ ಸಂಗ್ರಹ) ಬೆಲೆ ೩-೦-೦

ಬರೆದವರು: ವಿವಿಧ ಕತೆಗಾರರು.

'...ಲೇಖಕಲೇಖಿಕೆಯರ ಭಾವಚಿತ್ರಗಳು, ಅವರ ಕೃತಿಗಳ ವಿಷ ಯದಲ್ಲಿ ವಿಮರ್ಶಾತ್ಮಕ ಟಿಪ್ಪಣಿಗಳು ಇವೆಲ್ಲ ಕೂಡಿ ಈ ಪುಸ್ತಕಕ್ಕೆ ಸಹಜವಾಗಿರುವ ಸೊಬಗನ್ನು ಹೆಚ್ಚಿಸಿವೆ. ಕಲೆಯ ದೃಷ್ಟಿಯಿಂದ ಇದೊಂದು ಉಚ್ಚ ತರಗತಿಯ ಕಥಾಸಂಗ್ರಹವಾಗಿದೆ.

—ವಿ. ಕೃ. ಗೋಕಾಕ.

೭ ಮುಂದಿನ ದೇವರು (ಪ್ರಬಂಧ) ಬೆಲೆ ೦—೩—೦

ಪುರಾತನ ಸಮಾಜದ ವ್ಯವಸ್ಥೆ ಹೇಗಿತ್ತು? ಇಂದಿನದು ಯಾವ ರೀತಿಯಲ್ಲಿದೆ? ಮುಂದೆ ಹೇಗಾಗಬೇಕು? ಎಂಬುದನ್ನು ವಿಚಾರಪೂರ್ಣ ವಾಗಿಯೂ ಸಂಕ್ಷೇಪವಾಗಿಯೂ ವಿವರಿಸುವ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟ ಪ್ರಬಂಧ.

೮ ವ್ಯಭಿಚಾರಿಣಿ ಯಾರು? (ನಾಟಕ) ಬೆಲೆ ೦—೧೨—೦

ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕವನ್ನೇ ಸಮಾಜವು ಪರ್ವತೀಕರಿಸಿ ಓರ್ವ ಸ್ತ್ರೀಯು-ಎಷ್ಟೊಂದು ನಿರ್ದುಷ್ಟಳೂ, ನಿಷ್ಕಳಂಕಳೂ ಆದರೂ ಅವಳನ್ನು ಹೇಗೆ ಬಹಿಷ್ಕರಿಸಿ ದೂರೀಕರಿಸುತ್ತದೆ? ಮತ್ತು ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನು ಹೇಗೆ ಕಡೆಗಣಿಸುತ್ತದೆ? ಎಂಬುದನ್ನು ಹೃದಯಭೇದಕವಾಗಿ ಚಿತ್ರಿಸುವ ವಿಚಾರಕ್ರಾಂತಿಕಾರಕ ನಾಟಕವಿದು. ಪವಿತ್ರ ಪ್ರೇಮವು ಎಂತಹ ಅಪ ಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜ ಯವು ನಿಶ್ಚಯವೆಂಬುದನ್ನು ಮನಗಾಣಿಸುವ ಶ್ರೀ. ಕೆ. ಕೆ. ಶೆಟ್ಟರು ಬರೆದ ನವೀನ ಸಾಮಾಜಿಕ ನಾಟಕ.

೯ ಹೆಂಡ್ತಿ ಗಂಡನಾದರೆ? (ಪ್ರಹಸನ) ಬೆಲೆ ೦—೪—೦

ಸ್ತ್ರೀಸ್ವಾತಂತ್ರ್ಯವನ್ನು ಮಾರ್ಮಿಕವಾಗಿ ಪ್ರತಿಪಾದಿಸುವ ಬೋಧ ಪರವೂ, ವಿಚಾರಪರವೂ, ವಿನೋದಪರವೂ ಆದ ಪ್ರಹಸನ. ಬರೆದವರು ಶ್ರೀ. ಕೆ. ಕೆ. ಶೆಟ್ಟರು.

೧೦ ಪುರುಷವಧು! (ಪ್ರಹಸನ) ಬೆಲೆ ೦—೪—೦

ಮುದುಕನ ಮದುವೆಯ ಭ್ರಾಂತಿಯನ್ನು ಉಚ್ಚಾಟಣೆ ಮಾಡಲು ನವಸುಧಾರಕ ತರುಣರು ಕೆಲವರು ಹೂಡುವ ಹಂಚಿಕೆಯನ್ನು ಚಿತ್ರಿಸುವ ಶ್ರೀ. ಕೆ. ಕೆ. ಶೆಟ್ಟರಿಂದ ರಚಿತವಾದ ಮನೋರಂಜಕ ಪ್ರಹಸನ.

೧೧ ಸನ್ಯಾಸಿಯು ಸೋಗಿನಲ್ಲಿ (ಕಾದಂಬರಿ) ಬೆಲೆ ೦-೮-೦

ವೇಶ್ಯಾಪುತ್ರಿಯಾದರೂ ನೀತಿವಂತ ಜೀವನ ನಡೆಸುವ ಮನಸ್ಸುಳ್ಳವಳಾದರೆ ಸಮಾಜವು ಅದಕ್ಕೆ ಹೇಗೆ ಅಡ್ಡಿಮಾಡಿ ಅವಳ ಜೀವನವನ್ನು ಕೆಡಿಸಲು ಕಾರಣವಾಗುವುದೆಂಬುದನ್ನು ಹೃದ್ಯಾವಕವಾಗಿ ಚಿತ್ರಿಸಿರುವ ನವೀನ ಸಾಮಾಜಿಕ ಕಾದಂಬರಿಯಿದು. ಬರೆದವರು ಶ್ರೀ ಕೆ. ಕೆ. ಶೆಟ್ಟರು.

೧೨ ನಂದಾದೀಪ (ಕಥಾಸಂಗ್ರಹ) ಬೆಲೆ ೦—೧೦—೦

ಬರೆದವರು: ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು

ಸ್ಥಳೀಕ ವಾತಾವರಣದ ಮೇಲಿಂದ ಬರೆಯಲ್ಪಟ್ಟ ಈ ಕಥೆಗಳಂತೂ ಬೋಧಪ್ರದವಾಗಿದ್ದು ಓದುಗರ ಮನಸ್ಸನ್ನು ಮಾರ್ಪಾಟಮಾಡುವಂತಿವೆ.

—ಸಂಯುಕ್ತ ಕರ್ನಾಟಕ.

ಶ್ರೀ. ಶ್ರೀನಿವಾಸರಾಯರ ಕತೆಗಾರಿಕೆಯಲ್ಲಿ ಕಲಾಪೂರ್ಣತೆಯಿದೆ. ಲೇಖನದ ಶೈಲಿಯಲ್ಲಿ ಇಂಪು, ಮೆಲ್ಪು ಮೈಗೂಡಿದೆ —ಪ್ರಭಾತ.

೧೩ ದೇಶಭಕ್ತ (ರಾಜಕೀಯ ನಾಟಕ) ಬೆಲೆ೦—೧೪—೦

ಬರೆದವರು: ಶ್ರೀ. ಕೆ. ಕೆ. ಶೆಟ್ಟರು.

ಇದೊಂದು ಸಾಮಾಜಿಕ ನಾಟಕ. ಸಮಾಜದಲ್ಲಿ ನಡೆಯುತ್ತಿರುವ ವಿಷಯುಗಳನ್ನೆತ್ತಿಕೊಂಡು ಜನರಿಗೆ ಮಂದಟ್ಟಾಗುವಂತೆ ಸುಲಭವಾದ ಶೈಲಿಯಲ್ಲಿ ಬೋಧಪ್ರದವಾದ ಈ ನಾಟಕವನ್ನು ಶ್ರೀ. ಶೆಟ್ಟರು ಬರೆದಿದ್ದಾರೆ. 'ದೇಶಭಕ್ತ'ನು ಹೇಗಿರಬೇಕು? ಅವನ ಧ್ಯೇಯ ಧೋರಣೆಗಳು ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನ ಸೇವೆ ಎಂದರೇನು? ಎಂಬುದೇ ಈ ನಾಟಕದ ಮುಖ್ಯ ಗುರಿಯಾಗಿದೆ. ಅವನ್ನು ಕೌಶಲ್ಯದಿಂದ ಚಿತ್ರಿಸಿ ಸಂಸ್ಥಾನದಲ್ಲಿ ನರೇಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಸಾಗಿಸಿದರೆ ಪ್ರಜಾಸ್ವಾತಂತ್ರ್ಯವು ಎಲ್ಲೆಲ್ಲಿಯೂ ಸಾಧ್ಯವಿದೆಯೆಂಬುದನ್ನು ಶ್ರೀ. ಶೆಟ್ಟರು ಸಾಕಷ್ಟು ಸ್ಪಷ್ಟಮಾಡಿದ್ದಾರೆ. —ಸಂಯುಕ್ತ ಕರ್ನಾಟಕ.

ಸರಳವಾದ ಭಾಷೆಯಿಂದ, ಸರಸವಾದ ಸಂಭಾಷಣೆಗಳಿಂದ ನಾಟಕ ಬಹು ಸ್ವಾರಸ್ಯವಾಗಿದೆ. —ಪ್ರಜಾಮತ.

೧೪ ಪ್ರೇಮವಿಜಯ (ನಾಟಕ) ಬೆಲೆ ೦—೧೨—೦

ಹಿಂದು ಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರಪ್ರಚೋದಕ ನಾಟಕ. ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು. ತಡೆಯಾಗಿ ನಿಂತಲ್ಲಿ ಅದು ಪ್ರೇಮಪ್ರವಾಹದ ಸೆಳೆತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ-ಎಂಬುದು ಪ್ರೇಮವಿಜಯದಲ್ಲಿ ಬಂದಿದೆ. ಇದು ಅಭಿನಯನಕ್ಕನುಕೂಲವಾಗಿ ಬರೆದ ನಾಟಕ. ಅಂತೆಯೇ ಒಂದು ಜೀವನ ನಾಟಕ. ಶ್ರೀ. ಕೆ. ಕೆ. ಶೆಟ್ಟರಿಂದ ವಿರಚಿತವಾದುದು.

೧೫ ರಂಗಭೂಮಿ (ನಾಟಕ) ಬೆಲೆ ೦—೮-೦

ಬರೆದವರು: **ಶ್ರೀ. ಎಸ್. ವೆಂಕಟರಾಜರು.**

'ರಂಗಭೂಮಿ'ಯೆಂಬ ಹೆಸರೇ ನಾಟಕದ ನಾಟಕತ್ವವನ್ನು ಸಾರುತ್ತದೆ. ಲೇಖಕರು ನಾಟಕಗಳ ವಸ್ತು, ಪಾತ್ರ, ಸ್ವರೂಪ, ಸನ್ನಿವೇಶ, ಸಂಭಾಷಣೆ, ನಟನೆಗಳ ವಿಷಯ ಸೂಕ್ಷ್ಮವಾದರೂ ವಿಚಾರಗರ್ಭಿತವಾದ ಮುನ್ನುಡಿ ಬರೆದಿದ್ದಾರೆ.

ಬ್ರಾಹ್ಮಣ ರಂಗಾಚಾರಿ ಸಂಪಾದನೆಗೇನೂ ದಾರಿಯಿಲ್ಲದೆ, ಹೆಂಡತಿಯ ಚಿನ್ನಾಭರಣ ಮಾರಿ ನಾಟಕ ಕಂಪೆನಿ ಸುರುಮಾಡುತ್ತಾನೆ; ತನ್ನ ನಾಟಕ ಕಂಪೆನಿಯ ನಟಿ ಮಿಸ್. ಮಾಧುರಿಯ ಬಲೆಗೆ ಬಿದ್ದು ಸರ್ವಸ್ವವನ್ನೂ ಕಳಕೊಂಡು ಕೊನೆಗೆ ದಿವಾಳಿಯಾಗುತ್ತಾನೆ. ಇವಿಷ್ಟು ಸೂಕ್ಷ್ಮವಾಗಿ 'ರಂಗಭೂಮಿ'ಯ ಸಾರಾಂಶ. ಕಥಾಪಾತ್ರಗಳ ಮೂಲಕ, ಹಲವು ಸನ್ನಿವೇಶಗಳ ಮೂಲಕ, ಸಂಭಾಷಣೆಯ ಮೂಲಕ ನಾಟಕಕಾರರು ಈ ವಿಡಂಬನೆಯನ್ನು ಯಶಸ್ವಿಗೊಳಿಸಲು ಪ್ರಯತ್ನಿಸಿದ್ದಾರೆ.

–ಸ್ವದೇಶಾಭಿಮಾನಿ.

೧೬ ಸೇವಾಪಥ (ನಾಟಕ) ಬೆಲೆ ೦—೮—೦

ಮೂಲ ಲೇಖಕರು: **ಶೇಠ್ ಗೋವಿಂದದಾಸ್,** ಎಂ.ಎಲ್.ಎ., ಸೆಂಟ್ರಲ್

ಅನುವಾದಕರು: **ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ.**

'ಸೇವಾಪಥ'ದ ಕಥೆ-ಭಾರತದ ಆಧುನಿಕ ರಾಜಕೀಯ ವಾತಾವರಣದಿಂದ ಕಲ್ಪಿತವಾದುದು. ಮೂವರು ವಿದ್ಯಾವಂತ ಯುವಕರು ಬೇರೆಬೇರೆ ಆದರ್ಶಗಳನ್ನು ಹಿಡಿದು ಸಾಗುತ್ತಾರೆ. ಕೊನೆಗೆ ಮೂವರೂ ತಮ್ಮ ಆದರ್ಶಗಳ ಉಚ್ಚ ನೀಚತೆಗಳನ್ನು ಅರಿತುಕೊಳ್ಳುತ್ತಾರೆ. ಈ ಮೂರು ಭಿನ್ನಮಾರ್ಗಗಳ ಪುರುಷ ವ್ಯಕ್ತಿಗಳಿಗೆ ದೀನಾನಾಥನ ಪತ್ನಿ ಸರಳೆ, ಶ್ರೀನಿವಾಸನ ಪತ್ನಿ ಕಮಲೆ, ಶಕ್ತಿಪಾಲನ ಆಂಗ್ಲಪತ್ನಿ ಮಾರ್ಗರೇಟ್ ಈ ಮೂರು ಭಿನ್ನರುಚಿಯ ಸ್ತ್ರೀವ್ಯಕ್ತಿಗಳನ್ನೂ ಜೋಡಿಸಿ ಲೇಖಕರು ನಾಟಕ ರೂಪದಲ್ಲಿ ಸ್ಥಾಪಿಸಹೋದ ಸಿದ್ಧಾಂತಕ್ಕೆ ಪೋಷಣೆಯಿತ್ತಿರುವರು'.

—ಸ್ವದೇಶಾಭಿಮಾನಿ.

೧೭ ನಾರೀಹೃದಯ (ಕಥೆಗಳು) ಬೆಲೆ ೦—೧೨—೦

ಲೇಖಿಕೆ: **ಶ್ರೀಮತಿ ಶಿವರಾಣಿ ದೇವಿ.**

ಅನುವಾದಕರು: **ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ,**

'ಹಿಂದಿಯಲ್ಲಿ ಪ್ರಸಿದ್ಧ ಕಥೆಗಾರರೆಂದು ಹೆಸರುಪಡೆದ ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ ಶ್ರೀಮತಿ ಶಿವರಾಣಿ ದೇವಿಯವರ ಹದಿನಾಲ್ಕು ಕಥೆಗಳ ಕನ್ನಡ ಅನುವಾದವಾದ 'ನಾರೀಹೃದಯ'ವನ್ನು ಪ್ರಕಟಿಸಿ 'ಕಿರಿಯರ ಪ್ರಪಂಚ'ವು ನಾರೀ ಪ್ರಪಂಚಕ್ಕೆ ಗೌರವ ಮತ್ತು 'ಶಿವಶ್ರಿ' ತೋರಿರುವುದು ಸಮಂಜಸವಾಗಿದೆ. ಅನುವಾದ ತೃಪ್ತಿಕರವಾಗಿದೆ. ಪುಸ್ತಕದ ಅಚ್ಚು ಮತ್ತು ಕಟ್ಟು ಚೆಲುವಾಗಿವೆ'.

—ಸ್ವದೇಶಾಭಿಮಾನಿ.

೧೮ ಭಾರತೀಯ ಕಥೆಗಳು (ಕತೆಗಳು) ಬೆಲೆ ೦—೧೪—೦

ಶ್ರೀ ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್., ಇವರು ಇಂಗ್ಲಿಷಿನಲ್ಲಿ ಬರೆದ **Tales of Ind** ಎಂಬ ಕಥಾವಳಿಯ ಕನ್ನಡ ಅನುವಾದ.

ಅನುವಾದಕರು: **ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.**

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತನಾದ ಉಪಮೆ, ಗಾದೆ, ಕಥೆ, ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಗ್ರಂಥ.

೧೯ ಪ್ರಕಾಶ (ನಾಟಕ) ಬೆಲೆ ೧-೧೨-೦

ಮೂಲಲೇಖಕರು: **ಶೇಠ್ ಗೋವಿಂದದಾಸ್, ಎಂ. ಎಲ್. ಎ.**

ಅನುವಾದಕಿ: **ಶ್ರೀಮತಿ ಸರಸ್ವತಿಬಾಯಿ ರಾಜವಾಡೆ.**

ಹಿಂದೀ ಸಾಹಿತ್ಯದ ವಿದ್ವಾಂಸರೂ, ಶ್ರೇಷ್ಠ ನಾಟಕಕಾರರೂ, ಉಚ್ಚ ತರಗತಿಯ ಕಲಾಕಾರರೂ ಆದ ದೇಶಭಕ್ತ ಗೋವಿಂದದಾಸರ ನಾಟಕವೆಂದಮೇಲೆ ಹೆಚ್ಚಿಗೆ ಹೇಳತಕ್ಕದ್ದೇನೂ ಇಲ್ಲ. ಭಾವನೆ, ವಿಚಾರ ಮತ್ತು ಮಾನವೀಯ ಅನುಭೂತಿಗಳಿಂದ ತುಂಬಿತುಳುಕುತ್ತಿರುವ ರಾಜಕೀಯ-ಸಾಮಾಜಿಕ ನಾಟಕ.

೨೦ ಮೂರು ಪ್ರಹಸನಗಳು ಬೆಲೆ ೦-೧೪-೦

ಬರೆದವರು: **ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.**

ಓದಿದರೂ ಅಭಿನಯಿಸಿದರೂ ಸ್ವಾರಸ್ಯವಾಗಿ ತೋರುವ ಮೂರು ಪ್ರಹಸನಗಳ ಸಂಗ್ರಹ. ನಗಿಸಿ, ವಿಚಾರವೆಬ್ಬಿಸುವ, ವಿಚಾರವೆಬ್ಬಿಸಿ ನಗಿಸುವ ಸಾಮಾಜಿಕ ವ್ಯಕ್ತಿ ಸನ್ನಿವೇಶಗಳು ನಿಮ್ಮ ಕಣ್ಮುಂದೆ ಬಂದು ನಿಂದಂತಾಗುತ್ತವೆ. ನೀವು ಈ ಪುಸ್ತಕವನ್ನು ತೆರೆದರೆ ಪೂರಾ ಓದದೆ ಕೆಳಗಿಡುವಂತಿಲ್ಲ. ಹಾಗಿವೆ ಕೊರಡ್ಕಲ್ಲರ ಲೇಖನಿಯ ವೈಖರಿ, ವಿಚಾರ ಸರಣಿ, ಶೈಲಿಯ ಸ್ವಾರಸ್ಯ ಈ ಪುಸ್ತಕದಲ್ಲಿ.

೨೧ ನಗೆನೋಟಗಳು ಬೆಲೆ ೦-೧೨-೦

ಬರೆದವರು: ಶ್ರೀ. ಕೆ. ವಿಟ್ಠಲ ಶೆಣೈ, ಬಿ. ಎ. ಎಲ್. ಟಿ.

ನಗಿಸಿನಗಿಸಿ ವಿಚಾರವೆಬ್ಬಿಸುವ ೧೧ ವಿನೋದ ಚಿತ್ರಗಳ ಸಂಗ್ರಹ.

೨೨ ಅನ್ನದೇವರು ಮತ್ತು ಇತರ ಕತೆಗಳು

ಬೆಲೆ ೦-೧೨-೦

ಬರೆದವರು: ಶ್ರೀ. ಕೆ. ಕೆ. ರೈ, ವಿದ್ವಾನ್.

ಬೋಧಪ್ರದವೂ ವಿಚಾರಪ್ರದವೂ ಆದ ಮೇಲ್ತರಗತಿಯ ಕತಾ ಸಂಗ್ರಹ.

ಮುಂದೆ ಬರಲಿರುವ ಪುಸ್ತಕಗಳು:

೨೩ ಭಾರತದಲ್ಲಿ ಜಾತಿಭೇದ

(ಭಾಷಾಂತರ)

೨೪ ಶ್ರೀ. ಶಿವರಾಮ ಕಾರಂತರ ಏಕಾಂಕ ನಾಟಕಗಳ ಸಂಗ್ರಹವೊಂದು.

೨೫ ಶ್ರೀ. ಎಸ್. ಎಲ್. ಸುಬ್ರಹ್ಮಣ್ಯರ ಕತಾಸಂಗ್ರಹವೊಂದು.

ವಿಕ್ರಯಾಧಿಕಾರಿಗಳು:

ನವಭಾರತ ಪುಸ್ತಕ ಭಂಡಾರ,

ಉಡುಪಿ.

N. P. U. 4000/'41.

ವಿಕ್ರಯಾಧಿಕಾರಿಗಳು:

ನವಭಾರತ ಪುಸ್ತಕ ಭಂಡಾರ,

ಉಡುಪಿ.